


# ಪರಿಸರೀಯ ನ್ಯಾಯಕ್ಕಾಗಿ


## ಒಂದು ಅಭ್ಯಾಸ ಪುಸ್ತಕ

ಆವೃತ್ತಿ 2.0

ಸೆಂಟರ ಪಾರ್ ಪೊಲಿಸಿ ರಿಸರ್ಚ್ (ಸಿ. ಪಿ. ಅರ್) - ನಮತಿ ಪರಿಸರ ನ್ಯಯ ಯೋಜನೆ

CENTRE FOR POLICY RESEARCH

NAMATI INNOVATIONS IN LEGAL EMPOWERMENT




ಒರಿಸ್ಸಾರಾಜ್ಯದ ಕ್ಯೋಂಝರ್ ನಲ್ಲಿ ಪೂರಕ ಕಾನೂನು ತಜ್ಞರ ತರಬೇತಿ


ಡಿಸೆಂಬರ್ 2017

| | |
|---|---|
| ಗ್ರಂಥ ಭಾಗ | ಮಂಜು ಮೆನನ್, ಮೀನಾಕ್ಷಿ ಕಪೂರ್, ವಿವೇಕ್ ಮಾರು, ಕಾಂಚಿ ಕೊಹ್ಲಿ |
| ಸಂಪಾದಕೀಯ ಮತ್ತು ಆಡಳಿತಾತ್ಮಕ ಸಹಾಯ | ಪ್ರೀತಿ ಶ್ರೀ ವೆಂಕಟ್ರಾಮ್, ಸತ್ನಮ್ ಕೌರ್, ಕೃತ್ತಿಕಾ ದಿನೇಶ್ |
| ಛಾಯಾಚಿತ್ರಗಳು: | ಅಬ್ರೆ ವೆಡ್, ಭರತ್ ಪಟೇಲ್, ಕಾಂಚಿ ಕೊಹ್ಲಿ, ವಿನೋದ್ ಪಟಗಾರ್,<br>ಲಲಿತ್ ಪಾತ್ರಾ, ಮಹಾಬಲೇಶ್ವರ ಹೆಗಡೆ |
| ವಿನ್ಯಾಸ | ವಾಣಿ ಸುಬ್ರಮಣಿಯನ್ |
| ಬೆಂಬಲ | ಇಂಟರ್ ನ್ಯಾಷನಲ್ ಡೆವೆಲಪ್ ಮೆಂಟ್ ರಿಸರ್ಚ್ ಸೆಂಟರ್, ಕೆನಡಾ, ಈ ಸಂಸ್ಥೆಯು ನೀಡಿದ ಕೊಡುಗೆಯ ನೆರವಿನಿಂದ ಈ ಕಾರ್ಯ ವನ್ನು ನಿರ್ವಹಿ ಸಲಾಯಿತು. |



ಈ ಕೈಪಿಡಿಯನ್ನು ವಿನಿಮಯ ಮಾಡಲು, ಅನುವಾದ ಮಾಡಲು ಹಾಗು ವಿತರಿಸಲು ಮುಕ್ತರಾಗಿರುತ್ತೀರಿ. ನಾವು ಈ ಪ್ರತಿಯ ಮೂಲವನ್ನು ಉಲ್ಲೇಖಿಸಬೇಕಾಗಿ ಹಾಗು ನಿಮ್ಮ ಮರು ಮುದ್ರಣದ ಪ್ರತಿ / ಅಂತರ್ಜಾಲ ಕೊಂಡಿಯನ್ನು,ವರದಿ ಅಥವಾ ಅನುವಾದವನ್ನು ಸಿ.ಪಿ.ಅರ್- ನಮತಿ'ಗೆ ಕಳುಹಿಸಬೇಕಾಗಿ ಕೋರಿಕೊಳ್ಳುತ್ತೇವೆ.  ನೀವು ಸಿದ್ಧಪಡಿಸಿದ ವಿಷಯ / ಮಾಹಿತಿ ಗಳನ್ನು ಇತರ ವೃತ್ತಿಗಾರರಲ್ಲಿ  ಪ್ರಸರಿಸಲು ಹರ್ಷಿಸುತ್ತೇವೆ

## ದ ಸೆಂಟರ್ ಫಾರ್ ಪಾಲಿಸಿ ರಿಸರ್ಚ್ (ಸಿ ಪಿ ಆರ್) – ನಮತಿ ಪರಿಸರ ನ್ಯಾಯ ಯೋಜನ ಕಾರ್ಯಕ್ರಮ.

ಸಿ ಪಿ ಆರ್ - ನಮತಿ ಪರಿಸರ ನ್ಯಾಯ ಕಾರ್ಯಕ್ರಮವು ಪರಿಸರ ವಿಧಿ ನಿಯಮಗಳ ಅನುಸರಣೆಯಲ್ಲಿ ಕಂಡುಬರುವ ಅಂತರ / ವ್ಯತ್ಯಾಸಗಳನ್ನು ಪೂರೈಸುವ ಒಂದು ಪ್ರಯತ್ನವಾಗಿರುತ್ತದೆ. ಧೃಢವಾದ ಕಾನೂನುಗಳನ್ನು ಜಾರಿಗೆ ತಂದಿರುವ, ಆದರೆ, ಆ ಕಾನೂನುಗಳ ಅನುಸರಣೆ ತಿರಸ್ಕರಣೀಯ ಎಂದು ದಾಖಲಾಗಿರುವ ಭಾರತ ದೇಶದಲ್ಲಿ ಈ ಕಾರ್ಯಕ್ರಮವು ಪ್ರಸ್ತುತದಲ್ಲಿ ಕಾರ್ಯಾಚರಣೆಯಲ್ಲಿದೆ. ಪರಿಸರ ಕಾನೂನುಗಳ ಉಲ್ಲಂಘನೆ ಮತ್ತು ಅನನುಸರಣೆಯು ಪರಿಸರದ ಮೇಲೆ, ಅಲ್ಲದೆ, ತಮ್ಮ ಜೀವನೋಪಾಯಕ್ಕಾಗಿ ನೇರವಾಗಿ ಆ ಪರಿಸರವನ್ನು ಅವಲಂಬಿಸಿರುವ ಜನಗಳ ಜೀವನದ ಮೇಲೆ ಮತ್ತು ಅಲ್ಲಿನ ಪ್ರಜೆಗಳ ಆರೋಗ್ಯದಮೇಲೆ ಕೂಡ ನಿಜವಾದ ಹಾಗೂ ಗಂಭೀರವಾದ ಆಘಾತವನ್ನುಂಟು ಮಾಡುತ್ತದೆ. ಈ ಕಾರ್ಯಕ್ರಮವು, ಅನನುಸರಣೆ ಆಗಿರುವ ಪ್ರಕರಣಗಳನ್ನು / ಮೊಕದ್ದಮೆಗಳನ್ನು ಸಂಬಂಧಿತ ಸರ್ಕಾರೀ ಅಭಿಕರಣಗಳ (ಏಜೆನ್ಸಿ) ಮತ್ತು ಸಂಸ್ಥೆಗಳ ಗಮನಕ್ಕೆ ತರುತ್ತಾ ಪರಿಸರೀಯ ಆಘಾತಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದರಲ್ಲಿ ತೊಡಗಿರುತ್ತದೆ. ಈ ಕಾರ್ಯಕ್ರಮವು, ಪರಿಸರೀಯ ಕಾನೂನುಗಳ ಅನುಸರಣೆಯ ಸ್ಥಿತಿಗತಿಯನ್ನು ಪತ್ತೆಹಚ್ಚಲು ಸಂಬಂಧಪಟ್ಟ ಪ್ರಕರಣ / ಮೊಕದ್ದಮೆಗಳ ದತ್ತಾಂಶವನ್ನು (ಡೇಟಾ) ಸಹ ಸಂಗ್ರಹಿಸುತ್ತದೆ. ಪರಿಸರೀಯ ಕಾನೂನುಗಳ ಮತ್ತು ರಾಜ್ಯನೀತಿ ಸಂಸ್ಥೆಗಳ ಸದುಪಯೋಗವನ್ನು ಸಮರ್ಥಿಸಲು ಈ ದತ್ತಾಂಶವನ್ನು ಬಳಸಲಾಗುತ್ತದೆ.

### ಕಾರ್ಯಕ್ರಮದ ಉದ್ದೇಶಗಳು

1. ಸುಧಾರಿತ ಅನುಸರಣೆ
2. ಬಾಧಿತ ಸಮುದಾಯಗಳಿಗೆ ಪರಿಹಾರೋಪಾಯಗಳು
3. ಸಂಧಿಕಾಲದ ಸಂರಕ್ಷಣೆಗೆ ಧೃಢವಾದ ಸಾಂಸ್ಥಿಕ ಬೆಂಬಲ

# ಪರಿವಿಡಿ


ಭಾಗ 1

ಸಮುದಾಯ ಪೂರಕ ಕಾನೂನು ತಜ್ಞ ಯಾರು? 02

ಸಮುದಾಯ ಪೂರಕ ಕಾನೂನು ಕಾರ್ಯಕ್ರಮದ ಪ್ರಯೋಜನಗಳೇನು? 04

ಭಾಗ 2

ಪರಿಸರೀಯ ನ್ಯಾಯಕ್ಕೆ ಸಮುದಾಯ ಪೂರಕ ಕಾನೂನು ತಜ್ಞರು ಏನೇನು ಮಾಡಬಲ್ಲರು? 05

ಪ್ರಕರಣಗಳಿಂದ ಮೊದಲ್ಗೊಂಡು ನೀತಿಯ ವರೆಗೂ 09

ಭಾಗ 3

ಪರಿಸರೀಯ ನ್ಯಾಯದ ಪ್ರಕರಣಗಳನ್ನು ಪೂರಕ ಕಾನೂನು ತಜ್ಞರು ಹೇಗೆ ಪರಿಹರಿಸುತ್ತಾರೆ? 12

3.1 ಪ್ರಕರಣದ ಆಯ್ಕೆ ಮತ್ತು ಗುರುತಿಸುವಿಕೆ 14

ಬಾಧಿತ ಜನರನ್ನು ಮತ್ತು ಸಕ್ರಿಯ ಕಕ್ಷಿಗಾರರನ್ನು/ಸಮುದಾಯ ಸಹಭಾಗಿಗಳನ್ನು ಗುರುತಿಸುವುದು 15

ಹಿಂದೆ ಮಾಡಿದ ಪ್ರಯತ್ನಗಳ ಬಗ್ಗೆ ಮಾಹಿತಿಯನ್ನು ಒಟ್ಟುಗೂಡಿಸುವುದು 17

ಸಮಸ್ಯೆಯ ನಿರೂಪಣೆಯನ್ನು ಸಿದ್ಧಪಡಿಸುವುದು 18

3.2 ಪ್ರಕರಣ ದಾಖಲಾತಿ 21

ಪ್ರಕರಣವನ್ನು ಪಥ್ಯೀಕರಿಸುವ (ಟ್ರ್ಯಾಕಿಂಗ್) ಫಾರಮು 22

ಪೂರಕ ಕಾನೂನು ತಜ್ಞರ ಕ್ರಮಗಳ ಪ್ರಗತಿಯ (ವ್ಯವಸ್ಥಿತ) ದಾಖಲೆ (ಲಾಗ್) 24

ಪ್ರಕರಣದ ಕಡತ 25

ಮುನ್ನೆಚ್ಚರಿಕೆಗಳು

3.3 ಪ್ರಕರಣದ ವಿಶ್ಲೇಷಣೆ ಮತ್ತು ಕ್ರಮ 26

ಪ್ರಕರಣವನ್ನು ವಿಶ್ಲೇಷಿಸುವುದು 27

ಪ್ರಕರಣಗಳನ್ನು ಪರಿಹರಿಸಲು ಕಾರ್ಯತಂತ್ರಗಳು 28

- ಕಾನೂನುಗಳ ಬಗ್ಗೆ ಅರಿವನ್ನು ಮೂಡಿಸುವುದು 29
- ಮಾಹಿತಿಗಳನ್ನು ಕಲೆಹಾಕುವುದು ಮತ್ತು ಸಾಕ್ಷ್ಯಾಧಾರಗಳನ್ನು ಸಂಕಲಿಸುವುದು 30
- ಉದ್ದೇಶಪೂರ್ವಕ ಚರ್ಚೆಗಳು 31
- ಪ್ರಾಧಿಕಾರಗಳನ್ನು ಮತ್ತು ಸಂಸ್ಥೆಗಳನ್ನು ಸಂಧಿಸುವುದು 32
- ಸಾಂಸ್ಥಿಕ ಸಹಾಯಕರನ್ನು ಗುರುತಿಸುವುದು 33
- ಮನವಿ ಪತ್ರಗಳನ್ನು / ದೂರು ನೀಡುವ ಪತ್ರಗಳ ಕರಡನ್ನು ಸಿದ್ಧಗೊಳಿಸುವುದು 34
- ಸ್ಥಳೀಯ ಮಾಧ್ಯಮಗಳಲ್ಲಿ ವರದಿ ಮಾಡುವುದು 35
- ಮಧ್ಯಸ್ಥಿಕೆ 36

ಮುನ್ನೆಚ್ಚರಿಕೆಗಳು 37

3.4 ಪ್ರಕರಣದ ವರದಿ 40

ಮೂಲಭೂತ ಅಂಶಗಳು.

ಇತಿಹಾಸ 41

ಪರಿಹಾರ

ಕಾರ್ಯವಿಧಾನಗಳು

ಲಾಭ / ಪ್ರಯೋಜನಗಳು

ಭಾಗ 4

ಕಾನೂನು ಸಬಲೀಕರಣದ ಮೂಲಕ ಪೂರಕ ಕಾನೂನು ಕಾರ್ಯಕ್ರಮವನ್ನು ಸ್ಥಾಪಿಸುವುದು 42

4.1 ಪೂರಕ ಕನೂನು ತಜ್ಞರ ಆಯ್ಕೆ 44

- ಹುದ್ದೆಗಾಗಿ ಅಧಿಕೃತ ಘೋಷಣೆ 45
- ಕಿರುಪಟ್ಟಿಯನ್ನು ಸಿದ್ಧ ಪಡಿಸುವುದು
- ಸೂಕ್ಷ್ಮ ಪರೀಕ್ಷೆ ಮತ್ತು ಸಂದರ್ಶನ

4.2 ತರಬೇತಿ 46

4.3 ಮೇಲ್ವಿಚಾರಣೆ ಮತ್ತು ಬೆಂಬಲ 47

- ವಾರವಾರದ ವರದಿ
- ಮಾಸಿಕ ಸಮಾಲೋಚನಾ ಸಭೆ 48
- ಸಂಶೋಧನಾ ಬೆಂಬಲ 50
- ಮೈತ್ರಿ ಮತ್ತು ಸಂಸ್ಥೆಗಳನ್ನು ಕಟ್ಟುವುದು. 52

4.4 ಮೌಲ್ಯೀಕರಣ 53

ಅನುಬಂಧಗಳು

ನೀತಿ ಶಿಫಾರಸ್ಸಿನ ಮಾದರೀ ಕಾಗದ ಪತ್ರ 58


ದೂರು ಪತ್ರದ ಮಾದರಿ 62

ಪೂರಕ ಕಾನೂನು ತಜ್ಞರ ತರಬೇತಿಗಾಗಿ ಮಾದರೀ ಕಾರ್ಯಸೂಚಿ. 64

# ಸಂಕ್ಷಿಪ್ತ ಪದರೂಪಗಳು

| | |
|---|---|
| ಸಿ ಪಿ ಆರ್: | ಸೆಂಟರ್ ಫ಼ಾರ್ ಪಾಲಿಸಿ ರಿಸರ್ಚ್ |
| ಸಿ ಆರ್ ಝ಼ೆಡ್: | ಕೋಸ್ಟಲ್ ರೆಗ್ಯುಲೇಷನ್ ಝ಼ೊನ್ |
| ಇ ಐ ಎ: | ಎನ್ವಿರಾನ್ಮೆಂಟ್ ಇಂಪ್ಯಾಕ್ಟ್ ಅಸ್ಸೆಸ್ ಮೆಂಟ್ |
| ಎಫ಼್ ಎ ಕ್ಯೂ: | ಫ಼್ರೀಕ್ವೆಂಟ್ಲಿ ಅಸ್ಕ್ ಡ್ ಕ್ವೆಶ್ಚನ್ಸ್ |
| ಜಿ ಪಿ ಎಸ್: | ಗ್ಲೋಬಲ್ ಪೊಸಿಷನಿಂಗ್ ಸಿಸ್ಟೆಮ್ |
| ಎನ್ ಡಿ ಝ಼ೆಡ್: | ನೋ ಡೆವೆಲಪ್ ಮೆಂಟ್ ಝ಼ೊನ್ |
| ಎನ್ ಜಿ ಒ: | ನಾನ್-ಗೊವರ್ನ್ ಮೆಂಟಲ್ ಆರ್ಗನೈಝ಼ೆಷನ್ |
| ಆರ್ ಟಿ ಐ: | ರೈಟ್ ಟು ಇನ್ಫಮೇಷನ್ |





# ಭಾಗ 1

## ಸಮುದಾಯದ ಪೂರಕ ಕಾನೂನು ತಜ್ಞ (ಪ್ಯಾರಾ ಲೀಗಲ್) ಯಾರು

**ಜನಸಾಮಾನ್ಯ ನ್ಯಾಯವಾದಿ ಎಂದೂ ಅಥವಾ ಬರಿಗಾಲಿನ ವಕೀಲನೆಂದು ಗುರುತಿಸಲ್ಪಡುವ  ಸಮುದಾಯದ ಪೂರಕ ಕಾನೂನು ತಜ್ಞ – ಇವರು ಮೂಲ ಕಾನೂನು ವಿಷಯಗಳಲ್ಲಿ ಮತ್ತು ಕಾನೂನಿನ ಕಾರ್ಯ ವಿಧಾನಗಳಲ್ಲಿ,  ಹಾಗೂ ಮಧ್ಯಸ್ಥಿಕೆ, ಸಮಾಲೋಚನೆ, ಶಿಕ್ಷಣ, ಮತ್ತು ಸಮರ್ಥನೆ ಈ ಮುಂತಾದ ಕೌಶಾಲಗಳ ತರಬೇತಿ ಪಡೆದಿರುವ   ಸಮುದಾಯ ಸಂಪನ್ಮೂಲ ವ್ಯಕ್ತಿ ಹಾಗೂ ಸಂಚಾಲಕ.**

ಪೂರಕ ಕಾನೂನು ತಜ್ಞರು ಕಾನೂನು ವಿಷಯಗಳಲ್ಲಿ ತಮಗಿರುವ ಜ್ಞಾನ, ವ್ಯಾಪಕ ಕೌಶಲಗಳು, ಸ್ಥಳೀಯ ಸನ್ನಿವೇಶಗಳ ಬಗ್ಗೆ ತಮ್ಮಲ್ಲಿರುವ ಅರಿವು - ಇವೆಲ್ಲವನ್ನೂ ಒಗ್ಗೂಡಿಸಿ, ಬಾಧಿತ ಸಮುದಾಯಗಳು ಕಾನೂನಿನ ಸದುಪಯೋಗ ಮಾಡಿಕೊಂಡು  ತಮ್ಮ ತಮ್ಮ ನ್ಯಾಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಬಲರಾಗುವಂತೆ ಸಹಾಯ ನೀಡುತ್ತಾರೆ. ಸಮುದಾಯದವರು ತಮಗೆ ಅನ್ಯಾಯವಾಗಿದೆ ಎಂದು ಸೂಚಿಸುವ ಸಾಕ್ಷ್ಯಗಳನ್ನು/ಪುರಾವೆಗಳನ್ನು ಸಂಗ್ರಹಿಸಿ ಅವುಗಳನ್ನು ಪ್ರಸ್ತುತ ಪಡಿಸಲು ಹಾಗೂ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಪ್ರಜೆಗಳಿಗೆ ಉತ್ತರವಾದಿಗಳಾಗಿರುವ ಸಂಸ್ಥೆಗಳಿಗೆ ಮನವಿ ಮಾಡಲು ಬಾಧಿತ ಸಮುದಾಯಗಳಿಗೆ ಈ ಪೂರಕ ಕಾನೂನು ತಜ್ಞರು ಸಹಾಯ ಮಾಡುತ್ತಾರೆ. ಅವರು, ಸ್ಥಳೀಯ ಆಡಳಿತಾತ್ಮಕ ಕ್ರಮ ಮತ್ತು ಕಾರ್ಯಾಚರಣೆಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆಯೆ ಹೊರತು, ಮಂದಗತಿಯ,  ದೂರ (ಹೋಗಿ), ದುಬಾರಿಯಾದ ದಾವೆಯನ್ನು ಹೂಡುವ ಕಡೆಗೆ ಗಮನ ಹರಿಸುವುದಿಲ್ಲ.. ಅವರು ಮುಂಚೂಣಿ ನ್ಯಾಯ ಸೇವಾರ್ಥಿಗಳಾಗಿ ಪರಿಣಾಮಕ್ಕೊಳಗಾದ ಸಮುದಾಯಗಳಿಗೆ ತಮ್ಮ ಸೇವೆ ಸಲ್ಲಿಸುತ್ತಾರೆ - ಅವರು ಸುಲಭಲಭ್ಯರಾಗಿರುತ್ತಾರೆ, ತಮ್ಮ ಸೇವೆಗೆ ಕಡಿಮೆ ಶುಲ್ಕವನ್ನು ವಿಧಿಸುವರಾಗಿದ್ದು ಅವರು ನ್ಯಾಯವನ್ನು ವೇಗವಾಗಿ ಸಾಧಿಸುವ ವೇಗವರ್ಧಕರೂ ಹೌದು.

ಅವರ ಹೆಚ್ಚು ಗಮನವು ಸರ್ಕಾರೀ ಸಂಸ್ಥೆಗಳ ಮೇಲಿರುವುದರಿಂದ, ಪ್ರಜೆಗಳ ಸಮಸ್ಯೆಗಳ ಸೃಜನಾತ್ಮಕ  ಮತ್ತು ಸಕಾಲಿಕ ಪರಿಹಾರಕ್ಕಾಗಿ ಅಧಿಕಾರಿಶಾಹಿಗಳೊಂದಿಗೆ ವ್ಯವಹರಿಸಲೂ ಸಹ ಈ ಪೂರಕ ಕಾನೂನು ತಜ್ಞರು ಸಹಾಯ ಮಾಡುತ್ತಾರೆ. ಪರಿಹಾರಗಳನ್ನು ರೂಪಿಸಲು ಬಾಧಿತ ಸಮುದಾಯಗಳ ಮತ್ತು ಸರ್ಕಾರದ ನಡುವೆ ಸಹಯೋಗವನ್ನು ನಿರ್ಮಿಸುತ್ತಾ , ಪೂರಕ ಕಾನೂನು ತಜ್ಞರು ಸಾರ್ವಜನಿಕ ಭಾಗವಹಿಸುವಿಕೆಯ ಸಂಪೂರ್ಣ ಪ್ರಯೋಜನಗಳನ್ನು ಹೊರತರುತ್ತಾರೆ.  ಅವರ ಗಮನವು ನಿಯಂತ್ರಕ ಹಾಗೂ ಕಾನೂನುಬದ್ಧ ಸಂಸ್ಥೆಗಳನ್ನು ಕಟ್ಟುವತ್ತ ಕೇಂದ್ರಿತವಾಗಿರುವುದರಿಂದ ಅದು ನ್ಯಾಯ ಕ್ರಮದಲ್ಲಿ ವ್ಯವಸ್ಥಿತ ಮತ್ತು ಶಾಶ್ವತ ಬದಲಾವಣೆಯನ್ನು ಖಚಿತಗೊಳಿಸುತ್ತದೆ.

ಪೂರಕ ಕಾನೂನು ತಜ್ಞರು ಸಮಗ್ರತೆಯ ವಿಧಾನವನ್ನು ಅಳವಡಿಸಿಕೊಂಡು, ನ್ಯಾಯ ಸಂಬಂಧ ಅವಶ್ಯಕತೆಗಳ ಶ್ರೇಣಿಯನ್ನೇ ಸಂಬೋಧಿಸ ಬಹುದು ಅಥವಾ ಗೃಹ ದೌರ್ಜನ್ಯ, ಇಲ್ಲವೆ ಸರ್ಕಾರದ ಕಲ್ಯಾಣಯೋಜನೆಗಳು ಲಭ್ಯವಿಲ್ಲದಿರುವುದು, ಈ ತೆರನ ನಿರ್ದಿಷ್ಟ ವಿಷಯಗಳ ಮೇಲೆ ತಮ್ಮ ಗಮನವನ್ನು ಇಡಬಹುದು.  ಪೂರಕ ಕಾನೂನು ತಜ್ಞರು ಬಳಕೆಗೆ ಮಾತ್ರ ಗೊತ್ತುಪಡಿಸಲಾಗಿರುವ ಕಛೇರಿಗಳಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಬಹುದು ಅಥವಾ ಕಾನೂನು ಸಹಾಯ ನೀಡುವ, ಕೃಷಿ ಕ್ಷೇತ್ರದಲ್ಲಿ ನೆರವು ನೀಡುವ, ಅಥವಾ ಕಿರುಬಂಡವಾಳ ಸಂಸ್ಥೆಗಳು - ಈ ಮುಂತಾದ ಸೇವಾಧಾರಿತ ಸಂಸ್ಥೆಗಳ ಆಶ್ರಯದಲ್ಲಿ ಅವರ ಕಛೇರಿಗಳಲ್ಲಿ (ತಮ್ಮ)ಕಾರ್ಯ ನಿರ್ವಹಿಸ ಬಹುದು.

## ಸಮುದಾಯದ ಪೂರಕ ಕಾನೂನು ತಜ್ಞರಿಂದ (ಸಮುದಾಯಕ್ಕಿರುವ) ಅನುಕೂಲಗಳು / ಪ್ರಯೋಜನಗಳು

ನಾಗರಿಕ, ಪರಿಸರೀಯ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನು ರಕ್ಷಿಸಲು ಇರುವ ಕಾನೂನುಗಳನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯಲ್ಲಿ ಪೂರಕ ಕಾನೂನು ತಜ್ಞರು ಆಡಳಿತಾತ್ಮಕ ಅಭಿಮಂಡಳಿಗಳನ್ನು ಮತ್ತು ಸಂಸ್ಥೆಗಳನ್ನು ತೊಡಗಿಸಬಲ್ಲರು. ಸಮುದಾಯದ ಪೂರಕ ಕಾನೂನು ತಜ್ಞರನ್ನೊಳಗೊಂಡ ನ್ಯಾಯ ಸೇವೆಗಳ ಮಾದರಿಯೊಂದರ ಕೆಲವು ಪ್ರಧಾನ ಅನುಕೂಲಗಳು ಈ ಕೆಳಗಿವೆ -

### ಬಲಿಪಶುಗಳಾಗಿರುವವರು ಬದಲಾವಣೆಯ ಕರ್ತೃ ಆಗುವರು.

ಬಾಧಿತ ಸಮುದಾಯಗಳ ಕಾನೂನುಗಳ ಅರಿವನ್ನು / ಪ್ರಜ್ಞೆಯನ್ನು ಮತ್ತು ಅವರ ಜೀವನದ ಮೇಲೆ ಪರಿಣಾಮ ಬೀರುವ ನಿರ್ಧಾರಗಳನ್ನು ಪ್ರಭಾವಿಸುವ ಸಾಮರ್ಥ್ಯವನ್ನು ಇದು ಹೆಚ್ಚಿಸುತ್ತದೆ.

### ಸಮುದಾಯಗಳಿಗೆ ಪರಿಹಾರಗಳು

ಪ್ರತಿ ವ್ಯಕ್ತಿಗೆ ಮಾತ್ರವಲ್ಲದೆ, ಬಾಧಿತರಾದ ಸಮಗ್ರ ಸಮುದಾಯಗಳಿಗೆ ಕೂಡಾ ಪರಿಹಾರಗಳನ್ನು ಇದು ಕಂಡು ಹಿಡಿಯಬಲ್ಲದು

### ಸಕಾಲಿಕ ಕಾನೂನುಬದ್ಧ ಪರಿಹಾರಗಳು

ವಿರೋಧವಲ್ಲದ / ಪ್ರತಿವರ್ತಿಯಾಗಿರದ ವಿಧಾನಗಳನ್ನು ಹಾಗೂ ಸೃಜನಾತ್ಮಕ ಪರಿಹಾರಗಳನ್ನು ಬಳಸಿ ಇದು ಕಾನೂನು ಸಂಬಂಧ ಸಮಸ್ಯೆಗಳನ್ನು ಸಾಂಪ್ರದಾಯಿಕ ನ್ಯಾಯಾಲಯ ಗಳಿಗಿಂತ ವೇಗವಾಗಿ ಬಗೆ ಹರಿಸುವುದು.

### ವೆಚ್ಚ-ಪರಿಣಾಮಕಾರಿ ಪರಿಹಾರಗಳು

ಸಾಂಪ್ರದಾಯಿಕ ನ್ಯಾಯ ಸೇವೆಗಳಿಗಿಂತ ಇದು ಹೆಚ್ಚು ವೆಚ್ಚ-ಪರಿಣಮಕಾರಿಯಾಗಿರುತ್ತದೆ ಮತ್ತು ಸುಗಮ್ಯವಾಗಿರುತ್ತದೆ.


### ಅತಿ ಮುಖ್ಯವಾದ ಕೊಂಡಿ

ಇದು, ಪರಿಣಾಮಕ್ಕೊಳಗಾದ ಸಮುದಾಯಗಳ ಮತ್ತು ಔಪಚಾರಿಕ / ಅನೌಪಚಾರಿಕ ಸಂಸ್ಥೆಗಳ, ಮತ್ತು ಇನ್ನಿತರ ಸೇವೆ ಒದಗಿಸುವ ಸಂಸ್ಥೆಗಳ - ಉದಾ. ವಕೀಲರು -ಇವೆಲ್ಲದರ ನಡುವೆ ಕೊಂಡಿಯಾಗಿ ಕಾರ್ಯ ಮಾಡುತ್ತದೆ

### ಸಮುದಾಯದ ದೃಷ್ಟಿಕೋನವನ್ನು ರೂಪಿಸುತ್ತದೆ

ಇದು ಕಾನೂನುಗಳ ಕುರಿತು ಸಮುದಾಯಗಳ ದೃಷ್ಟಿಕೋನವನ್ನು ರೂಪಿಸಬಲ್ಲದು ಹಾಗೂ ಮರು ರೂಪಿಸಬಲ್ಲದು ಮತ್ತು ಸಮುದಾಯಗಳ ಬಗ್ಗೆ ಸಾರ್ವಜನಿಕ ಸದ್ಭಾವನೆಯನ್ನು ಸೃಷ್ಟಿಸಬಲ್ಲದು.





# ಭಾಗ 2

## ಸಮುದಾಯದ ಪೂರಕ ಕಾನೂನು ತಜ್ಞರು ಪರಿಸರೀಯ ನ್ಯಾಯಕ್ಕಾಗಿ ಏನೇನು ಮಾಡುವರು?

**ಪರಿಸರೀಯ ನ್ಯಾಯ ಈ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ - ಪರಿಸರೀಯ ಕಾನೂನುಗಳು, ವಿಧಿ ನಿಯಮ, ನೀತಿ, ಇವುಗಳ ಅಬಿವೃಧ್ಧಿ, ಅನುಷ್ಟಾನ ಮತ್ತು ನಿರ್ಬಂಧನೆ – ಈ ಕಾರ್ಯಗಳಲ್ಲಿ , ಜನರಲ್ಲಿರಬಹುದಾದ ಯಾವುದೇ ರೀತಿಯ ವ್ಯತ್ಯಾಸಗಳನ್ನು ಲೆಕ್ಕಿಸದೆ, ಜನರನ್ನು ನ್ಯಾಯೋಚಿತವಾಗಿ ಸತ್ಕರಿಸುವುದರ ಜೊತೆಗೆ ಅವರ ಅರ್ಥಪೂರಿತ ಒಳಗೊಳ್ಳುವಿಕೆಯನ್ನು ಖಚಿತ ಪಡಿಸುವುದು. ಈ ವ್ಯಾಖ್ಯಾನದಲ್ಲಿ, ಪರಿಸರೀಯ, ಆರೋಗ್ಯ ಮತ್ತು ಜೀವಮಾನದ ಪರಿಸ್ಥತಿಗಳನ್ನು ಪ್ರಭಾವಿಸುವ ಅಥವಾ ಪ್ರಭಾವಿಸಬಲ್ಲ ಅನ್ಯ ಕಾನೂನುಗಳೂ ಸೇರ್ಪಡೆಯಾಗಿರುತ್ತವೆ**

ಪರಿಸರೀಯ ನ್ಯಾಯವು, ಪರಸರೀಯ ರಕ್ಷಣೆ ಮತ್ತು (ಅದರ)ಪಾಲನೆಗೆ ಮಾತ್ರ ಸಂಬಂಧ ಪಟ್ಟಿರದೆ, ಬಹು ಮುಖ್ಯವಾಗಿ ಸಂರಕ್ಷಣೆ ಮತ್ತು ಪಾಲನೆಯಿಂದ ಒದಗಿ ಬರುವ ಲಾಭಗಳ ಹಾಗೂ ಮಾಲಿನ್ಯದ ಹೊರೆಯ ಅಥವಾ ಇನ್ಯಾವುದೇ ಪರಿಸರೀಯ ಸಮಸ್ಯೆಗಳ ಅಸಮಾನ ವಿತರಣೆಗೂ ಸಂಬಂಧಪಟ್ಟಿರುತ್ತದೆ. ಈ ಲಾಭಗಳನ್ನು ಅಥವಾ ಹೊರೆಯನ್ನು ಅಸಮಾನವಾಗಿ ವಿತರಿಸಿದಾಗ, ಜನಸಮೂಹದ ಕೆಲವು ಗುಂಪುಗಳು ಇತರ ಗುಂಪುಗಳಿಗಿಂತ ಹೆಚ್ಚು ದುರ್ಬಲರಾಗುತ್ತಾರೆ / ಖಂಡನೀಯರನ್ನಾಗಿ ಮಾಡಲಾಗುತ್ತದೆ. ಅವರ ಜೀವನಗಳನ್ನು ಬೇರೆಯವರ ಜೀವನಕ್ಕಿಂತ ಅಲ್ಪವಾಗಿ ಮೌಲ್ಯೀಕರಿಸಿ, ಅವರು ಉಳಿದವರಿಗಿಂತ ಹೆಚ್ಚಾಗಿ ತೊರೆಯಲ್ಪಡ ಬಹುದಾದ ಜನಗಳೆಂದು ಅವರು ಪರಿಗಣಿಸಲ್ಪಡುತ್ತಾರೆ.

ಸಮುದಾಯದ ಪೂರಕ ಕಾನೂನು ತಜ್ಞರು, ಪರಿಸರೀಯ ಸಮಸ್ಯೆಗಳ ಹೊರೆಯಡಿಯಲ್ಲಿ ಸಿಕ್ಕಿಕೊಂಡಿರುವ ಅಥವಾ ಪರಿಸರೀಯ (ದುಷ್ಪರಿಣಾಮ) ಪರಿಣಾಮಗಳನ್ನುಂಟು ಮಾಡುವಂತಹ ನಿರ್ಣಯಗಳಿಂದಾಗುವ ವೆಚ್ಚಗಳನ್ನು ತುಂಬುವ ಹೊಣೆ ಹೊತ್ತಿರುವ ಸಮುದಾಯಗಳಿಗೆ ಪರಿಸರೀಯ ನ್ಯಾಯದ ಬೆಂಬಲ ನೀಡುವುದರ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿರುತ್ತಾರೆ. ಈ ರೀತಿಯಾಗಿ ಬಾಧಿತ ಸಮುದಾಯಗಳು, - ಪರಿಸರೀಯ ಪರಿಣಾಮಗಳನ್ನು ಕಡಿಮೆಗೊಳಿಸಲು, ತಮ್ಮ ಜೀವಿಸುವ ಹಾಗೂ ಕೆಲಸ ಮಾಡುವ ಪರಿಸ್ಥಿತಿಗಳನ್ನು ಉತ್ತಮಗೊಳಿಸಲು, ಹಾಗೆಯೇ ತಮ್ಮ ಜೀವನೋಪಾಯವನ್ನು ಕಾಪಿಟ್ಟುಕೊಳ್ಳಲು ಪರಿಸರೀಯ ನಿಯಮಗಳನ್ನು ಅರ್ಥೈಸಿಕೊಂಡು, ಅವುಗಳ ಸದುಪಯೋಗ ಮಾಡಿಕೊಳ್ಳುತ್ತಾ, ಮತ್ತು ನಿಯಮಗಳನ್ನು ರೂಪಿಸುವುದರಲ್ಲಿ ಈ ಪೂರಕ ಕಾನೂನು ತಜ್ಞರು ಸಹಾಯ ನೀಡುತ್ತಾರೆ. ಕೈಗಾರಿಕಾ / ಔದ್ಯಮಿಕ ಪ್ರದೇಶಗಳಲ್ಲಿ, ಈ ಪೂರಕ ಕಾನೂನು ತಜ್ಞರು ಮತ್ತು ಅವರು ಕೆಲಸ ಮಾಡುವ ಸಮುದಾಯಗಳು, ಸರಕಾರಗಳನ್ನು ಮತ್ತು ಸಂಘ ಸಂಸ್ಥೆಗಳನ್ನು ಕಾನೂನಿನ ಕಟ್ಟಳೆಗಳಿಗೆ, ಪರಿಸರೀಯ ಸಂರಕ್ಷಣೆಗೆ ಮತ್ತು ಸಾಮಾಜಿಕ ನ್ಯಾಯದ ಕಟ್ಟುಪಾಡಿಗೆ ಉತ್ತರವಾದಿಯಾಗಿರುವಂತೆ ಮಾಡುತ್ತಾರೆ. ಪರಿಸರೀಯ ನ್ಯಾಯದ ಪೂರಕ ಕಾನೂನು ತಜ್ಞರು ಕಾನೂನುಗಳನ್ನು ತಿಳಿದುಕೊಳ್ಳಲು, ಅವುಗಳ ಸದುಪಯೋಗ ಮಾಡಿಕೊಳ್ಳಲು ಹಾಗೂ ಕಾನೂನುಗಳನ್ನು ರೂಪಿಸಲು ಸಮುದಾಯಗಳಿಗೆ ಸಹಾಯ ನೀಡುತ್ತಾರೆ.

ತಿಳಿದುಕೋ ಉಪಯೋಗಿಸು ರೂಪಿಸು
ಕಾನೂನು



ಮಯನ್ಮಾರ್ - ಪೂರಕ ಕಾನೂನು ತಜ್ಞರು ತಮ್ಮ ಪ್ರಕರಣಗಳಿಗಾಗಿ ಕಾನೂನಗಳ ಅಧ್ಯಯನ ಮಾಡುತ್ತಿರುವುದು



ಗುಜರಾತ್ ನಲ್ಲಿ ಪೂರಕ ಕಾನೂನು ತಜ್ಞರು, ಸಮುದಾಯ ಸಹಭಾಗಿಗಳು ಮತ್ತು ಕಾನೂನು ಸಂಶೋಧಕ, ಪ್ರಕರಣವೊಂದರ ಬಗ್ಗೆ ಚರ್ಚಿಸುತ್ತಿರುವುದು.

## ಕಾನೂನುಗಳನ್ನು ತಿಳಿದುಕೋ

ಪರಿಸರೀಯ ಕಾನೂನುಗಳ ಮತ್ತು ನಿಯಂತ್ರಕ ಪ್ರಕ್ರಿಯೆಗಳ ಕುರಿತು ಪೂರಕ ಕಾನೂನು ತಜ್ಞರು ಸಮುದಾಯಗಳಿಗೆ ತರಬೇತಿ ನೀಡುತ್ತಾರೆ. ಪರಿಸರೀಯ ಕಾನೂನುಗಳನ್ನು ಮತ್ತು ಸಾಂವಿಧಾನಿಕ ಪರಿಹಾರಗಳನ್ನು ಅರಿತಿರುವ ಸಮುದಾಯಗಳು, ಶುಧ್ಧ ವಾಯು, ಶುಧ್ಧವಾದ ನೀರು, ಸ್ವಚ್ಛ ಆಹಾರ, ಉದ್ಯೋಗ ಮತ್ತು ಬದುಕು - ಇವೆಲ್ಲವುಗಳು ತಮಗೆ ಸಲ್ಲಬೇಕೆಂದು ಕೋರುವ ನಿಟ್ಟಿನಲ್ಲಿ ತಮ್ಮ ಹಕ್ಕುಗಳನ್ನು ಚಲಾಯಿಸ ಬಲ್ಲರೆಂಬ ವಿಶ್ವಾಸದ ಮೇಲೆ ತರಬೇತಿಯನ್ನು ನೀಡಲಾಗುತ್ತದೆ. ಭೂಮಿಯ ಬಳಕೆಯಲ್ಲಿ ಬದಲಾವಣೆಗಳನ್ನು ಮಾಡುವ ಮತ್ತು ಪ್ರಕೃತಿದತ್ತ ಸಂಪನ್ಮೂಲಗಳನ್ನು ಹೊರ ತೆಗೆಯುವ ಸರ್ಕಾರೀ ಯೋಜನೆಗಳ ನಿರ್ಧಾರವನ್ನು ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಹಕ್ಕನ್ನು ಚಲಾಯಿಸ ಬಲ್ಲರು. ತಮ್ಮ ಹಕ್ಕುಗಳನ್ನು ಚಲಾಯಿಸುವುದು ಮಾತ್ರವಲ್ಲದೆ, ಸರಕಾರ ಮತ್ತು ಇತರ ಸಂಘ ಸಂಸ್ಥೆಗಳು ಪರಿಸರೀಯ ರಕ್ಷಣೆ ಮತ್ತು ಸಾಮಾಜಿಕ ನ್ಯಾಯ ಇವುಗಳ ಕಟ್ಟುಪಾಡಿಗೆ ಹಾಗೂ ಬಧ್ಧತೆಗೆ ಉತ್ತರವಾದಿಯಾಗಿರುವಂತೆ ಮಾಡಲು ಸೃಜನಾತ್ಮಕ ವಿಧಾನಗಳನ್ನು ತರಬೇತಿ ಹೊಂದಿರುವ ಸಮುದಾಯಗಳು ಸೃಷ್ಟಿಸಬಲ್ಲವು.

## ಕಾನೂನನ್ನು ಉಪಯೋಗಿಸು

ಪೂರಕ ಕಾನೂನು ತಜ್ಞರು, ಸಮುದಾಯದ ಸದಸ್ಯರಿಂದ ಅಥವಾ ಪ್ರತ್ಯೇಕ ಕುಟುಂಬಗಳಿಂದ (ಸಮುದಾಯದ ಸಹಭಾಗಿಗಳೆಂದು ಅಥವಾ ಕಕ್ಷಿಗಾರರೆಂದು ಉಲ್ಲೇಖಿಸಲಾಗುವ), ಕಾಡು ಅರಣ್ಯಗಳ ಮೇಲೆ, ಕೃಷಿ ಭೂಮಿಗಳ ಮೇಲೆ, ಜಲ ಮೂಲಗಳ ಮೇಲೆ, ಅಥವಾ ಮೀನುಗಾರಿಕೆ ಮಾಡುವ ನೆಲೆಗಳ ಮೇಲೆ ಆಗಿರುವ ಪರಿಣಾಮಗಳ ಬಗ್ಗೆ ದೂರುಗಳನ್ನು ಸ್ವೀಕರಿಸಿದೊಡನೆ, ಪರಿಸರೀಯ ಮತ್ತು ಇತರ ಪ್ರಸಕ್ತ ನಿಯಮಗಳ ಅನನುಸರಣೆ ಅಥವಾ ಉಲ್ಲಂಘನೆಗಳಿಗೂ, ಉಂಟಾಗಿರುವ ಪರಿಣಾಮಗಳಿಗೂ ಇರುವ ಸಂಬಂಧವನ್ನು ತನಿಖೆಗೀಡುಮಾಡುತ್ತಾರೆ. ಈ ವಿಷಯಗಳನ್ನು ಸಂಬಂಧಿತ ಸರ್ಕಾರೀ ನಿಯೋಗಗಳ ಮತ್ತು ಪರಿಸರ ಸಂರಕ್ಷಣೆಯ ಉದ್ದೇಶ ಹೊಂದಿರುವ ಸಂಸ್ಥೆಗಳ ಅಥವಾ ಸಾಮಾಜಿಕ ಕಲ್ಯಾಣ ಮತ್ತು ನ್ಯಾಯ, ಇವುಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅಧಿಕಾರ ವ್ಯಾಪ್ತಿ ಹೊಂದಿರುವ ಸಂಸ್ಥೆಗಳ ಗಮನಕ್ಕೆ ತರಲಾಗುತ್ತದೆ. ಪರಿಣಾಮಕಾರಿ ಪರಿಹಾರಗಳನ್ನು ಕೋರಲು ಹಾಗೂ ನಿರ್ಬಂಧಿಸಲು ಕಾನೂನು ಕ್ರಮವಿಧಾನಗಳನ್ನು ಸಕ್ರಿಯಗೊಳಿಸಿ, ಅವರು ಸ್ಥಳೀಯ ಸರಕಾರ ಮತ್ತು ಸಮುದಾಯಗಳನ್ನು ಹತ್ತಿರಕ್ಕೆ ತರುವುದಲ್ಲದೆ, ಪರಿಸರವನ್ನು, ಬಾಧಿತ ಸಮುದಾಯಗಳನ್ನು ಹಾಗೂ ಅವರ ಜೀವನೋಪಾಯಗಳನ್ನು ಸಂರಕ್ಷಿಸುವ ಆ ಕಾನೂನುಗಳಿಗೆ ಜೀವ ತರುತ್ತಾರೆ.

## ಕಾನೂನನ್ನು ರೂಪಿಸು

ಪೂರಕ ಕಾನೂನು ತಜ್ಞರು ಮತ್ತು ಬಾಧಿತ ಸಮುದಾಯದವರು ಮಾಡಿರುವ 'ಪ್ರಕರಣ ಕೆಲಸ / ಮಾದರಿ ಕೇಸ್ ವರ್ಕ್' ನ್ನು ಎಚ್ಚರಿಕೆಯಿಂದ ಪಥ್ಯೀಕರಿಸಲಾಗುತ್ತದೆ(ಟ್ರ್ಯಾ ಕಿಂಗ್) ಹಾಗೂ ವಿಶ್ಲೇಷಿಸಲಾಗುತ್ತದೆ. ಈ ಕೇಸ್ ಗಳಿಂದ ಒದಗಿ ಬಂದ ದತ್ತಾಂಶವನ್ನು ಒಟ್ಟುಗೂಡಿಸಿ ಅದನ್ನು, ಕಾನೂನುಗಳಲ್ಲಿ, ನೀತಿ, ಕಾರ್ಯ ವಿಧಾನಗಳಲ್ಲಿ, ಸಾಂಸ್ಥಿಕ ವ್ಯವಸ್ಥೆಗಳಲ್ಲಿ ಸಾಕ್ಷ್ಯಾಧಾರಿತ ಅಭಿವೃದ್ಧಿ ಸಾಧಿಸಲು ಬಳಸಲಾಗುತ್ತದೆ. ನಿರ್ದಿಷ್ಟ ಬಗೆಯ ಚಟುವಟಿಕೆಗಳ ಕಾರಣ ಉಂಟಾಗಿರುವ ಪರಿಣಾಮಗಳನ್ನು ಬಗೆಹರಿಸಲು ಅಥವಾ ಹೋಗಲಾಡಿಸಲು ಕಾನೂನುಗಳು ಅಸ್ತಿತ್ವದಲ್ಲಿ ಇರದಂತಹ ಸನ್ನಿವೇಶಗಳಲ್ಲಿ, ಹೊಸ ಕಾಯಿದೆ / ಕಾನೂನುಗಳ ಮತ್ತು ಮಾರ್ಗದರ್ಶಿಗಳ ಕರಡು ಸಿದ್ಧತೆಗೆ ಶಿಫಾರಸು ಮಾಡಲು ಸಂಬಂಧಿತ ಕೇಸ್ ಗಳ ದತ್ತಾಂಶವನ್ನು ಬಳಸಲಾಗುತ್ತದೆ. ಈ ಉದ್ದೇಶದ ಸಂಬಂಧವಾಗಿ, ಪೂರಕ ಕಾನೂನ ತಜ್ಞರು ಸಂಶೋಧಕರ ಪಾತ್ರವಹಿಸತ್ತಾ, ಬಾಧಿತ ಸಮುದಾಯಗಳು ಎದುರಿಸುವ ಸವಾಲುಗಳೊಂದಿಗೆ ಕೆಲಸ ಮಾಡಲು ಅವಶ್ಯವಿರುವ ಆಡಳಿತಾತ್ಮಕ ಮತ್ತ ಪರಿಸರೀಯ ಕಾನೂನಗಳನ್ನು ಅಭಿವೃದ್ಧಿ ಪಡಿಸಲು ದತ್ತಾಂಶವನ್ನು ಸಂಗ್ರಹಿಸುತ್ತಾರೆ. ಕಾನೂನು ಮತ್ತು ಸಾಂಸ್ಥಿಕ ಕಾರ್ಯವಿಧಾನಗಳಲ್ಲಿ / ಪರಿಪಾಠಗಳಲ್ಲಿ ಪೂರ್ತಿಯಾಗಿ ಬದಲಾವಣೆ ತರುವ ನಿಟ್ಟಿನಲ್ಲಿ ಸಾಕ್ಷ್ಯಾಧಾರಿತ ಪ್ರಸ್ತಾವನೆ/ಗಳನ್ನು ಅಸ್ತಿತ್ವಕ್ಕೆ ತರಲು ಕೇಸ್ ಗಳ ದತ್ತಾಂಶವನ್ನು ಬಳಸಲಾಗುತ್ತದೆ.

ಕೇಸ್ ಗಳ ದತ್ತಾಂಶ ಸಂಗ್ರಹವನ್ನು ನಿರ್ವಹಿಸಲು ಮತ್ತು ನಿಯಮಿತ ವರದಿಗಳನ್ನು ಹಾಗೂ ಪೂರಕ ಕಾನೂನು ತಜ್ಞರಿಗೆ ಅವರ ಕೇಸ್ ವರ್ಕ್ ಬಗ್ಗೆ ಹಿಮ್ಮಾಹಿತಿ ಒದಗಿಸಲು, ಅವರ ಅನುಭವಗಳನ್ನು ದಾಖಲಿಸಲು, ಕಾನೂನು ಸಂಶೋಧನೆಗಳ ಬೆಂಬಲವನ್ನೊದಗಿಸಲು ಹಾಗೂ ಇತರ ಅವಶ್ಯಕ ಸಹಾಯ ಒದಗಿಸಲು 'ಬೆಂಬಲ ತಂಡಗಳನ್ನು' ನೇಮಕ ಮಾಡಲಾಗಿರುತ್ತದೆ.. ಸಮುದಾಯದ ಸಹಭಾಗಿಗಳು, ಪೂರಕ ಕಾನೂನು ತಜ್ಞರು ಮತ್ತು ಬೆಂಬಲ ತಂಡಗಳು ಒಟ್ಟಾಗಿ ಸೇರಿ ತಮ್ಮ ಅನುಭವಗಳ ಮತ್ತು (ದೊರಕಿರುವ) ದತ್ತಾಂಶಗಳ ಆಧಾರದ ಮೇಲೆ, 'ನೀತಿ ಹೇಳಿಕೆಗಳ / ವರದಿಗಳ" ಕರಡನ್ನು ಸಿದ್ಧ ಪಡಿಸುವರು ಮತ್ತು ಅದರೊಂದಿಗೆ ಉನ್ನತ ನೀತಿ / ಉನ್ನತ(ಉತ್ತಮ) ಅನುಷ್ಠಾನ ಕಾರ್ಯ ವಿಧಾನಗಳಿಗಾಗಿ (ವಕಾಲತ್ತು ಮಾಡುವ) ಸಮರ್ಥನೆ ಮಾಡುವ ಕಾರ್ಯದಲ್ಲಿ ಅವರು ತೊಡಗುವರು.


ಚಿಪ್ಪೆಕಲ್ಲು ಆರಿಸುವವರನ್ನೂ ಮೀನುಗಾರರೆಂದು ಪರಿಗಣಿಸಿ

ಅಘನಾಶಿನಿ ಚಿಪ್ಪೆಕಲ್ಲು ಕಲೆಕ್ಟರ್ಸ್ ಗ್ರೂಪ್ ನ ಸದಸ್ಯರು, (ಅಘನಾಶಿನಿ ಚಿಪ್ಪೆಕಲ್ಲು ಸಂಗ್ರಹಕರ ಸಮೂಹ) ಮೀನುಗಾರಿಕೆಯ ಯೋಜನೆಗಳಲ್ಲಿ ತಮ್ಮನ್ನು ಸೇರ್ಪಡೆ ಮಾಡಿಕೊಳ್ಳ ಬೇಕೆಂದು ಕೋರಿ ಕರ್ನಾಟಕ ರಾಜ್ಯದಲ್ಲಿರುವ ಕಾರ್ವಾರ್ ನ ಜಿಲ್ಲಾ ಕಲೆಕ್ಟರ್ ಗೆ ಮನವಿಯನ್ನು ಸಲ್ಲಿಸಿರುವ ವಾರ್ತಾ ವರದಿ.





ಗುಜರಾತ್ ನ ಓಖಾ ಪ್ರದೇಶದಲ್ಲಿ ಬಾಕ್ಸೈಟ್ ಖನಿಜದ ತೆರೆದ ರಾಶಿಯು ವಾಯು ಮಾಲಿನ್ಯಕ್ಕೆ ಕಾರಣ ಕರ್ತವಾಗಿದೆ

## ಪ್ರಕರಣದಿಂದ ನೀತಿಯ ವರೆಗೂ

### ಗುಜರಾತ್ ನಲ್ಲಿ ಖನಿಜಗಳ ನಿಭಾವಣೆಯ ಮಾರ್ಗದರ್ಶಿ

ಪಶ್ಚಿಮ ಭಾರತದಲ್ಲಿರುವ ಗುಜರಾತ್ ನ ಕರಾವಳಿ ಪ್ರದೇಶದಲ್ಲಿ - ಕಲ್ಲಿದ್ದಲು, ಬಾಕ್ಸೈಟ್ ಮತ್ತು ಸುಣ್ಣದಕಲ್ಲು - ಈ ಮೂರೂ ಖನಿಜಗಳೂ ಸೇರಿದಂತೆ ಸಕಲ ವಿಧದ ಖನಿಜಗಳ ನಿಭಾವಣೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆ ಪಡೆದಿರುವ ಹಲವಾರು ಬಂದರುಗಳು ಇವೆ. ಈ ಬಂದರುಗಳ ಸುತ್ತ ಮುತ್ತ ವಾಸಿಸುವ ಸಮುದಾಯಗಳು, ಖನಿಜ ನಿಭಾವಣೆಯಿಂದ ಹೊರಬರುವ ಧೂಳು ತಮ್ಮ ವಾಸ ಸ್ಥಳದ ಪರಿಸ್ಥಿತಿಗಳನ್ನು, ಆರೋಗ್ಯವನ್ನು ಮತ್ತು ಕೃಷಿ ಕ್ಷೇತ್ರಗಳನ್ನು ಬಾಧಿಸುತ್ತಿದೆ ಎಂದು ದೂರು ಮಾಡುತ್ತಲೇ ಇರುವರು. ಖನಿಜ ನಿಭಾವಣೆ ಮಾಡುತ್ತಿರುವ ಬಂದರುಗಳು ಪಡೆದುಕೊಂಡಿರುವ ಅನುಮೋದನೆಯ ಪತ್ರದಲ್ಲಿ ಇರುವ ಷರತ್ತುಗಳ ಉಲ್ಲಂಘನೆ ಆಗಿದೆಯೆ ಎಂದು ಕಂಡುಕೊಳ್ಳಲು ಬಾಧಿತ ಸಮುದಾಯದೊಂದಿಗೆ ಪೂರಕ ಕಾನೂನು ತಜ್ಞರು ಕೆಲಸ ಮಾಡಿದಾಗ, ಅನುಮೊದನಾ ಪತ್ರದಲ್ಲಿ ಕಲ್ಲಿದ್ದಲಿನ ನಿಭಾವಣೆಗೆ ಮಾತ್ರ ರಕ್ಷಣೋಪಾಯಗಳಿದ್ದವೆಂದು ಅವರಿಗೆ ಕಂ ಡು ಬಂದಿತು. ಈ ಸೌಲಭ್ಯ ಘಟಕಗಳೊಳಗೆ ಶೇಖರಿಸಲ್ಪಟ್ಟಿರುವ ಮತ್ತು ಅಲ್ಲಿಂದ ಸಾಗಿಸಲ್ಪಡುವ ಇನ್ನಿತರ ಎಲ್ಲಾ ಖನಿಜಗಳು, ಧೂಳನ್ನು ನಿಯಂತ್ರಿಸುವ ಯಾವುದೇ ಕ್ರಮಗಳಿಗೆ ಒಳಪಟ್ಟಿರಲಿಲ್ಲ ಅಥವಾ ನಿಯಂತ್ರಿಸಲ್ಪಟ್ಟಿರಲಿಲ್ಲ. ಈ ಮೇಲಿನ ಸಮಸ್ಯೆಯ ವಿವಾದಾಂಶವನ್ನು ಪೂರಕ ಕಾನೂನು ತಜ್ಞರಿಂದ ಹಾಗೂ ಅವರ ಕಕ್ಷಿಗಾರರಿಂದ ಕನಿಷ್ಠ ಪಕ್ಷ, 10 ಬಂದರುಗಳಲ್ಲಿ ಗುರುತಿಸಲ್ಪಟ್ಟಿದೆ. ಕಲ್ಲಿದ್ದಲಿನ ನಿಭಾವಣೆಯ ಮಾರ್ಗಸೂಚಿಗಳನ್ನು ರಾಜ್ಯ ಸರಕಾರವು ಅದು ಹೊಂದಿದ್ದರೂ, ಇತರ ಖನಿಜಗಳ ನಿಭಾವಣೆಯು ನೀತಿ ಮಟ್ಟದ ಹಾಗೂ ಯೋಜನೆ ಮಟ್ಟದ ಅನುಮೋದನೆಗಳಲ್ಲಿ ಬಿಟ್ಟು ಹೋಗಿತ್ತು. ಈ ಲೋಪವನ್ನು ಬಗೆಹರಿಸಲು, ಪೂರಕ ಕಾನೂನು ತಜ್ಞರಿಂದ ಮತ್ತು ಸಮುದಾಯದ ಸಹಭಾಗಿಗಳಿಂದ ಸಂಗ್ರಹಿಸಲ್ಪಟ್ಟ ಪುರಾವೆಯ ಆಧಾರದ ಮೇಲೆ, ಬಂದರುಗಳಿಗೆ ಈಗಾಗಲೆ ನೀಡಿರುವ ಎಲ್ಲಾ ಅನುಮೋದನಾ ಪತ್ರಗಳನ್ನು ಪುನಃಪರಿಶೀಲನೆ ಮಾಡುವಂತೆ ರಾಜ್ಯ ಸರಕಾರಕ್ಕೆ ಸಲ್ಲಿಸಲಾಗಿತ್ತು. ಬಂದರು, ಉದ್ಯಮ, ವಿದ್ಯುತ್ ಶಕ್ತಿ ಘಟಕಗಳೂ ಸೇರಿದಂತೆ, ರಾಜ್ಯದಲ್ಲಿ ನಡೆಯುವ ಕಾರ್ಯಾಚರಣೆಗಳಾದ್ಯಂತ ಬಳಸುವ ಖನಿಜಗಳ ಶೇಖರಣೆ, ನಿಭಾವಣೆ ಮತ್ತು ಸಾಗಣೆ - ಇವೆಲ್ಲವನ್ನು ಕುರಿತ "ಖನಿಜ ನಿಭಾವಣೆ ಮಾರ್ಗಸೂಚಿ"ಯನ್ನು ಕಾನೂನು ಬದ್ಧವಾಗಿ ರೂಪಿಸಬೇಕೆಂದು ವಿನಂತಿಸಿ ಪ್ರತ್ಯೇಕ ಕಾಗದ ಪತ್ರವೊಂದನ್ನು ಸರಕಾರಕ್ಕೆ ಕಳಿಸಲಾಗಿತ್ತು. ಈ ಎರಡೂ ಸಲ್ಲಿಕೆಗಳು ಕೇಸ್ ಮಟ್ಟದ ಪುರಾವೆಯನ್ನು ಬಳಸಿ ಕಾನೂನು ಷರತ್ತುಗಳ ಮೊರೆ ಹೋಗುವುರಿಂದ, ಅವು ಸರಕಾರಕ್ಕೆ ಹೊಸ ನೀತಿಗಳನ್ನು ಹೊರಡಿಸಲು ಅಧಿಕಾರವನ್ನು ಕೊಡುತ್ತವೆ. ಪೂರಕ ಕಾನೂನು ತಜ್ಞರು ಮತ್ತು ಸಮುದಾಯ ಸಹಭಾಗಿಗಳು ನಿರ್ದಿಷ್ಟ ಶಿಫಾರಸುಗಳನ್ನು ಮಾಡಲು ವೈಜ್ಞಾನಿಕ ಸಂಶೋಧನಾ ಲೇಖನಗಳಿಂದ ಮಾಹಿತಿಗಳನ್ನು ಹೊರತೆಗೆದು ಬಳಸಿದರು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿದ ಕಾಗದ ಪತ್ರವನ್ನು ಅನುಬಂಧ 1 ರಲ್ಲಿ ನೋಡಿ





ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ, ಪರಿಸರ ವಿಜ್ಞಾನ ದೃಷ್ಟಿಯಲ್ಲಿ ಅಧೃಢವೆಂದೆನಿಸುವ ಹಾಗೂ ಆರ್ಥಿಕವಾಗಿ ಉತ್ಪನ್ನ ಕಾರಕವಾದ ಭೂಪ್ರದೇಶವನ್ನು ಅವಲಂಬಿಸಿರುವ ಸಮುದಾಯಗಳಿಗೆ ಆ ಪ್ರದೇಶದಲ್ಲಿನ ಬಂದರು ಯೋಜನೆಗೆ ಸರಕಾರದ ಅನುಮೋದನೆಯಲ್ಲಿ ಕಾನೂನು ಉಲ್ಲಂಘನೆಗಳನ್ನು ಅರ್ಥೈಸಿಕೊಳ್ಳಲು, ಪೂರಕ ಕಾನೂನು ತಜ್ಞರು ಒತ್ತಾಸೆ ನೀಡಿದರು.

ಗುಜರಾತ್ ರಾಜ್ಯದ ವಾಪಿ ಯಲ್ಲಿ, ರಾಸಾಯನಿಕ ಉದ್ಯಮಗಳಿಂದ ಆಗುವ ದೀರ್ಘಕಾಲದ ಮಾಲಿನ್ಯವನ್ನು ಎದುರಿಸಿ ಹೋರಾಡಲು ಇರುವ, ರಾಜ್ಯದ ಅನುಮೋದನೆ ಪಡೆದಿರುವ, ಕ್ರಿಯಾ ಯೋಜನೆಯನ್ನು ಅನುಷ್ಠಾನ ಗೊಳಿಸಲು ಮತ್ತು ಪರಿಹಾರಗಳನ್ನು ಹುಡುಕಲು, ಪೂರಕ ಕಾನೂನು ತಜ್ಞರು ಬಾಧಿತ ಸ್ಥಳೀಯ ನಿವಾಸಿಗಳೊಂದಿಗೆ ಕೆಲಸ ಮಾಡುತ್ತಾರೆ.



# ಭಾಗ 3

## ಪೂರಕ ಕಾನೂನು ತಜ್ಞರು ಪರಿಸರೀಯ ನ್ಯಾಯದ ಪ್ರಕರಣಗಳನ್ನು / ಕೇಸ್ ಗಳನ್ನು ಹೇಗೆ ಬಗೆಹರಿಸುವರು?

ಪರಿಸರೀಯ ನ್ಯಾಯ ಸಮಸ್ಯೆಗಳಿಂದ ಬಾಧಿತರಾದ ಜನರು ಪ್ರಕರಣಗಳನ್ನು ಪೂರಕ ಕಾನೂನು ತಜ್ಞರ ಬಳಿಗೆ ಕೊಂಡು ಬರುವರು. ಪೂರಕ ಕಾನೂನು ತಜ್ಞರು ತಮ್ಮ ಕಾನೂನು ಅರಿವು ಮತ್ತು ಪರಿಹಾರಗಳನ್ನು ನೀಡುವ ಸಂಸ್ಥೆಗಳ ತಿಳಿವು – ಇವೆರಡನ್ನೂ ಬಳಸಿ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಸಹಾಯ ನೀಡುತ್ತಾರೆ. ಸಂಬಂಧಿತ ಪುರಾವೆಗಳೊಂದಿಗೆ ಮತ್ತು ಕಾನೂನು ಬದ್ಧವಾಗಿ ಸ್ವೀಕರಿಸ ಬಹುದಾದ ಹಾಗೂ ಸೃಜನತ್ಮಕವಾದ ಪರಿಹಾರಗಳೊಂದಿಗೆ ಸಂಘ ಸಂಸ್ಥೆಗಳನ್ನು ಸಂಪರ್ಕಿಸಲು ಬಾಧಿತ ಜನರಿಗೆ ಪೂರಕ ಕಾನೂನು ತಜ್ಞರು ಮಾರ್ಗದರ್ಶನ ನೀಡುತ್ತಾರೆ.

ಪ್ರಕರಣಗಳನ್ನು / ಕೇಸ್ ಗಳನ್ನು ಪರಿಹರಿಸಲು ನಾಲ್ಕು ಅತ್ಯವಶ್ಯ ಕಾರ್ಯಗಳ ತೊಡಗುವಿಕೆ ಇರುತ್ತದೆ. ಪ್ರಕ್ರಿಯೆಯ ಉದ್ದಕ್ಕೂ ದಾಖಲಿಸುವ ಕಾರ್ಯವೊಂದನ್ನು ಹೊರತು ಪಡಿಸಿ, ಈ ನಾಲ್ಕು ಪರಿಹಾರ ಕಾರ್ಯಗಳನ್ನು ಕಾರ್ಯವಿಧಾನದ ಅನುಕ್ರಮ ಹಂತಗಳೆಂದು ತಿಳಿಯ ಬಹುದು.

### ಪ್ರಕ್ರಿಯೆ

1. ಆಯ್ಕೆ ಮತ್ತು ಗುರುತಿಸುವಿಕೆ
2. ದಾಖಲೆ ಸಂಗ್ರಹಣ
3. ವಿಶ್ಲೇಷಣೆ ಮತ್ತು ಕ್ರಿಯೆ
4. ವರದಿ ಸಲ್ಲಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು



# 3.1 ಪ್ರಕರಣದ ಆಯ್ಕೆ ಮತ್ತು ಗುರುತಿಸುವಿಕೆ

**ಪೂರಕ ಕಾನೂನು ತಜ್ಞರಲ್ಲಿಗೆ ಬಾಧಿತ ಜನರು ಅಹವಾಲನ್ನು / ಪ್ರಕರಣಗಳನ್ನು ಕೊಂಡು ತರುತ್ತಾರೆ. ಕೆಲವು ಸಂದರ್ಭಗಳಲ್ಲಿ / ಸನ್ನಿವೇಶಗಳಲ್ಲಿ, ಪ್ರಸ್ತುತ ಪ್ರದೇಶದ ಪರಿಚಯ ಇರುವ ಪೂರಕ ಕಾನೂನು ತಜ್ಞರಿಂದ ಪ್ರಕರಣಗಳು ಆಯ್ಕೆಗೊಳ್ಳುತ್ತವೆ.**

ಪ್ರತಿ ಪ್ರಕರಣ ಗಳೊಳಗೆ ಅಡಗಿರುವ ವಿಷಯಗಳನ್ನು ಗುರುತಿಸಿದ ನಂತರವೇ ಪ್ರಕರಣಗಳ ಆದ್ಯತೀಕರಣವನ್ನು ಮಾಡಬಹುದು. ಪರಿಸರೀಯ ನ್ಯಾಯ ಪ್ರಕರಣಗಳು ನಾನಾ ರೀತಿಯ ಕಾರಣಗಳನ್ನು ಮತ್ತು ಪರಿಣಾಮಗಳ ಮೂಲವನ್ನು ಹೊಂದಿರುವ ವಿಶಿಷ್ಟ ಜಟಿಲತೆಯೊಂದಡಗೂಡಿದ ಪ್ರಕರಣಗಳಾಗಿದ್ದು, ವ್ಯಾಪಕ ಪ್ರದೇಶಗಳನ್ನು ಮತ್ತು ಹೆಚ್ಚು ಸಂಖ್ಯೆಯ ಬಾಧಿತ ಜನರನ್ನು ಒಳಗೊಳ್ಳಿಸಿಕೊಂಡು, ಸಮುದಾಯಗಳಾದ್ಯಂತ ಕಾಲಾಂತರದಲ್ಲಿ ವಿವಿಧ ಪರಿಣಾಮಗಳನ್ನುಂಟು ಮಾಡುತ್ತವೆ. ಪ್ರಕರಣಗಳನ್ನು ಸಮರ್ಪಕವಾಗಿ ಗುರುತಿಸುವ ಉದ್ದೇಶದಿಂದ ಪೂರಕ ಕಾನೂನು ತಜ್ಞರು ಕೂಲಂಕಷವಾಗಿ ಮಾಹಿತಿಗಳನ್ನು ಕಲೆಹಾಕದಿದ್ದರೆ, ಅವೆಲ್ಲವನ್ನೂ ಅರ್ಥೈಸಿ ಕೊಳ್ಳುವುದು ಮತ್ತು ಅದರೊಟ್ಟಿಗೆ ಕೆಲಸ ಮಾಡುವುದು ಸುಲಭ ಸಾಧ್ಯವಲ್ಲ. ಪ್ರಕರಣವೊಂದನ್ನು ಗುರುತಿಸುವ ಪ್ರಕ್ರಿಯೆಯು ಕನಿಷ್ಠ ಪಕ್ಷ ಮೂರು ಹಂತಗಳನ್ನು ಒಳಗೊಂಡಿರುತ್ತದೆ.

1. ಬಾಧಿತ ಜನಗಳ ಗುಂಪುಗಳನ್ನು ಮತ್ತು ಅವರು ಎದುರಿಸುತ್ತಿರುವ ವಿವಿಧ ಪರಿಣಾಮಗಳನ್ನು ಗುರುತಿಸುವುದು
2. ಪರಿಣಾಮಗಳನ್ನು ಪರಿಹರಿಸುವುದರಲ್ಲಿ ಬಾಧಿತರು ಆ ಹಿಂದೆ ಮಾಡಿರುವ ಪ್ರಯತ್ನಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು
3. ಕಾನೂನು ಕೊಂಡಿ ಮತ್ತು ಗುಣಲಕ್ಷಣಗಳನ್ನು ಅಥವಾ, ಸಮಸ್ಯೆಯ ಮೂಲ/ಕಾರಣವನ್ನು ಗುರುತಿಸಿ ಸಮಸ್ಯೆಯ ನಿರೂಪಣೆಯನ್ನು ರೂಪಿಸುವುದು / ರಚಿಸುವುದು.



## ಬಾಧಿತ ಜನರನ್ನು ಮತ್ತು ಸಕ್ರಿಯ ಕಕ್ಷಿಗಾರರನ್ನು / ಸಮುದಾಯ ಸಹಭಾಗಿಗಳನ್ನು ಗುರುತಿಸುವುದು.

### ಸಮಸ್ಯೆಯನ್ನು ಅರಿತು ಕೊಳ್ಳುವುದು.

ಸಾಮಾನ್ಯವಾಗಿ, ಬಾಧಿತ ಜನರ ಒಂದು ಗುಂಪಿನಿಂದ ಅಥವಾ ಒಬ್ಬ ವ್ಯಕ್ತಿಯಿಂದ ಪ್ರಕರಣವು ಪೂರಕ ಕಾನೂನು ತಜ್ಞರಲ್ಲಿಗೆ ಕೊಂಡು ತರಲಾಗುತ್ತದೆ. ಅವರ ವಿಸ್ತೃತ ವಿವರಣೆಯ ಆಧಾರದ ಮೇಲೆ, ಸ್ಪಷ್ಟವಾಗಿ ನಮೂದಿಸಿದ ಸಮಸ್ಯೆಗಳ ಹಿಂದೆ ಇರುವ ವಿವಾದಾಂಶ ಮತ್ತು ಕಾರಣಗಳನ್ನು ಗುರುತಿಸಲು ಸಹಾಯಕ್ಕೆ ಬರುವ ಮಾಹಿತಿಯನ್ನು ಪಡೆಯಲು ಪೂರಕ ಕಾನೂನು ತಜ್ಞ ಮತ್ತಷ್ಟು ಆಳವಾಗಿ ತನಿಖೆ ಮಾಡುವರು. ಸಮಸ್ಯೆಗೆ ಸಂಬಂಧಿಸಿರಬಹುದಾದ ಅಧಿಕೃತ ದಾಖಲೆಗಳನ್ನು, ಮಾಧ್ಯಮ ವರದಿಗಳನ್ನು ಮತ್ತು ಇದರ ಸಂಬಂಧ ಲಭ್ಯವಿರುವ ವಿಷಯಗಳನ್ನು ಓದಿ ತಿಳಿದುಕೊಳ್ಳುವರು.

### ಬಾಧಿತಗೊಂಡ ಜನರನ್ನು ಗುರುತಿಸುವುದು

ಪೂರಕ ಕಾನೂನು ತಜ್ಞ/ತಜ್ಞೆಯು ಸಮಸ್ಯೆ ಇರುವ ಸ್ಥಳಕ್ಕೆ ಕ್ಷೇತ್ರ ಭೇಟಿ ಮಾಡಿ ಸಮಸ್ಯೆಯ ಪರಿಣಾಮಕ್ಕೊಳಗಾಗಿರುವ ವಿವಿಧ ಕ್ಷೇತ್ರಗಳನ್ನು ನಿಗದಿ ಪಡಿಸುವರು. ಇದಕ್ಕಾಗಿ, ಪೂರಕ ಕಾನೂನು ತಜ್ಞರು ಆ ಪ್ರದೇಶದಲ್ಲಿರುವ ಬೇರೆ ಬೇರೆ ಗುಂಪುಗಳು - ಮಹಿಳೆಯರು, ಯುವಕ ಯುವತಿಯರು, ವಿವಿಧ ಜಾತಿಗಳ ಸದಸ್ಯರು, ದೇಶೀಯ ಅಥವಾ ಬುಡಕಟ್ಟು ಗುಂಪುಗಳು, ಮತ್ತು ವಿವಿಧ ಜೀವನೋಪಾಯವುಳ್ಳ, ಅಂದರೆ, ಮೀನುಗಾರರು, ಕೃಷಿಕರು, ಅರಣ್ಯ ವಾಸಿಗಳು - ಈ ಮೊದಲಾದ ಗುಂಪುಗಳೊಂದಿಗೆ ಚರ್ಚೆ ಮಾಡುವರು. ಈ ಚರ್ಚೆಯು, ಪೂರಕ ತಜ್ಞರು ಸಮಸ್ಯೆಯನ್ನು ವಿವಿಧ ದೃಷ್ಟಿಕೋನಗಳಿಂದ ಅರ್ಥೈಸಿಕೊಳ್ಳುವುದರಲ್ಲಿ ಅವರಿಗೆ ಸಹಾಯ ಮಾಡುತ್ತದೆ.

### ಪರಿಣಾಮಗಳ ಅಂದಾಜು ಮಾಡುವುದು

ಪೂರಕ ಕಾನೂನು ತಜ್ಞರು ಬಾಧಿಸಲ್ಪಟ್ಟಿರುವ ಜನಗಳ ಮೊತ್ತ ಸಂಖ್ಯೆ ಅಂದಾಜು ಮಾಡುತ್ತಾರೆ ಅಥವಾ ಸಮಸ್ಯೆಯು ಪರಿಹಾರಗೊಂಡಾಗ, ಅದರ ಲಾಭವನ್ನು ಪಡೆಯುವ ಫಲಾನುಭವಿಗಳ ಮೊತ್ತ ಸಂಖ್ಯೆ,ಇವೆರಡನ್ನೂ ಅಂದಾಜು ಮಾಡುತ್ತಾರೆ. ಈ ಲೆಕ್ಕಾಚಾರಗಳು ಜಟಿಲವಾದದ್ದು. ಉದಾಹರಣೆಗೆ, ನದಿ ಮಾಲಿನ್ಯವು (ನದಿಯ) ಮೂಲದಿಂದ ಹಿಡಿದು ಕೆಳಗಿನವರೆಗೆ ಅದರ ಪಾತ್ರದಲ್ಲಿರುವ ಸಮಗ್ರ ಜನಸಂಖ್ಯೆಯನ್ನು ಬಾಧಿಸುವ ಸಾಧ್ಯತೆ ಇರುತ್ತದೆ. ಈ ಸಂಖ್ಯೆಗಳ ಸ್ಥೂಲ ಅಂದಾಜನ್ನು ಉತ್ಪತ್ತಿಸುವುದು ಉಪಯುಕ್ತ. ವ್ಯಕ್ತಿ ಮಟ್ಟದಲ್ಲಿ ಅಥವಾ ಕುಟುಂಬ ಮಟ್ಟದಲ್ಲಿ ಪರಿಹಾರಗಳನ್ನು ನೀಡ ಬೇಕಾದಂತಹ ಪ್ರಕರಣಗಳಲ್ಲಿ ಈ ಅಂಶವು ವಿಶೇಷವಾದ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ - ಉದಾ: ಮಾಲಿನ್ಯ ಪರಿಣಾಮದಿಂದಾಗಿ ಪರಿಹಾರ (ಧನ). ಕೆಲವು ಸಂದರ್ಭಗಳಲ್ಲಿ, - ನೇರವಾಗಿ ಬಾಧಿತರಾದವರು, ಪರೋಕ್ಷವಾಗಿ ಬಾಧಿತರಾದವರು, ಈಗಾಗಲೇ ಬಾಧಿತರಾದವರು ಹಾಗೂ ಇನ್ನು ಮುಂದೆ ಬಾಧಿತರಾಗಬಹುದಾದವರು - ಈ ರೀತಿ (ಅಂದಾಜಿಸಲಾಗಿರುವ) ಸಂಖ್ಯೆಗಳನ್ನು ಪ್ರತ್ಯೇಕಿಸ ಬಹುದು (ಬೇರ್ಪಡಿಸ ಬಹುದು).

### ಸಕ್ರಿಯ ಕಕ್ಷಿಗಾರರನ್ನು / ಸಮುದಾಯ ಸಹಭಾಗಿಗಳನ್ನು (ಪಾಲುದಾರರನ್ನು) ಸಜ್ಜುಗೊಳಿಸುವುದು

ಪೂರಕ ಕಾನೂನು ತಜ್ಞರು ಬಾಧಿತರಾಗಿರುವ ಎಲ್ಲಾ ಪಕ್ಷಗಳೊಂದಿಗೆ ಮಾತನಾಡಿ, ಯಾರ್ಯಾರು ಪೂರಕ ಕಾನೂನು ತಜ್ಞರೊಂದಿಗೆ ಸಕ್ರಿಯವಾಗಿ ಕೆಲಸ ಮಾಡಲು ಸಿದ್ಧರಿದ್ದಾರೆ ಎಂದು ಕಂಡುಕೊಳ್ಳುತ್ತಾರೆ. ಈ ತಂಡವನ್ನು ಸಮುದಾಯ ಸಹಭಾಗಿಗಳೆಂದು (ಪಾಲುದಾರರೆಂದು) ಅಥವಾ ಕಕ್ಷಿಗಾರ ತಂಡವೆಂದು ಗುರುತಿಸಲಾಗುತ್ತದೆ. ವಿಶೇಷವಾಗಿ, ಮಹಿಳೆಯರು, (ವಿವಿಧ) ಜಾತಿ / ಸಮುದಾಯ ಗುಂಪುಗಳು ಮತ್ತು (ವಿವಿಧ) ಜೀವನೋಪಾಯ ಗುಂಪುಗಳು - ಇವರೆಲ್ಲರ ಪ್ರಾತಿನಿಧ್ಯವಿದ್ದು ಬಹುರೂಪತೆ ಹೊಂದಿರುವ ಸಮುದಾಯ ಸಹಭಾಗಿ / ಗುಂಪು (ತಂಡ) ಇರುವುದು ಅತ್ಯುತ್ತಮ.

## ಕುಮಟ ತ್ಯಾಜ್ಯದ ಸುರಿಕೆ / ಗುಡ್ಡೆ ಹಾಕುವಿಕೆ



ಕರ್ನಾಟಕ ರಾಜ್ಯದ ಕುಮ್ಟಾ ನಲ್ಲಿ ತ್ಯಾಜ್ಯದ ಗುಡ್ಡೆ

### ಬಾಧಿತ ಜನರನ್ನು ಮತ್ತು ಸಮುದಾಯ ಸಹಭಾಗಿಗಳನ್ನು ಗುರುತಿಸುವುದು

ಭಾರತ ದೇಶದ ಉತ್ತರ ಕರ್ನಾಟಕ ರಾಜ್ಯದಲ್ಲಿರುವ ಕುಮಟ ಎಂಬ ಊರಿನ ಮುನ್ಸಿಪಲ್ ಕಾರ್ಪೊರೇಶನ್, ಮುನ್ಸಿಪಾಲಿಟಿ ಯಿಂದ ಸಂಗ್ರಹಿಸಿದ ತ್ಯಾಜ್ಯವನ್ನು ಮುರೂರ್ ಬೆಟ್ಟದ ಮೇಲೆ ಸುರಿಯುತ್ತಿದ್ದಾರೆ. ಬೆಟ್ಟದ ಅತಿ ಸಮೀಪದಲ್ಲಿ ಮೂರು ಹಳ್ಳಿಗಳಿವೆ ಹಾಗೂ ಈ ಹಳ್ಳಿಗಳಲ್ಲಿ ವಾಸಿಸುವ ಸುಮಾರು 50 ಕುಟುಂಬಗಳು ತ್ಯಾಜ್ಯದ ಗುಡ್ಡೆಯಿಂದ ಹೊರ ಸೂಸುವ ದುರ್ನಾತದೊಂದಿಗೆ ವಾಸಿಸುತ್ತಿದ್ದಾರೆ. ಈ ತ್ಯಾಜ್ಯವು ಗಾಳಿ ಮತ್ತು ಅಲ್ಲೆ ಹರಿಯುತ್ತಿರುವ ಝರಿಗಳ ಮೂಲಕ ಹತ್ತಿರದಲ್ಲಿರುವ ಹಳ್ಳಿಗಳಿಗೆ ಹರಿದು ಬರುತ್ತಿದೆ. ಈ ಸಮಸ್ಯೆಯನ್ನು ಹದ್ದಿನಲ್ಲಿಡದಿದ್ದರೆ, ತ್ಯಾಜ್ಯವು ಇನ್ನೂ ಹೆಚ್ಚುತ್ತಾ ಹೋಗಿ ಮತ್ತಿನ್ನು 200 ಕುಟುಂಬಗಳನ್ನು ಬಾಧಿಸುವ ಸಾಧ್ಯತೆ ಇದೆ. ಮಳೆಗಾಲದಲ್ಲಿ ತ್ಯಾಜ್ಯದ ಗುಡ್ಡೆಯಿಂದ ನೀರು ಬೆಟ್ಟದ ತಪ್ಪಲಿನಲ್ಲಿರುವ ಎಲ್ಲಾ ಬಾವಿಗಳಿಗೆ ಹರಿದು ಬಂದು ಸೇರುತ್ತವೆ.  ಗುಡ್ಡೆಗೆ ಬಹು ಸಮೀಪದಲ್ಲಿರುವ 30 ಮಂದಿ, ಸಮುದಾಯ ಪೂರಕ ಕಾನೂನು ತಜ್ಞರೊಬ್ಬರೊಡಗೂಡಿ,  ಮುನ್ಸಿಪಲ್ ಕಾರ್ಪೊರೇಶನ್ ತ್ಯಾಜ್ಯವನ್ನು ಬೆಟ್ಟದ ಮೇಲೆ ಸುರಿಯದಂತೆ, ಹಾಗೂ ತ್ಯಾಜ್ಯವನ್ನು ಆ ಪ್ರದೇಶದ ಗ್ರಾಮೀಣ ಪ್ರದೇಶಗಳಲ್ಲಿ ವಿಲೇವಾರಿ ಮಾಡಲು ದೀರ್ಘಾವಧಿ ಪರಿಹಾರಗಳನ್ನು ಕಂಡುಕೊಳ್ಳುವಂತೆ ಮಾಡಲು ಪ್ರಯತ್ನಿಸಿದರು. ಈ ಪ್ರಕರಣದಲ್ಲಿ, ಮುನ್ಸಿಪಲ್ ಕಾರ್ಪೊರೇಶನ್ ತ್ಯಾಜ್ಯದ ಸುರಿಯುವಿಕೆಯನ್ನು ನಿಲ್ಲಿಸುವಂತೆ ಮಾಡಲು ಪೂರಕ ಕಾನೂನು ತಜ್ಞರೊಂದಿಗೆ ಕೆಲಸ ಮಾಡಿದವರು ಬಾಧೆಗೆ ಒಳಪಟ್ಟಿದ್ದ 30 ಜನ ಸಮುದಾಯ ಸಹಭಾಗಿಗಳು. ಬೆಟ್ಟದ ಸಮೀಪದಲ್ಲಿ ವಾಸಿಸುತ್ತಿರುವ 50 ಕುಟುಂಬದವರು ಬಾಧೆಗೊಳಗಾದ ಜನರಾಗಿದ್ದರು ಮತ್ತು ಸಮಸ್ಯೆ ಹದ್ದಿನೊಳಗೆ ಇರದೆ ಹೋಗಿ, ಹಾಗೂ ಪರಿಹಾರ ಕಂಡುಕೊಳ್ಳದೆ ಇದ್ದರೆ,  ಆ ಮುಂದಿನ ಭವಿಷ್ಯದಲ್ಲಿ ಇತರ ಹಳ್ಳಿಗಳಲ್ಲಿದ್ದ 200 ಕುಟುಂಬಗಳು ಬಾಧೆಗೆ ಒಳಪಡುವ ಸಾಧ್ಯತೆ ಇರುತ್ತದೆ.

## ಹಿಂದಿನ ಪ್ರಯತ್ನಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು / ಹಿಂದಿನ ಪ್ರಯತ್ನಗಳ ಮಾಹಿತಿ ಸಂಗ್ರಹಣೆ

ಪೂರಕ ಕಾನೂನು ತಜ್ಞರು ಎದುರಿಸುವ ಪರಿಸರೀಯ ನ್ಯಾಯದ ಬಹುತೇಕ ಸಮಸ್ಯೆಗಳು ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿರುವಂತಹ ಹಳೆಯ ವಿವಾದಾಂಶಗಳು. ಈ ಎಲ್ಲಾ ವರ್ಷಗಳಲ್ಲಿ, ಬಾಧಿತ ಸಮುದಾಯಗಳು ತಾವು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅನೇಕ ಕ್ರಮಗಳಲ್ಲಿ ತೊಡಗಿದ್ದಿರಬಹುದು. ಈ ಕ್ರಮಗಳು ಸಾಮಾನ್ಯವಾಗಿ  - ತಮ್ಮ ಮೌಖಿಕ ದೂರುಗಳೊಂದಿಗೆ ಆ ಪ್ರದೇಶದ ಆಡಳಿತಾತ್ಮಕ ಪ್ರಧಾನಾಧಿಕಾರಿಯನ್ನು ಸಂಧಿಸುವುದು, ಸ್ಥಳೀಯ ರಾಜಕಾರಣಿಯಿಂದ ಸಹಾಯವನ್ನು ಕೋರುವುದು, ಸಮಸ್ಯೆಗೆ ಕಾರಣವಾದ ಉದ್ಯಮ ಅಥವಾ ಸಂಸ್ಥೆ ಯೊಂದಿಗೆ ದೂರಗಳನ್ನು ಆರೋಪಿಸುವುದು, ಅಥವಾ, ಸಮಸ್ಯೆಯು ಅತ್ಯಂತ ಉತ್ಕಟ ಮಟ್ಟಕ್ಕೆ ಹೋಗಿದ್ದರೆ ಪೋಲಿಸ್ (ಠಾಣೆ) ಗೆ ದೂರಿಡುವುದು  - ಈ ಮುಂತಾದವಾಗಿರುತ್ತವೆ.  ಕೆಲವು ಪ್ರದೇಶಗಳಲ್ಲಿ ಬಾಧಿತರಾದ ಮತ್ತು ಸಜ್ಜುಗೊಂಡಿರುವ ಜನರು, ಸಾಮೂಹಿಕ ಕ್ರಮಗಳಲ್ಲಿ ತೊಡಗಿರುವ ಸ್ಥಳಗಳಲ್ಲಿ - ಸರ್ಕಾರೇತರ ಸಂಸ್ಥೆಗಳ (ಎನ್ ಜಿ ಒ)  ಸಹಾಯ, ಅಥವಾ, ನ್ಯಾಯಾಲಯ ವ್ಯವಹಾರಗಳಿಗಾಗಿ, ಇಲ್ಲವೆ, ಉನ್ನತ ಮಟ್ಟದ ಸಮರ್ಥನೆಗಾಗಿ ವಕೀಲರ ಸಹಾಯವನ್ನು ಪಡೆದಿರಬಹುದು.  ಇಲ್ಲಿ / ಈ ಸಂದರ್ಭಗಳಲ್ಲಿ ಪೂರಕ ಕಾನೂನು ತಜ್ಞರು, ಮೇಲಿನ ಎಲ್ಲಾ ಪ್ರಯತ್ನಗಳು ಸಮಸ್ಯೆಗಳನ್ನು ಪರಿಹರಿಸದೆ ಹೋಗಿದ್ದಲ್ಲಿ ಆ ಸಮಸ್ಯೆಗಳನ್ನು ಆದ್ಯತೀಕರಿಸುವುದು ಅಗತ್ಯವೇ ಹೊರತು, ಆದೇ ಪ್ರಯತ್ನ, ಕ್ರಮಗಳ ಮೂಲಕ ಇನ್ನೇನು ಪರಿಹಾರ ಒದಗಿ ಬರುವ ಘಟ್ಟದಲ್ಲಿ ಇರುವಂತಹ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇಲ್ಲವೆಂದು ಒತ್ತಿ ಹೇಳುವ ಅಗತ್ಯ ಇಲ್ಲಿಲ್ಲ.

ಬಾಧಿತ ಜನರ ಪೂರ್ವ (ಹಿಂದಿನ) ಪ್ರಯತ್ನಗಳನ್ನು ಒಟ್ಟುಗೂಡಿಸಿದ ದಾಖಲೆಯು, ಪ್ರಮುಖವಾದ ದೂರುಗಳನ್ನು ಅರ್ಥೈಸಿಕೊಳ್ಳಲು, ಆ ಹಿಂದೆ ಒಗ್ಗೂಡಿಸಿದ ಪುರಾವೆಗಳು, ಸಂಪರ್ಕಿಸಿದ ಸಂಘ ಸಂಸ್ಥೆಗಳು, ಕಾರ್ಯ ವಿಧಾನಗಳು(ತಂತ್ರಗಳು) ಮತ್ತು ಪರಿಣಾಮಗಳು, - ಇವೆಲ್ಲವೂ ಪೂರಕ ಕಾನೂನು ತಜ್ಞರಿಗೆ, ಬಹು ಮುಖ್ಯವಾಗಿರುತ್ತದೆ. ಈ ದತ್ತಾಂಶಗಳು, ಪರಿಹಾರ ಪಡೆಯುವ ಸಲುವಾಗಿ ಸಂಭಾವ್ಯ ಮಾರ್ಗದ ನಕ್ಷೆಯನ್ನು ತಯಾರಿಸಲು ಕಾನೂನು ತಜ್ಞರಿಗೆ ಸಹಾಯವನ್ನೊದಗಿಸುತ್ತವೆ.  ಪೂರ್ವದಲ್ಲಿ ಯಾವ್ಯಾವ ಕಾರ್ಯವಿಧಾನಗಳು (ತಂತ್ರಗಳು) ಉತ್ತಮ ಫಲ ನೀಡುವುದರಲ್ಲಿ ಸಮರ್ಪಕವಾಗಿದ್ದವು ಹಾಗೂ ಪ್ರಸ್ತುತ ಸಂದರ್ಭದಲ್ಲಿ ಯಾವ ಕಾರ್ಯವಿಧಾನಗಳು ಪರಿಹಾರ ಒದಗಿಸಲು ಸಮರ್ಪಕವಾಗಿರ ಬಹುದು ಅಥವಾ ಸಮರ್ಪಕವಾಗದಿರ ಬಹುದು ಎಂಬುವುದನ್ನು ಅರ್ಥೈಸಿಕೊಳ್ಳಲು ಇದು (ಮಾರ್ಗ ನಕ್ಷೆ) ಸಹಾಯ ಮಾಡುತ್ತದೆ.  ಕೆಲಸಗಳ ದ್ವಿಗುಣೀಕರಣವನ್ನು ಮತ್ತು ಸಂಪನ್ಮೂಲಗಳು ಪೋಲಾಗಿ ಹೋಗುವುದನ್ನು ಇದು ತಪ್ಪಿಸುತ್ತದೆ. ಪೂರಕ ಕಾನೂನು ತಜ್ಞರು ಈ ಮೊದಲೆ ಮಾಡಲಾಗಿರುವ ಕೆಲಸಗಳ ಲಾಭವನ್ನು ಪಡೆಯ ಬಹುದು ಮತ್ತು ಪ್ರಸಕ್ತ ದತ್ತಾಂಶ ಮತ್ತು ಆ ಹಿಂದೆ ಒಗ್ಗೂಡಿಸಿರುವ ದಾಖಲೆಗಳನ್ನು ಸಮರ್ಥವಾಗಿ ಬಳಸ ಬಹುದು.

ಪೂರಕ ಕಾನೂನು ತಜ್ಞರು, ಕ್ಷೇತ್ರ ಭೇಟಿಗಳ ಮೂಲಕ ಮತ್ತು ಹಿಂದಿನ ಪ್ರಯತ್ನಗಳಲ್ಲಿ ಭಾಗವಹಿಸಿದ್ದ ವಿವಿಧ ಕಾರ್ಯಕರ್ತರೊಂದಿಗೆ ಮಾತನಾಡಿ ಈ ಮಾಹಿತಿಯನ್ನು ಸಂಗ್ರಹಿಸುತ್ತಾರೆ.



ಬಾಧಿತ ಸಮುದಾಯದ ನಾಯಕರೊಂದಿಗೆ ಪೂರಕ ಕಾನೂನು ತಜ್ಞರೊಬ್ಬರ ಸಂವಾದ

## ಸಮಸ್ಯೆಯ ನಿರೂಪಣೆಯನ್ನು ಸಿದ್ಧಪಡಿಸುವುದು

ಪ್ರಕರಣದ ಕಾರಣವನ್ನು ಒಂದೆರಡು ವಾಕ್ಯಗಳಲ್ಲಿ ವರ್ಣಿಸುವುದೇ ಸಮಸ್ಯೆಯ ನಿರೂಪಣೆ ಎಂದಾಗುತ್ತದೆ ಪೂರಕ ಕಾನೂನು ತಜ್ಞರು, ಬಾಧಿತ ಸಮುದಾಯಗಳು ಎದುರಿಸಿದ ನಿರ್ದಿಷ್ಟ ಪರಿಣಾಮಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿ ಸಮಸ್ಯೆಯ ನಿರೂಪಣೆಯನ್ನು ಸಿದ್ಧ ಪಡಿಸುತ್ತಾರೆ. ಪೂರಕ ಕಾನೂನು ತಜ್ಞರಿಗೆ ಲಭ್ಯವಿರುವ ಕಾನೂನಿನ ವ್ಯಾಪಕ ಜ್ಞಾನದ ಸಹಾಯದಿಂದ, ಆಕೆ / ಆತನು, ಈ ಪರಿಣಾಮಗಳ, ಮತ್ತು ಒಂದು ಅಥವಾ ಅದಕ್ಕೂ ಹೆಚ್ಚಾದ ಉಲ್ಲಂಘನೆ ಇಲ್ಲವೆ ಪರಿಸರೀಯ ಅನನುಸರಣೆ, ಇವುಗಳ ನಡುವೆ ಸಂಬಂಧವನ್ನು ಸ್ಥಾಪಿಸುತ್ತಾರೆ. ಯಾರು ಕಾನೂನನ್ನು ಉಲ್ಲಂಘಿಸಿ ಪರಿಣಾಮಗಳನ್ನು ಉಂಟುಮಾಡುತ್ತಿದ್ದಾರೆ ಎಂಬುವುದನ್ನೂ ಸಹ ಇದು ದೃಢಪಡಿಸುತ್ತದೆ.

ಪರಿಣಾಮದ ಸ್ಫುಟ ವರ್ಣನೆಯೊಂದಿಗೆ ಈ ಸಮಸ್ಯೆಯ ನಿರೂಪಣೆಯನ್ನು ಸಿದ್ಧಪಡಿಸುವಾಗ, ಮತ್ತು, ಅದಕ್ಕೆ ಸಂಬಂಧಿಸಿದ ಅನನುಕರಣೆಯ ಆರೋಪವನ್ನು ಹೊತ್ತಿರುವ ಒಂದು ನಿರ್ದಿಷ್ಟ ಸಂಘ / ವಸ್ತು - ಇವುಗಳ ಮೇಲೆ ಆಡಳಿತಾತ್ಮಕ ಕ್ರಮವನ್ನು ವಿಧಿಸಿ, ಕೇಸ್ ಅನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಈ ನಿರೂಪಣೆಯು ಅತ್ಯಂತ ಮುಖ್ಯವಾಗಿರುತ್ತದೆ. ಸಮಸ್ಯೆಯ ಪರಿಣಾಮಗಳ ಉಲ್ಲೇಖನವನ್ನು ಬೆಂಬಲಿಸುವ ಆವಶ್ಯಕ ಪುರಾವೆಗಳನ್ನು ಕಲೆಹಾಕಲು, ಮತ್ತು ಆ ವಿಷಯವಾಗಿ ಸಂಬಂಧಿತ ಸಂಘಗಳ ಮೊರೆ ಹೋಗಿ, ಕಂಡುಕೊಳ್ಳಬಹುದಾದ ಪರಿಹಾರಗಳನ್ನು ಹುಡುಕಲು ಪೂರಕ ಕಾನೂನು ತಜ್ಞರಿಗೆ ಮತ್ತು ಸಮುದಾಯ ಸಹಭಾಗಿಗಳಿಗೆ ಈ ನಿರೂಪಣೆಯು ಸಹಾಯ ಮಾಡುತ್ತದೆ.



ಮಯನ್ಮಾರ್ ನಲ್ಲಿ ಪೂರಕ ಕಾನೂನು ಯೋಜನಾ ತಂಡದ ಸದಸ್ಯರು ಸಮಸ್ಯೆಯ ನಿರೂಪಣೆ ರಚಿಸುವ ಕಾರ್ಯದಲ್ಲಿ ನಿರತರಾಗಿರುವುದು.






'ಬೆಳವಣಿಗೆಗೆ ಅನುಮತಿ ಇಲ್ಲದ ಕರಾವಳಿ ವಲಯ - ಗುಜರಾತ್ (ನೊ ಡೆವೆಲಪ್ಮೆಂಟ್ ಝೋನ್ ಆಫ್ ದ ಕೋಸ್ಟ್ - ಎನ್.ಡಿ.ಝೆಡ್)

ಸಮಸ್ಯೆ ನಿರೂಪಣೆಯನ್ನು ರೂಪಿಸುವುದು

## ಕರಾವಳಿ ನಿಯಂತ್ರಣ ವಲಯದಲ್ಲಿ (ಸಿ.ಆರ್.ಜೆಡ್) ಹಾನಿಕಾರಕ ರಾಸಾಯನಿಕಗಳ ಸಂಗ್ರಹ

ಪರಿಸರೀಯ ನ್ಯಾಯ ಪೂರಕ ಕಾನೂನು ತಜ್ಞರೊಬ್ಬರು ಕೆಲಸ ಮಾಡಿದ ಕೇಸ್ ನ (ಪ್ರಕರಣದ) ಸಮಸ್ಯೆಯ ನಿರೂಪಣೆ ಇಂತಿದೆ - "ಸಿ.ಆರ್.ಜೆಡ್ - ಎನ್ ಡಿ ಝೆಡ್ ಪ್ರದೇಶದಲ್ಲಿ ಸಂಬಂಧಿತ ಸಂಸ್ಥೆ ಒಂದರ ವತಿಯಿಂದ ಮುಂಬರುವ ಹಾನಿಕಾರಕ ರಾಸಾಯನಿಕಗಳ ಸಂಗ್ರಹಣಾ ಘಟಕವು 'ಮಿಥ' ಬಂದರಿನಲ್ಲಿ ವಾಸಿಸುವ ನಿವಾಸಿಗಳ ಜೀವನ ಮತ್ತು ಆರೋಗ್ಯದ ಮೇಲೆ ಹಾನಿಯನ್ನೊಡ್ಡುತ್ತಿದೆ." ಈ ಸಮಸ್ಯೆ ನಿರೂಪಣೆಯು, ಯೋಜನೆಯ ಪ್ರಕಾರ, ಅದರ ಕಾನೂನು ಬಾಹಿರ ನೆಲೆ ಮತ್ತು ಅದರ ಸಂಭಾವ್ಯ ಪರಿಣಾಮ - ಇವೆಲ್ಲವನ್ನೂ ಒಗ್ಗೂಡಿಸಿ ನಿಚ್ಚಳವಾಗಿ ಉಲ್ಲೇಖಿಸಿದೆ. ಕರಾವಳಿ ನಿಯಂತ್ರಣಾ ವಲಯವು (ಕೋಸ್ಟಲ್ ರೆಗ್ಯುಲೇಶನ್ ಝೋನ್ - ಸಿ.ಆರ್.ಜೆಡ್), ಭಾರತದ ಕರಾವಳಿ ಪ್ರದೇಶದುದ್ದಕ್ಕೂ ಎಲ್ಲೆಯನ್ನು ನಿಗದಿ ಪಡಿಸಿರುವ ವಲಯವಾಗಿದ್ದು ಅದರ ವ್ಯಾಪ್ತಿಯೊಳಗೆ ಯಾವುದೇ ರೀತಿಯ 'ಅಭಿವೃದ್ಧಿ' ನಿಯಂತ್ರಿಸಲಾಗಿರುತ್ತದೆ. ಈ ಸಿ.ಆರ್.ಜೆಡ್ ವ್ಯಾಪ್ತಿಯ ಒಳಗೆ ಗುರುತಿಸಲ್ಪಟ್ಟಿರುವ ಬೆಳವಣಿಗೆಗೆ ಅನುಮತಿ ಇಲ್ಲದ ವಲಯ' (ನೊ ಡೆವಲಪ್ ಮೆಂಟ್ ವಲಯ - ಎನ್. ಡಿ. ಜೆಡ್), ಇದರಲ್ಲಿ ಯಾವುದೇ ರೀತಿಯ ಅಭಿವೃದ್ಧಿ / ಬೆಳವಣಿಗೆ ನಿಷೇಧಿಸಲಾಗಿರುತ್ತದೆ. ಈ ನಿರೂಪಣೆಯು, ಕಾನೂನು ಬದ್ಧವಾಗಿ ನಿಷೇಧಿತ ವಲಯದಲ್ಲಿ ಇರುವ ಯೋಜನೆಯ ನೆಲೆಯನ್ನು (ಸ್ಪಷ್ಟವಾಗಿ) ಸೂಚಿಸುತ್ತದೆ, ಮತ್ತು, ಆ ಯೋಜನೆಯ ಕಾರಣದಿಂದ ಅತ್ಯಂತ ಹೆಚ್ಚಾದ ಬಾಧೆಗೆ ಒಳಗಾಗುವ ಸಮುದಾಯವನ್ನೂ ಸೂಚಿಸುತ್ತದೆ.

ಪೂರಕ ಕಾನೂನು ತಜ್ಞರು, 'ಚಿಲ್' (CHILL factor) ಎಂಬ ಅಂಶವನ್ನು ಬಳಸಿ ತಾವು ತೊಡಗಬೇಕಿರುವ ಕಾರ್ಯಗಳನ್ನು ಆದ್ಯತೀಕರೀಸ ಬಹುದು, ಅಂದರೆ, ತಮ್ಮ ಪ್ರಯತ್ನಗಳು ಯಶಸ್ಸನ್ನು ಹೊಂದಬೇಕೆಂದರೆ ಪ್ರಮುಖವಾಗಿ ಐದು (5) ನಿಯತಾಂಕಗಳುಳ್ಳ ಒಂದು ಗುಚ್ಛವನ್ನು / ಶ್ರೇಣಿಯನ್ನು ಪೂರಕ ಕಾನೂನು ತಜ್ಞರು ಬಳಸಬಹುದು.

## ಸಮುದಾಯ ಸಹಭಾಗಿಗಳು ಅಥವಾ ಕಕ್ಷಿಗಾರರು

ಪ್ರಕರಣವು ಸಮುದಾಯ ಸಹಭಾಗಿಗಳನ್ನು ಅಥವಾ ಕಕ್ಷಿಗಾರರನ್ನು ಹೊಂದಿರುತ್ತದೆ. ಇವರು ಸರ್ವ ಸಮಾನ ಸಮಸ್ಯೆಯಿಂದ ನೊಂದ ಗುಂಪಾಗಿರುತ್ತದೆ. ಈ ಗುಂಪು, ಪೂರಕ ಕಾನೂನು ತಜ್ಞರೊಂದಿಗೆ ಕೈ ಜೋಡಿಸಿ ಸಮಸ್ಯೆಯನ್ನು ಪರಿಹಾರಗೊಳಿಸುವುದರಲ್ಲಿ ಬದ್ಧರಾಗಿರುತ್ತಾರೆ.

## ಇತಿಹಾಸ

ಸಮುದಾಯ ಸಹಭಾಗಿಗಳು ಯಾವುದೇ ಒಂದು ರೀತಿಯ ಅಥವಾ ಹಲವು ರೀತಿಯ ನಿವಾರಣೋಪಾಯಗಳನ್ನು ಕಂಡುಕೊಳ್ಳಲು ತಂತಾವೇ ಮುಂದಾಗಿರುವ ಪ್ರಕರಣಗಳನ್ನು ಮೊತ್ತಮೊದಲಾಗಿ ಆಯ್ಕೆ ಮಾಡಲಾಗುತ್ತದೆ. ಈ ಆಯ್ಕೆಯು, ಎನ್ ಜಿ ಒಗಳ ಮೂಲಕ, ನ್ಯಾಯಾಲಯಗಳ ಮೂಲಕ ಅಥವಾ ಇನ್ಯಾವುದೇ ಮಾರ್ಗ ದಿಂದ ಆಗಿರುವಂತಹದ್ದಾಗಿರಬಹುದು. ಇದಕ್ಕೆ ಅಪವಾದವಾಗಿ, ತುರ್ತು ಸನ್ನಿವೇಶ / ಸಂದರ್ಭ, ವಿಪತ್ತುಗಳು ಅಥವಾ ನಿರ್ದಿಷ್ಟವಾದ ಜಟಿಲ ಇಲ್ಲವೆ ಅಸಾಧಾರಣ ಪ್ರಕರಣವೂ ಸಹ ಇರಬಹುದು.

## ಪರಿಣಾಮ

ಭಾರಿ ಪರಿಣಾಮಕ್ಕೆ ಒಳಗಾಗಿರುವ ಬಾಧಿತರ ಸಂಖ್ಯೆ ಅಥವಾ ಅದರಿಂದ ಲಾಭ ಹೊಂದಬಹುದಾದ ಜನಗಳ ಸಂಖ್ಯೆ - ಇವುಗಳ ನಿರ್ದಿಷ್ಟತೆಯನ್ನನುಸರಿಸಿ ಪ್ರಕರಣವನ್ನು ಆದ್ಯತೀಕರಿಸಲಾಗುತ್ತದೆ.


## ಸ್ಥಳ

ಪೂರಕ ಕಾನೂನು ತಜ್ಞರ ಸಾಮಿಪ್ಯತೆಗನುಗುಣವಾಗಿ ಅಥವಾ ಅವರ ಸ್ಥಳೀಯ ಪ್ರದೇಶದಲ್ಲಿರುವ ಪ್ರಕರಣಗಳನ್ನು ಆಯ್ಕೆ ಮಾಡಲಾಗುವುದರಿಂದ, ಆಕೆ / ಆತ, ನಿಯತವಾಗಿ ಕ್ಷೇತ್ರ ಭೇಟಿ ಮಾಡುವ ಮೂಲಕ ಹಾಗೂ ತರುವಾಯದ ಸಭೆಗಳ ಮೂಲಕ ಬಾಧಿತ ಸಮುದಾಯದೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರುತ್ತಾರೆ.

## ಕಾನೂನು ಕೊಂಡಿ

ನೇರ ಕಾನೂನು ಷರತ್ತಿನ ಬೆಂಬಲವಿಲ್ಲದಂತಹ ಪ್ರಕರಣಗಳನ್ನು ಬಿಟ್ಟು ಪರಿಣಾಮವನ್ನು ಪರಿಹರಿಸ ಬಹುದಾದ ಮತ್ತು ಕಾನೂನು ಕೊಂಡಿಗೆ ಸಿಕ್ಕುವಂತಹ ಕೇಸು / ಪ್ರಕರಣಗಳು ,(ಉಲ್ಲಂಘನೆಯ ಫಲವಾಗಿ, ಅಥವಾ, ಕಾನೂನುಗಳ, ಆಡಳಿತಾತ್ಮಕ ರೂಢಿಗಳ, ನ್ಯಾಯಾಂಗ ಆದೇಶ-ಇವುಗಳ ಅನನುಸರಣೆಯ ಫಲವಾಗಿ ಹೊರಹೊಮ್ಮಿರುವ ಕೇಸ್ ಗಳು) ಆದ್ಯತೀಕರಿಸಲ್ಪಡುತ್ತವೆ. ಆದಾಗ್ಯೂ, ಕೆಲವು ಸನ್ನಿವೇಶಗಳಲ್ಲಿ, ಹೊಸ ಕಾನೂನು ಷರತ್ತುಗಳನ್ನು ಅಥವಾ, ಅಸ್ತಿತ್ವದಲ್ಲಿರುವ ಕಾನೂನುಗಳ ತಿದ್ದುಪಡಿಗೆ ಕೇಸ್ ಗಳ ಮೂಲಕ ಸಂಗ್ರಹಿಸಿದ ಪುರಾವೆಗಳನ್ನು ಬಳಸುವ ಉದ್ದೇಶವಿದ್ದಲ್ಲಿ, ಸ್ಪಷ್ಟ ಕಾನೂನು ಕೊಂಡಿ ಇಲ್ಲದೆ ಇರುವ ಕೇಸ್ ಗಳನ್ನೂ ಆದ್ಯತೀಕರಿಸಲಾಗುತ್ತದೆ.





# 3.2 ಕೇಸ್ / ಪ್ರಕರಣದ ದಾಖಲೀಕರಣ

ಪ್ರತಿಯೊಂದು ಪ್ರಕರಣದ ದಾಖಲೀಕರಣವು ಪೂರಕ ಕಾನೂನು ತಜ್ಞರ ಕಾರ್ಯದಲ್ಲಿ ಅತ್ಯಂತ ಪ್ರಮುಖವಾದದ್ದು. ಪ್ರತಿಯೊಂದು ಪ್ರಕರಣಕ್ಕೆ, ಪ್ರಕರಣದ ಪಥವನ್ನು ಅನುಸರಿಸಿ ಅನ್ವೇಷಿಸುವ ಒಂದು ಫಾರಮ್ಮು (ಕೇಸ್ ಟ್ರ್ಯಾಕಿಂಗ್ ಫಾರಮ್) ಇದ್ದು, ಅದರಲ್ಲಿ ಪೂರಕ ಕಾನೂನು ತಜ್ಞರು ತಮ್ಮ ಕೇಸ್ ಗಳನ್ನು ಮತ್ತು ತಾವು ತೆಗೆದುಕೊಂಡ ಕ್ರಮಗಳನ್ನು ದಾಖಲಿಸುತ್ತಾರೆ. ಈ ಫಾರಮ್ ನ ಕೊನೆಯಲ್ಲಿ ಇರುವ ಕ್ರಮಗಳ ಪ್ರಗತಿಯ (ವ್ಯವಸ್ಥಿತ) ದಾಖಲೆ (ಅಕ್ಷನ್ ಲಾಗ್) ಯಲ್ಲಿ ಕೈಗೊಂಡ ಕ್ರಮಗಳ ವಿವರಗಳನ್ನು ಮತ್ತು ಸಮರ್ಥನೆಯನ್ನು ದಾಖಲಿಸಲಾಗಿರುತ್ತದೆ. ಕೇಸ್ / ಪ್ರಕರಣದ ಪರಿಹಾರದತ್ತ ಹೆಜ್ಜೆಯನ್ನು ತೆಗೆದುಕೊಂಡ ಪ್ರತಿಬಾರಿಯೂ ಫಾರಮ್ ಮತ್ತು ಕೇಸ್ ಲಾಗ್, ಇವೆರೆಡನ್ನೂ ನವೀಕರಿಸಲಾಗುತ್ತದೆ.

ಅನುಕೂಲದ ದೃಷ್ಟಿಯಿಂದ, ಕೇಸ್ ಬಗ್ಗೆ ತೆಗೆದುಕೊಂಡ ಒಂದೊಂದು ಹೆಜ್ಜೆ ಮತ್ತು ಕೇಸ್ ಫಾರಂ ಮತ್ತು ಲಾಗ್ ನಲ್ಲಿ ದಾಖಲು ಮಾಡುವುದು, ಇವೆರೆಡರ ನಡುವೆ ಒಂದು ದಿನಕ್ಕಿಂತ ಹೆಚ್ಚಾದ ವಿಳಂಬ ವಿರಬಾರದು. ಕೇಸ್ ಒಂದನ್ನು ಆಯ್ಕೆ ಮಾಡಿದಂದಿನಿಂದ ಅದನ್ನು ಪೂರ್ಣಗೊಳಿಸುವವರೆಗೂ, ದಾಖಲೀಕರಣ ಮಾಡತಕ್ಕದ್ದು. ಇದು ಪೂರಕ ಕಾನೂನು ತಜ್ಞರ ಕೆಲಸಕ್ಕೆ ಅತ್ಯಂತ ಪ್ರಮುಖ ವಿಷಯವಾದ್ದರಿಂದ, ಈ ಕೆಲಸಕ್ಕೆ ಅವರು ವ್ಯವಸ್ಥಿತ ರೀತಿಯಲ್ಲಿ ಸಾಕಾಷ್ಟು ಸಮಯವನ್ನು ತಮ್ಮ ಕೆಲಸದ ವೇಳೆಯಲ್ಲಿ ಕಾದಿರಿಸಿಡತಕ್ಕದ್ದು.

## ಪ್ರಕರಣದ ಪಥವನ್ನು ಅನುಸರಿಸಿ ಅನ್ವೇಷಿಸುವ ಫ಼ಾರಮ್ (ಕೇಸ್ ಟ್ರ್ಯಾಕಿಂಗ್ ಫ಼ಾರಮ್)

ಪ್ರಕರಣದ ಪಥವನ್ನು ಅನುಸರಿಸಿ ಅನ್ವೇಷಿಸುವ ಫ಼ಾರಮ್ಮು(ಕೇಸ್ ಟ್ರ್ಯಾಕಿಂಗ್ ಫ಼ಾರಮ್), ಬಾಧಿತ ಗುಂಪುಗಳ ಕುರಿತು ಮಾಹಿತಿ, ಸಮಸ್ಯೆಯ (ಸಂಪೂರ್ಣ) ವಿವರ, ಸಮುದಾಯ ಸಹಭಾಗಿಗಳ ಅಥವಾ ಕಕ್ಷಿಗಾರರ ಬಗ್ಗೆ ವಿವರ, ಆ ವರೆಗೆ ಕೇಸ್ ಬಗ್ಗೆ ಏನೇನು ಮಾಡಲಾಗಿದೆ ಅಥವಾ ಪೂರಕ ಕಾನೂನು ತಜ್ಞರು, ಸಮುದಾಯ ಸಹಭಾಗಿಗಳು ಅಥವಾ ಕಕ್ಷಿಗಾರರು ಪರಿಹಾರ ಕಂಡುಕೊಳ್ಳಲು ಕೈಗೊಂಡ ಕಾರ್ಯಗಳ ಬಗ್ಗೆ ಮಾಹಿತಿ, ಇವೆಲ್ಲವನ್ನು ದಾಖಲಿಸಲು ಸಹಾಯ ಮಾಡುತ್ತದೆ. ಈ ಫ಼ಾರಮ್ ಕೈಗೊಂಡ ಕ್ರಮ / ಕಾರ್ಯಗಳಿಗೆ ಸಂಬಂಧಿತ ಏಜೆನ್ಸಿಗಳು ಹೇಗೆ ಸ್ಪಂದಿಸಿವೆ ಎಂಬುದನ್ನೂ ಮತ್ತು ಆ ನಂತರ ಅದನ್ನು ಮುಂದೆ ಅನುಸರಿಸಿಕೊಂಡು ಹೋಗುವ ಯೋಜನೆಯನ್ನೂ ಸಹ ದಾಖಲಿಸುತ್ತದೆ.

### ಪ್ರಕರಣದ ಪಥವನ್ನು ಅನುಸರಿಸುವ ಫ಼ಾರಮ್ ಈ ಕೆಳಗಿನ ಉದ್ದೇಶಗಳನ್ನು ಪೂರೈಸುತ್ತದೆ

1. ಸೂಚಿಸಿರುವ ಕ್ರಮದಲ್ಲಿ ಭರ್ತಿ ಮಾಡಿದರೆ, ಈ ಫ಼ಾರಮ್ ಹೆಜ್ಜೆಯಾನುಕ್ರಮವಾಗಿ ಕೇಸ್ ಒಂದನ್ನು ಆಯ್ಕೆ ಮಾಡಲು ಮತ್ತು ಪರಿಹರಿಸಲು ಕೈಗೊಂಡ ಪ್ರಕ್ರಿಯೆಯ ವಿವರವನ್ನು ಒದಗಿಸುತ್ತದೆ.


2. ಕೇಸ್ ನ್ನು ಪರಿಹರಿಸಲು, ಅನುಸರಿಸ ಬೇಕಾದ ಮೊಟ್ಟಮೊದಲ ಮಾರ್ಗಗಳ ಆಯ್ಕೆಗಳ ಒಂದು ಶ್ರೇಣಿಯನ್ನು ಪೂರಕ ಕಾನೂನು ತಜ್ಞರಿಗೆ ಇದು ಒದಗಿಸುತ್ತದೆ.

3. ಕೇಸನ್ನು (ಕೊನೆಗೊಳಿಸಿ) ಮುಚ್ಚುವ ಸಮಯದಲ್ಲಿ, ಪ್ರಕರಣದ ಪಥವನ್ನು ಅನುಸರಿಸುವ ಫ಼ಾರಮ್ ಪೂರಕ ಕಾನೂನು ತಜ್ಞರಿಗೆ ತಾವು ಕೈಗೊಂಡ ಕ್ರಮ ಮತ್ತು ಅದರ ಪರಿಹಾರದ ಬಗ್ಗೆ ಪರ್ಯಾಲೋಚಿಸಲು ಸಹಾಯವನ್ನೊದಗಿಸುತ್ತದೆ.

4. ಈ ಪ್ರಕರಣದ ಪಥವನ್ನು ಅನುಸರಿಸಿ ಅನ್ವೇಷಿಸುವ ಫ಼ಾರಮ್, ಪೂರಕ ಕಾನೂನು ತಜ್ಞರು ಮಾಡಬೇಕಾದ ಪ್ರಕರಣ ಕಾರ್ಯದ ಮೌಲ್ಯೀಕರಣಕ್ಕೆ ಆಧಾರವಾಗಿರುತ್ತದೆ ಮತ್ತು ಪ್ರಕರಣಗಳನ್ನು ಇನ್ನೂ ಹೆಚ್ಚು ಉತ್ತಮವಾಗಿಸುವ ನಿಟ್ಟಿನಲ್ಲಿ ನಿರಂತರ ಕಲಿಕೆಗೆ ಅವಕಾಶವನ್ನೊದಗಿಸುತ್ತದೆ.

5. ಸಂಬಂಧಿತ ಕೇಸ್ ಬಗ್ಗೆ ಇದು ಮಾಹಿತಿಯ ಸಂಪತ್ತನ್ನೇ ಹೊಂದಿರುವುದರಿಂದ, ಕಾನೂನಿಗೆ ಸಂಬಂಧಿಸಿದ ವಿವಿಧ ರೀತಿಯ ನೀತಿ ಸಂದೇಶಗಳಿಗೆ ಅವಶ್ಯವಿರುವ ಪುರಾವೆಗಳನ್ನು ಒಗ್ಗೂಡಿಸಿ ಸ್ಥಾಪಿಸಲು, ಅದರ ಅನುಷ್ಠಾನ, ಅದರ ಫಲಿತಾಂಶಗಳು, ಹಾಗೂ ಸಮುದಾಯದ ಮೇಲೆ ಉಂಟಾಗುವ ಪರಿಣಾಮಗಳು ಮತ್ತು ಅವರಿಗೆ ಅತ್ಯಂತ ಅವಶ್ಯವಾಗಿ ಬೇಕಿರುವ ಪರಿಹಾರಗಳಿಗೆ ಈ ಫ಼ಾರಮ್ ಸಹಾಯ ಮಾಡುತ್ತದೆ,




Case Tracking Form- Environment Justice Program 2017

ELC Name/Code: District/Taluka: Case No. & Title
Complaint Registration Date: / / Closure Date: / / Verification Date: / / after 3 months of date of end of violation)

Information about Community Partners (CP)

Name of the Community Partner (CP) Group (if any- eg. Durga Self Help Group, Jampani Panchayat, Sagar Fishermen Association)

CP Type
☐ Community
☐ Women's group
☐ Panchayat
☐ Any Other

# Male | # Female

(Attach a list of name, address & phone no. of all CPs Mention # CP who are repeat CPs in the adjacent coloumn

Repeat from earlier cases:
Repeat from ongoing cases:

Livelihood/Occupation (give numbers in the space provided)
☐ Agriculture
☐ Fisheries
☐ Salt
☐ NMFP collector
☐ Fish Trader
☐ Government Employee
☐ Professional
☐ NTFP collector
☐ Self Employed
☐ Student
☐ Unemployed
☐ Any other:


How did the CP know about the ELC?Training/Referral/Any other
Why did the CP approach the ELC? Lack of time/Lack of resources/Seeks support in visiting institutions/Don't know how else to pursue the case/Any other

ಪ್ರಕರಣದ ಪಥವನ್ನು ಅನುಸರಿಸುವ ಫ಼ಾರಮ್, ಕೇಸ್ ಒಂದನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಪರಿಹರಿಸಲು ಬೇಕಿರುವ ಸಂಬಂಧಿತ ಮಾಹಿತಿಯನ್ನು ಹೊಂದಿರುವ ಒಂದು ದಾಖಲೆ ಆಗಿರುತ್ತದೆ. ಇದರ ಸಂಪೂರ್ಣ ಕೇಸ್ ಟ್ರ್ಯಾಕಿಂಗ್ ನಮೂನೆಯನ್ನು https://namati.org/resources/case-form-environmental-justice-india/ ಯಿಂದ ಡೌನ್ ಲೋಡ್ ಮಾಡಬಹುದು.

ನಿಮ್ಮ ಸಂದರ್ಭ ಮತ್ತು ಕೇಸ್ ಪ್ರಕಾರಕ್ಕೆ ಸರಿಹೊಂದುವಂತೆ ಈ ನಮೂನೆಯನ್ನು (ನೀವು) ಪರಿಷ್ಕರಿಸ ಬಹುದು.

## ಪೂರಕ ಕಾನೂನು ತಜ್ಞರ ಲಾಗ್ (ಕ್ರಮಗಳ ಪ್ರಗತಿಯ (ವ್ಯವಸ್ಥಿತ) ದಾಖಲೆ)

ಪೂರಕ ಕಾನೂನು ತಜ್ಞರು ಕ್ರಮಗಳ ಪ್ರಗತಿಯ (ವ್ಯವಸ್ಥಿತ) ದಾಖಲೆ [ಕೇಸ್ ಅಕ್ಶನ್ ಲಾಗ್] ಯಲ್ಲಿ ಪ್ರಕರಣ ಸಂಬಂಧಿತವಾಗಿ ತಾವು ಮಾಡಿದ್ದನ್ನು ಬರೆದು ಭರ್ತಿ ಮಾಡುತ್ತಾರೆ. ಪೂರಕ ಕಾನೂನು ತಜ್ಞರು ಸಾಧ್ಯವಾದಷ್ಟು ವಿವರಗಳೊಂದಿಗೆ ಮತ್ತು ತಾರೀಖುಗಳೊಂದಿಗೆ ಕಾಲಾನುಕ್ರಮಿಕವಾಗಿ ಭರ್ತಿಸತಕ್ಕದ್ದು. ದಾಖಲಿಸ ತಕ್ಕ ಕ್ರಮಗಳು ಈ ಮುಂತಾದವು - ದಾಖಲೆಗಳ ಸಂಗ್ರಹಣೆ, ಅಧಿಕಾರಿ ಅಥವಾ ಸಮಿತಿಯೊಂದಿಗೆ ನಡೆಸಿದ ಸಮಾಲೋಚನಾ ಸಭೆ, ಅಥವಾ, ಮಾಹಿತಿ ಹಕ್ಕಿನಡಿಯಲ್ಲಿ(ಆರ್ ಟಿ ಐ) ಭರ್ತಿಸಿದ ಅರ್ಜಿ. ಸರಕಾರದ/ಸರಕಾರದಿಂದ ಮಾಹಿತಿಗಳನ್ನು ಪಡೆಯಲು ಇರುವ ನಿಯಂತ್ರಕ ಕಾಯಿದೆಗಳು ಬೇರೆ ದೇಶಗಳಲ್ಲಿ, ವಿಭಿನ್ನ ವ್ಯಾಪ್ತಿಗಳನ್ನು ಹೊಂದಿರುವ ವಿಭಿನ್ನ ಶೀರ್ಷಿಕೆಗಳಡಿಯಲ್ಲಿ ಲಭ್ಯವಿರುತ್ತದೆ. (ಭಾರತದೇಶದ ಮಾಹಿತಿ ಪಡೆಯುವ ಕಾನೂನು 'ಮಾಹಿತಿ ಹಕ್ಕಿನ ಕಾಯಿದೆ, 2005' [ಆರ್ ಟಿ ಐ,2005] ಎಂದು ಕರೆಯಲ್ಪಡುತ್ತದೆ). ಕೈಗೊಂಡ ಕ್ರಮಗಳನ್ನು ದಾಖಲೆಯೊಂದಿಗೆ, ಅಧಿಕೃತ ಸಮಾಲೋಚನಾ ಸಭೆಗಳ ಸಂಕ್ಷಿಪ್ತ ವರದಿಯ, ಆರ್ ಟಿ ಐ ಅರ್ಜಿಗಳ ಮತ್ತು ಅಲ್ಲಿಂದ ಸ್ವೀಕರಿಸಿದ ಪ್ರತಿಕ್ರಿಯೆಗಳ - ಇವೆಲ್ಲದರ ನಕಲು ಮಾಡಿದ ಪತ್ರಗಳನ್ನು ಆಕ್ಷನ್ ಲಾಗ್ ಗೆ ಲಗತ್ತಿಸ ತಕ್ಕದ್ದು. ಕೈಗೊಂಡ ಕ್ರಮಗಳ ಕುರಿತು ಇರುವ ಎಲ್ಲಾ ಪುರಾವೆಗಳು ಒಂದು ನಿರ್ದಿಷ್ಟ ಸ್ಥಳದಲ್ಲಿ ಮತ್ತು ಯಾವುದೇ ಸಮಯದಲ್ಲಿ ಪರಾಮರ್ಶೆಗೆ ಲಭ್ಯವಿರುವಂತೆ ಇದು ಖಚಿತಪಡಿಸುತ್ತದೆ



ಪೂರಕ ಕಾನೂನು ತಜ್ಞರೊಬ್ಬರು ದಿನ-ದಿಂದ-ದಿನಕ್ಕೆ ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಬಂದಿರುವ ಆಕ್ಷನ್ ಲಾಗ್





ವ್ಯವಸ್ಥಾಪೂರಕ ದಾಖಲೀಕರಣವು ಪೂರಕ ಕಾನೂನು ತಜ್ಞರ ತಂಡಗಳಿಗೆ ಅವಶ್ಯವಿರುವಾಗಲೆಲ್ಲಾ ತಮ್ಮ ಕೇಸ್ ಗಳನ್ನು ಮತ್ತು (ತಾವು) ಕಲಿತ ಪಾಠಗಳನ್ನು ಪ್ರಸ್ತುತ ಪಡಿಸಲು ಸಹಾಯ ಮಾಡುತ್ತದೆ.

## ಪ್ರಕರಣದ ಕಡತ

ಪ್ರಕರಣವನ್ನು ಅನುಸರಿಸಿ ಅನ್ವೇಷಿಸುವ ಫ಼ಾರಮ್, ಅಕ್ಷನ್ ಲಾಗ್, ಕೈಗೊಂಡ ಕ್ರಮಗಳ ಸಾಕ್ಷ್ಯಚಿತ್ರ ಪುರಾವೆಗಳು, ಸಾಕ್ಷ್ಯಾಧಾರಿತ ಕ್ರಮಗಳು, ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಇನ್ನಿತರ ಪೂರಕ ದಾಖಲೆಗಳು-ಇವೆಲ್ಲವನ್ನು ಒಗ್ಗೂಡಿಸಿ, ಪೂರಕ ಕಾನೂನು ತಜ್ಞರು ಒಂದು ಕಡತವನ್ನು ಸೃಷ್ಟಿಸುವರು.

! ಮುಖ್ಯ ಟಿಪ್ಪಣಿಗಳು

ಪ್ರಕರಣವೊಂದರ ಮಾಹಿತಿಯು ಸೂಕ್ಷ್ಮ ಸ್ವರೂಪದ್ದಾಗಿದ್ದು ಹೆಸರುಗಳನ್ನು ಅಥವಾ ಇನ್ನಿತರ ವಿವರಗಳನ್ನು ಬಹಿರಂಗ ಪಡಿಸುವ ಅಪಾಯವಿದ್ದರೆ, ಮಾಹಿತಿಯನ್ನು ಕೋಡ್ ಮಾಡಬಹುದು (ಸಂಕೇತ ಭಾಷೆಗೆ ತಿರುಗಿಸಬಹುದು) ಅಥವಾ, ಪ್ರಕರಣದ ಫ಼ಾರಮ್ ಅನಾಮೀಕರಿಸ ಬಹುದು.

ಪ್ರಕರಣವನ್ನು ಅನುಸರಿಸಿ ಅನ್ವೇಷಿಸುವ ಫ಼ಾರಮ್ಮಿನಲ್ಲಿ, ಇನ್ಯಾವುದೇ ಮಾಹಿತಿಗೆ / ಮಾಹಿತಿ ದಾಖಲೆಗೆ ವ್ಯವಸ್ಥೆ ಇಲ್ಲದಿದ್ದಲ್ಲಿ, ಪೂರಕ ಕಾನೂನು ತಜ್ಞರು ಮತ್ತೊಂದು ಹಾಳೆಯನ್ನು ಲಗತ್ತಿಸಿ, ಅದರಲ್ಲಿ ಆ ಮಾಹಿತಿಯನ್ನು ವಿವರವಾಗಿ ಬರೆಯಬಹುದು.

ಪೂರಕ ಕಾನೂನು ತಜ್ಞರು ಸಾಧ್ಯವಾದಷ್ಟು ಮಟ್ಟಿಗೆ ದಾಖಲೆಗಳ ರೂಪದಲ್ಲಿ ದೊರಕಿಸಿಕೊಳ್ಳಬಹುದಾದ ಮಾಹಿತಿಯನ್ನು, - ಬಾಧಿತ ಸಮುದಾಯಗಳವತಿಯಿಂದ ಸಲ್ಲಿಸಲಾಗಿದ್ದ ಹಳೆಯ ಮನವಿ ಮತ್ತು ಅರ್ಜಿಗಳನ್ನು, ಪ್ರಕರಣ ಅಥವಾ ವಿವಾದಾಂಶದ ಬಗ್ಗೆ ವರದಿಯಾಗಿರುವ ಮಾಧ್ಯಮ ವರದಿಗಳು, ಅನುಮತಿಗಳ ರುಜುವಾತು, ಉಚ್ಚಾಟನೆಯ ಇಸ್ತಿಹಾರು (ಸೂಚನಾ ಪತ್ರ), ಅಥವಾ, ಅನುಮತಿಯ ನಿರಾಕರಣ ಪತ್ರ, ಮತ್ತು ನ್ಯಾಯಲಯದ ಆದೇಶಗಳು - ಇವನ್ನು ಸಂಗ್ರಹಿಸ ತಕ್ಕದ್ದು. ಈ ಎ ಲ್ಲಾ ದಾಖಲೆಗಳ ಛಾಯಾನಕಲು ಪ್ರತಿಗಳನ್ನು ಮಾಡಿ, ಅವುಗಳ ಮೂಲಪ್ರತಿಗಳನ್ನು (ಅವುಗಳ) ಮಾಲಿಕರಿಗೆ ಹಿಂತಿರುಗಿಸುವುದು. ಈ ಛಾಯಾನಕಲುಗಳನ್ನು, ಪ್ರಕರಣವನ್ನು ಅನುಸರಿಸಿ ಅನ್ವೇಷಿಸುವ ಫ಼ಾರಮ್ಮಿನೊಂದಿಗೆ ಇಡಬಹುದು.

ಕೇಸ್ ಫಾರಮ್ ನಲ್ಲಿ ಯಾವುದೇ ಪ್ರಶ್ನೆ ಅಥವಾ ಅಂಕಣವನ್ನು (ಕಾಲಮ್ನ್), ಖಾಲಿಯಾಗಿ ಬಿಡುವಂತಿಲ್ಲ. ಅದು ಪ್ರಸಕ್ತವಲ್ಲದಿದ್ದಲ್ಲಿ, ಅಂಕಣವನ್ನು ಖಾಲಿಯಾಗಿ ಬಿಡುವುದರ ಬದಲು 'ಪ್ರಸಕ್ತವಲ್ಲಾ' ಎಂದು ಬರೆದು ಭರ್ತಿ ಮಾಡುವುದು ಉತ್ತಮ. ಅದಕ್ಕೆ ಉತ್ತರ ದೊರಕದಿದ್ದಲ್ಲಿ, 'ಹೇಳಲಿಕ್ಕಾಗುವುದಿಲ್ಲ' ಅಥವಾ 'ಗೊತ್ತಿಲ್ಲ' ಎಂದು ಬರೆದು ಭರ್ತಿ ಮಾಡುವುದು ಒಳಿತು.



# 3.3 ಕೇಸ್ ನ ವಿಶ್ಲೇಷಣೆ ಮತ್ತು (ಕೈಗೊಳ್ಳಬೇಕಾದ) ಕ್ರಮ

ಸಂಬಂಧಿತ ಮಾಹಿತಿಯನ್ನು ಕಲೆಹಾಕಿ ಮತ್ತು ತನಿಖೆಯಮೂಲಕ, ಪೂರಕ ಕಾನೂನು ತಜ್ಞರು ಕೇಸ್ ಬಗ್ಗೆ ವಸ್ತುನಿಷ್ಠ ತಿಳುವಳಿಕೆಯನ್ನು ಬಳಸಿಕೊಳ್ಳುತ್ತಾರೆ. ಇದಕ್ಕಾಗಿ, ಸಮಸ್ಯೆ ಇರುವ ಜಾಗಕ್ಕೆ ಹಲವು ಬಾರಿ ಸಂದರ್ಶನ ನೀಡಬೇಕಾಗಬಹುದು, ಅಲ್ಲಿನ ಸಂದರ್ಭ ಅಥವಾ ಸಮಸ್ಯೆಯ ವಿವರಗಳ ಅರಿವು ಇರುವ ಇತರ ಸಮುದಾಯಗಳೊಂದಿಗೆ ಮತ್ತು ವ್ಯಕ್ತಿಗಳೊಂದಿಗೆ ಮಾತುಕತೆ ನಡೆಸ ಬೇಕಾಗಬಹುದು, ಸ್ಥಳೀಯ ದಿನ ಪತ್ರಿಕೆಗಳನ್ನು ಕ್ಷಿಪ್ರವಾಗಿ ಓದಿನೋಡುವುದು ಮತ್ತು ಟೆಲಿವಿಜನ್ ವರದಿಗಳು ಹಾಗೂ (ಕೇಸ್ ಗೆ) ಸಂಬಂಧಸಿದ ಕಾನೂನು ಮತ್ತು ನೀತಿಗಳನ್ನು ಓದಿ ತಿಳಿದುಕೊಳ್ಳುವದು – ಈ ಎಲ್ಲಾ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ.

ಈ ಹಂತದಲ್ಲಿ, ಕೆಲವು ಪ್ರಕರಣಗಳ ವಿಷಯದ ಬಗ್ಗೆ ಹೆಚ್ಚೆಚ್ಚು ಮಾಹಿತಿ ಲಭ್ಯವಾಗುತ್ತಿದ್ದಂತೆ, ಸಮಸ್ಯೆ ನಿರೂಪಣೆಯನ್ನು ಪುನಃಪರಿಶೀಲಿಸಿ ತಿದ್ದ (ಪರಿಷ್ಕರಿಸ) ಬೇಕಾಗಬಹುದು. ಹೊಸ ಮಾಹಿತಿಯ ಆಧಾರದ ಮೇಲೆ ಸಮಸ್ಯೆ ನಿರೂಪಣೆಯನ್ನು ಪರಾಮರ್ಶಿಸುವುದು ಹಾಗೂ ಪರಿಷ್ಕರಿಸುವುದು ಉತ್ತಮ ಪರಿಪಾಠವೇ ಹೊರತು ಪೂರಕ ಕಾನೂನು ತಜ್ಞರ ಅಥವಾ ಸಮುದಾಯ ಸಹಭಾಗಿಗಳ / ಕಕ್ಷಿಗಾರರ ವೈಫಲ್ಯವೆಂದು ಯಾವುದೇ ರೀತಿಯಲ್ಲಿ ಸೂಚಿಸುವದಿಲ್ಲ. ಕಲೆಹಾಕಿರುವ ಮಾಹಿತಿಯ ಆಧಾರದ ಮೇಲೆ, ಪೂರಕ ಕಾನೂನು ತಜ್ಞರು, ಕಾರ್ಯ ತಂತ್ರಗಳನ್ನು ಅಭಿವೃದ್ಧಿಗೊಳಿಸುವರು ಹಾಗೂ ಸಮಸ್ಯೆಯ ಪರಿಹಾರಕ್ಕೆ ತಾವು ಸಂಧಿಸಬೇಕಾದ ಸಂಘ ಸಂಸ್ಥೆಗಳನ್ನು ಗುರುತಿಸುವರು.

## ಪ್ರಕರಣವನ್ನು ವಿಶ್ಲೇಷಿಸುವುದು

### ಕರಾವಳಿ ನಿಯಂತ್ರಣ ವಲಯದಲ್ಲಿ (ಸಿ ಆರ್ ಜೆಡ್) ಹಾನಿಕಾರಕ ರಾಸಾಯನಿಕಗಳ ಸಂಗ್ರಹಣೆ

ಪುಟ 19 ರಲ್ಲಿ ಉಲ್ಲೇಖಿಸಿರುವ ಪೂರಕ ಕಾನೂನು ತಜ್ಞರ ಪ್ರಕರಣವನ್ನು ಅನುಸರಿಸಿಕೊಂಡು, ಆತನು ಅಲ್ಲಿ ವಾಸಿಸುತ್ತಿದ್ದ ಜನರನ್ನು ಸಂದರ್ಶಿಸಿದಾಗ ಸಿ ಆರ್ ಜೆಡ್ ಪ್ರದೇಶದಲ್ಲಿ ಸಂಗ್ರಹಣೆ ಘಟಕದ ನಿರ್ಮಾಣ ನಡೆಯುತ್ತಲೇ ಇದ್ದು ಆ ಸ್ಥಳದಲ್ಲಿರುವ ಜನಗಳಿಗೆ ಅದು ಬಾಧಿಸುತ್ತಿದೆ ಎಂದು ಅವರು ಕಂಡು ಕೊಂಡರು. ಆ ಸ್ಥಳಕ್ಕೆ ಕ್ಷೇತ್ರ ಭೇಟಿ ಮಾಡಿದಾಗ, ಘಟಕದ ಸಮೀಪದಲ್ಲೆ ಒಂದು ಪಾಠಶಾಲೆ ಇರುವುದು ಅವರಿಗೆ ಕಂಡು ಬಂತು. ಹಾಗಾಗಿ, ಮಿಥಾ ಬಂದರಿನ ನಿವಾಸಿಗಳಲ್ಲದೆ, ಅವರೊಂದಿಗೆ ಶಾಲಾ ಮಕ್ಕಳ ಆರೋಗ್ಯಕ್ಕೂ ಆ ಘಟಕವು ಹಾನಿಯನ್ನೊದಗಿಸುತ್ತಿದೆ ಎಂದು ಅವರಿಗೆ ತಿಳಿಯಿತು. ಆ ಹಿಂದಯೆ, ಅಲ್ಲಿನ ಸ್ಥಳೀಯರು ಅಲ್ಲಿಯ ಜಿಲ್ಲಾ ಕಲೆಕ್ಟರ್ ಸಮ್ಮುಖದಲ್ಲಿ ತಮ್ಮ ಕಳವಳವನ್ನು ವ್ಯಕ್ತ ಪಡಿಸಿದ್ದರೆಂಬ ವಿಷಯವೂ ಅವರಿಗ ತಿಳಿದು ಬಂತು.

ಈ ಪ್ರಕರಣದಲ್ಲಿ ಒಂದು ಮುಖ್ಯವಾದ ಸುಳಹು ಯೋಜನೆಯ ಬಗ್ಗೆ ಮಾಹಿತಿ ಸಂಗ್ರಹಿಸುವ ಮೂಲಕ ದೊರೆಯಿತು. ಪೂರಕ ಕಾನೂನು ತಜ್ಞರು ಯೋಜನೆಗೆ ನೀಡಿದ ಪರಿಸರ ಪರವಾನಗಿ ಕಾಗದ ಪತ್ರವನ್ನು ಓದುತ್ತಿದ್ದಾಗ, ಯೋಜನೆಯ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದ್ದ ಹಾಗೂ ಆ ನಂತರದ ಪರವಾನಿಗಿ ಪತ್ರದಲ್ಲಿ ಪ್ರಸ್ತಾಪಿಸಿದ್ದ ಯೋಜನೆಯ ಸ್ಥಳವು, ಮತ್ತು ಆ ಯೋಜನೆಯು ಸದ್ಯದಲ್ಲಿ ನಿರ್ಮಾಣವಾಗುತ್ತಿರುವ ಸ್ಥಳ, ಎರಡೂ ಬೇರೆಯೇ ಆಗಿತ್ತು. ಹಾಗಾಗಿ, ಪ್ರಕರಣವು ಈಗ ಸಿ ಆರ್ ಜೆಡ್ ಉಲ್ಲಂಘನೆಯ ಕುರಿತಷ್ಟೇ ಅಲ್ಲದೆ, ದೋಷಯುಕ್ತ ಮಾಹಿತಿಯನ್ನೊದಗಿಸಿ, ಅದರ ಆಧಾರದ ಮೇಲೆ ಪರಿಸರ ಪರವಾನಿಗಿಯನ್ನು ಪಡೆದ ವಿಷಯವಾಗಿತ್ತು.



ಗುಜರಾತ್ ನಲ್ಲಿ, ಸಿ ಆರ್ ಜೆಡ್ ಕಾನೂನಿನ ಉಲ್ಲಂಘನೆ ಆಗಿ, ಎನ್ ಡಿ ಜೆಡ್ ಪ್ರದೇಶದಲ್ಲಿರುವ ರಾಸಾಯನಿಕ ಸಂಗ್ರಹಣಾ ಘಟಕ.



ಗುಜರಾತ್ ನಲ್ಲಿ, ಪೂರಕ ಕಾನೂನು ತಜ್ಞರು ಕಲ್ಲಿದ್ದಲಿನ ಘಟಕದಿಂದ ಹೊರಬೀಳುವ ಧೂಳು ಅಲ್ಲಿಯ ತರಕಾರಿ ಬೆಳೆಯುವ ಜಮೀನುಗಳ ಮೇಲೆ ಉಂಟುಮಾಡುತ್ತಿರುವ ಪರಿಣಾಮಗಳನ್ನು / ಪ್ರಭಾವವನ್ನು ತನಿಖೆ ಮಾಡುತ್ತಾರೆ

ಕಾನೂನು ತಜ್ಞರು ಸಮಸ್ಯೆ (ಕೇಸ್) ಗಳನ್ನು ಪರಿಹರಿಸಲು ಹಲವಾರು ಕಾರ್ಯತಂತ್ರಗಳನ್ನು ಉಪಯೋಗಿಸುವರು ಮತ್ತು ಒಂದೇ ಸಮಸ್ಯೆಯನ್ನು ಪರಿಹರಿಸುವಾಗ ಒಂದಕ್ಕೂ ಹೆಚ್ಚು ಕಾರ್ಯ ತಂತ್ರಗಳನ್ನು ಉಪಯೋಗಿಸುವರು. ಈ ಕಾರ್ಯತಂತ್ರಗಳು, ಈ ಮುಂದಿನ ವಿಷಯಗಳನ್ನು ಒಳಗೊಂಡಿರುತ್ತದೆ – ವಾಸ್ತವಾಂಶದ ಅರಿವು, ಅಧಿಸೂಚನೆಗಳು, ಸರ್ಕಾರಿ ಸುತ್ತೋಲೆ / ಆದೇಶಗಳು, ಸಮಸ್ಯೆಗೆ ಪ್ರಸಕ್ತವಾಗಿರಬಹುದಾದ ನ್ಯಾಯಾಲಯದ ತೀರ್ಪುಗಳು / ಆದೇಶಗಳು – ಈ ಮುಂತಾದವು. ಪೂರಕ ಕಾನೂನು ತಜ್ಞರು ಸಮುದಾಯ ಸಹಭಾಗಿಗಳಿಗೆ / ಕಕ್ಷಿಗಾರರಿಗೆ, ಕಾನೂನು ಪ್ರಕ್ರಿಯೆಯ ಬಗ್ಗೆ, ಮತ್ತು, ಪ್ರಕರಣದ ಸ್ವರೂಪಕ್ಕನುಗುಣವಾಗಿ ಸಮಸ್ಯೆಗಳ ನಿಭಾವಣೆಗೆ ಇರುವ ಆಯ್ಕೆಗಳ ಬಗ್ಗೆ ಉಪದೇಶ ನೀಡಲೆಂದೇ ತರಬೇತಿ ಪಡೆದಿರುತ್ತಾರೆ. ಪೂರಕ ಕಾನೂನು ತಜ್ಞರು, ಸಮಸ್ಯೆಯ / ಪ್ರಕರಣದ ಮೇಲೆ ಪ್ರಭಾವ ಬೀರಬಹುದಾದ ಕಾನೂನುಗಳ , ಮೊರೆ ಹೋಗಬಹುದಾದ ಸಂಸ್ಥೆಗಳ ಮತ್ತು ಪರಿಹಾರ ಮಾರ್ಗಗಳ - ಇವೆಲ್ಲದರ ಬಗ್ಗೆ ಸಮದಾಯ ಸಹಭಾಗಿಗಳೊಂದಿಗೆ/ಕಕ್ಷಿಗಾರರೊಂದಿಗೆ ಚರ್ಚಿಸುತ್ತಾರೆ.

ಈ ಚರ್ಚೆಗಳ ನಂತರ, ಪ್ರಕರಣವ ಕುರಿತು ಸಾಮಾನ್ಯವಾಗಿ ಅಪೇಕ್ಷಿಸುವಂತಹ ಫಲಿತಾಂಶ ಹೊಂದಲು ಅವರು ಜಂಟಿಯಾಗಿ ಯೋಜನಾಕ್ರಮವನ್ನು ಅಭಿವೃದ್ಧಿಗೊಳಿಸುತ್ತಾರೆ. ಈ ಯೋಜನಾಕ್ರಮವು ಈ ಭಾಗದಲ್ಲಿ ವಿವರಿಸಿರುವ ಹಲವಾರು ಪರಸ್ಪರ ಪೂರಕ ಕಾರ್ಯತಂತ್ರಗಳ ಸಂಯೋಜನೆ ಆಗಿರುತ್ತದೆ.



## ಕಾನೂನುಗಳ ಬಗ್ಗೆ ಅರಿವನ್ನು ಮೂಡಿಸುವುದು

ನ್ಯಾಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಮೂಲಕಾರಣವನ್ನು ಗುರುತಿಸಿ ಎದುರಿಸಲು ಮತ್ತು ಪರಿಹಾರ ಪಡೆಯಲು ಬಾಧಿತ ಸಮುದಾಯದವರಿಂದ ತಿಳುವಳಿಕೆ ಪೂರಿತ ಭಾಗವಹಿಸುವಿಕೆಯನ್ನು ಉತ್ಪತ್ತಿಸಲು ಕಾನೂನು ತರಬೇತಿಗಳು ವಿಶೇಷವಾಗಿ ಉಪಯುಕ್ತವಾಗಿರುತ್ತವೆ. ಅನ್ಯಾಯವನ್ನು ತಡೆಯಲೆಂದೇ ಅಥವಾ ಪರಿಹರಿಸಲೆಂದೇ (ಅಸ್ತಿತ್ವದಲ್ಲಿ) ಇರುವ ಕಾನೂನು ವಿಷಯಗಳಲ್ಲಿ ಸಮುದಾಯಗಳಿಗೆ ಅರಿವನ್ನು ಮೂಡಿಸುವ ಪ್ರಕ್ರಿಯೆಯು ಕಾನೂನು ಸಬಲೀಕರಣದ ಜೀವಾಳವಾಗಿರುತ್ತದೆ. ಉದಾಹರಣಾರ್ಥವಾಗಿ, ಕರ್ನಾಟಕ ರಾಜ್ಯದ (ಭಾರತ ದೇಶ) ಉತ್ತರಕರ್ನಾಟಕದಲ್ಲಿ, ಸ್ಥಳೀಯ ಮೀನುಗಾರ ಸಮುದಾಯದ ಹಲವಾರು ವ್ಯಕ್ತಿಗಳು ಪೂರಕ ಕಾನೂನು ತಜ್ಞರನ್ನು ಬಂದು ಸಂಧಿಸಿದರು. ಕರಾವಳಿ ಪ್ರದೇಶದ ಜಮೀನುಗಳಲ್ಲಿ ತಮ್ಮ ಮನೆಗಳನ್ನು ಕಟ್ಟಲು ಅನುಮತಿ ಪಡೆಯಲು ಅವರು ಪೂರಕ ಕಾನೂನು ತಜ್ಞರ ಸಹಾಯವನ್ನು ಕೋರಿದರು. ಈ ಕುರಿತು ಮೊದಲ ಐದಾರು ವ್ಯವಹಾರಗಳಲ್ಲಿ ಪೂರಕ ಕಾನೂನು ತಜ್ಞರು, ಅರ್ಜಿಗಳನ್ನು ಸಲ್ಲಿಸುವುದರಲ್ಲಿ ಮತ್ತು ಅಗತ್ಯವಿರುವ ಸಿ ಆರ್ ಜೆಡ್ ಅನುಮತಿಗಳನ್ನು ಪಡೆಯುವುದರಲ್ಲಿ ತಮ್ಮ ಸಮುದಾಯ ಸಹಭಾಗಿಗಳಿಗೆ ಸಹಾಯವನ್ನೊದಗಿಸಿದರು. ಆ ನಂತರ, ಸಮುದಾಯದ ಹಲವು ವ್ಯಕ್ತಿಗಳು ಸಮಸ್ಯೆಯನ್ನು ಎದುರಿಸಲು ಸಮರ್ಥರು ಅಥವಾ ಎದುರಿಸಲು ಸಮರ್ಥರಾಗ ಬಹುದೆಂದು ಮನಗೊಂಡಾಗ, ತಜ್ಞರ ತಂಡವು (ಅವರಲ್ಲಿ) ಕಾನೂನಿನ ಬಗ್ಗೆ ಅರಿವನ್ನು ಮೂಡಿಸಲು ನಿರ್ಧರಿಸಿದರು. ಪೂರಕ ಕಾನೂನು ತಜ್ಞರು, ಸಿ ಆರ್ ಜೆಡ್ ಅನುಮತಿಯನ್ನು ಪಡೆಯಲು ಅನುಸರಿಸಬೇಕಿದ್ದ ಕಾರ್ಯವಿಧಾನದ ಬಗ್ಗೆ ಅರಿವು ಮೂಡಿಸಲೆಂದು ಮೀನುಗಾರ ಸಮುದಾಯದ ಸದಸ್ಯರಿಗೆ ಓದಲು ಸಂಬಂಧಿತ ಮಾಹಿತಿ ಪತ್ರಗಳನ್ನು ವಿತರಿಸಿದರು. (ಇದರಿಂದಾಗಿ), ಕಾರ್ಯವಿಧಾನಗಳ ಬಗ್ಗೆ (ಮೀನುಗಾರರಲ್ಲಿ) ಅರಿವು ಮೂಡಿದ ಕಾರಣ, ಆ ಮುಂದೆ, ಪೂರಕ ಕಾನೂನು ತಜ್ಞರಿಗೆ ಮನೆ ಕಟ್ಟುವ ಅನುಮತಿಯ ಕೇಸ್ ಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇರಲಿಲ್ಲ. ಬದಲಿಗೆ, ಅವರು ದೂರವಾಣಿಯ ಮೂಲಕ ಹೊಸ ಸಮುದಾಯ ಸಹಭಾಗಿಗಳಿಗೆ ಅಥವಾ ಕಕ್ಷಿಗಾರರಿಗೆ ಸಲಹೆ ನೀಡುತ್ತಿದ್ದರು ಮತ್ತು ಮುದ್ರಿತ ಕರಪತ್ರಗಳನ್ನು ಅವಲೋಕಿಸಲು ಹೇಳಿದರು. ಸಮುದಾಯ ಸಹಭಾಗಿ ಅಥವಾ ಕಕ್ಷಿಗಾರರ ಕೇಸ್ ಗಳಲ್ಲಿ ಯಾವುದೇ ತೊಡಕುಗಳಿದ್ದಲ್ಲಿ ಪೂರಕ ಕಾನೂನು ತಜ್ಞರು ಅವರೊಟ್ಟಿಗೆ ಸಿ ಆರ್ ಜೆಡ್ ಕಛೇರಿಗಳಿಗೆ ಹೋಗುತ್ತಿದ್ದರು



ಕರ್ನಾಟಕ - ಪೂರಕ ಕಾನೂನು ತಜ್ಞರು ಕಾನೂನುಗಳನ್ನು ವಿವರಿಸುವ ಪೋಸ್ಟರ್ (ಪ್ರಕಟನೆ ಚೀಟಿ) ಗಳನ್ನು ಅಂಟಿಸಿದ್ದು.

# ಮಾಹಿತಿಗಳನ್ನು ಕಲೆಹಾಕುವುದು ಮತ್ತು ಸಾಕ್ಷ್ಯಾಧಾರಗಳನ್ನು ಸಂಕಲಿಸುವುದು

ಪ್ರಕರಣ ಗಳೊಂದಿಗೆ ವ್ಯವಹರಿಸುವ ಪೂರಕ ಕಾನೂನು ತಜ್ಞರಿಗೆ ಮಾಹಿತಿ ಕಲೆಹಾಕುವುದು ಮತ್ತು ಸಾಕ್ಷ್ಯಾಧಾರಗಳನ್ನು ಸಂಕಲಿಸುವುದು ಅವರ ವೃತ್ತಿಯ ಬಹು ಮುಖ್ಯ ಕಾರ್ಯವಾಗಿರುತ್ತದೆ. ಪೂರಕ ಕಾನೂನು ತಜ್ಞರು ಪ್ರಕರಣದ ಬಗ್ಗೆ ಎಲ್ಲಾ ವಿವರಗಳನ್ನು ಮತ್ತು ಅದರೊಂದಿಗೆ ಉಲ್ಲಂಘನೆಯ - ಅನನುಸರಣೆಯ ಸಾಕ್ಯ್ಯಾಧಾರಗಳನ್ನು ಹೊಂದಿದ್ದಲ್ಲಿ,. ಸರಕಾರ ಸಂಸ್ಥೆಗಳು, ತಪ್ಪಿತಸ್ಥ ಪಕ್ಷಗಳು, ಮಾಧ್ಯಮ, ಮತ್ತು ಸಮುದಾಯವು ಅವರನ್ನು ಗಂಭೀರವಾಗಿ ಪರಿಗಣಿಸುವರು. ಛಾಯಾ ಚಿತ್ರಗಳು, ನಕ್ಷೆಗಳು, ಜಿ ಪಿ ಎಸ್ ಸಂಘಟಕಗಳು, ಸರ್ಕಾರಿ ಸುತ್ತೋಲೆಗಳು, ವಾರ್ತಾಪತ್ರಿಕೆ / ಟೆಲವಿಜನ್ ವರದಿಗಳು, ಶೈಕ್ಷಣಿಕ / ಸರ್ಕಾರೀ ಲೇಖನಗಳು/ ಅಧ್ಯಯನಗಳು/ವರದಿಗಳು- ಈ ಮುಂತಾದ ರೂಪಗಳಲ್ಲಿ ಮಾಹಿತಿ ಮತ್ತು ಸಾಕ್ಷ್ಯಾಧಾರಗಳನ್ನು ಕಲೆಹಾಕಬಹುದು. ನಿರ್ದಿಷ್ಟ ಕಾನೂನಿನ ಉಲ್ಲಂಘನೆ ಅಥವಾ ಅನನುಸರಣೆಯಿಂದಾಗಿ ದುಷ್ಪರಿಣಾಮ ಉಂಟಾಗಿದೆ ಎಂಬುದನ್ನು ಈ ರೀತಿ ಕಲೆಹಾಕಿದ ಸಾಕ್ಯ್ಯಾಧಾರಗಳು ಸಾಬೀತು ಪಡಿಸವಂತಿರ ಬೇಕು. ಕಾರಣ-ಸಂಬಂಧವನ್ನು ಅದು ಎತ್ತಿ ತೋರಿಸುವಂತಿರತಕ್ಕದ್ದು. 'ಮೂಲಾಧಾರ ಸತ್ಯತೆಯನ್ನು ನೆಲೆಗೊಳಿಸುವ' (ಗ್ರೌಂಡ್ ಟ್ರೂತಿಂಗ್) ವಿಧಾನದ ಮೂಲಕ ಪರಿಸರೀಯ ನ್ಯಾಯಕ್ಕೆ ಸಂಬಂಧಿಸಿದ ದೂರುಗಳನ್ನು ಬೆಂಬಲಿಸಲು ಸ್ಪಷ್ಟ ಸಾಕ್ಷ್ಯಾಧಾರಗಳನ್ನು ಸಂಕಲಿಸಬಹುದು.

**ಅನುಸರಣೆ ಮತ್ತು ಕಾನೂನು ಮಾನದಂಡವಿಲ್ಲದ ಕೆಲವು ಪ್ರಕರಣಗಳ ವಿರುದ್ಧ, ಅವು ಉಂಟುಮಾಡಿರುವ ದುಷ್ಪರಿಣಾಮ, ಕೆಡಕು ಮತ್ತು ಹಾನಿಯ ಪುರಾವೆಗಳನ್ನು ಸಾಕಷ್ಟು ವಾಸ್ತವಿಕ ವಿವರಗಳೊಂದಿಗೆ ಪ್ರಸ್ತಾಪಿಸಿ, ಸಂಬಂಧಿತ ಸಂಸ್ಥೆಗೆ ದೂರನ್ನು ನೊಂದಾಯಿಸಬಹುದು.**



ಒಡಿಶಾ - ಕಬ್ಬಿಣದ ಅದರಿನ ಗಣಿಯ ಹೊರಸೂಸುವಿಕೆಯಿಂದಾಗಿ ನದೀತಳದ ಮೇಲೆ ಉಂಟಾಗಿರುವ ಪರಿಣಾಮವನ್ನು ಮಹಿಳೆಯೊಬ್ಬಳು ತೋರಿಸುತ್ತಿರುವುದು

*ಸಾಕ್ಷ್ಯಾಧಾರಗಳನ್ನು ಸಂಕಲಿಸಲು ಬೇಕಿರುವ ಹೆಚ್ಚಿನ ಮಾಹಿತಿಗಾಗಿ, 'ಮೂಲಾಧಾರ ಸತ್ಯತೆಯನ್ನು ನೆಲೆಗೊಳಿಸುವ' (ಗ್ರೌಂಡ್ ಟ್ರೂತಿಂಗ್) ವಿಧಾನ ಕ್ರಮದ ಟಿಪ್ಪಣಿಗಾಗಿ*

https://namati.org/wp-content/uploads/2016/06/Groundtruthing-methodology-note.pdf - ನಿಂದ ಡೌನ್ ಲೋಡ್ ಮಾಡಿ.





ಒಡಿಶಾ - ಪೂರಕ ಕಾನೂನು ತಜ್ಞರು ಮತ್ತು ಸಮುದಾಯ ಸಹಭಾಗಿಗಳು ಬಾಧಿತ ಜನಗಳೊಂದಿಗೆ ಸೇರಿ ಸಮಾಲೋಚನೆ ನಡೆಸುತ್ತಿರುವುದು.

# ಉದ್ದೇಶಪೂರ್ವಕ ಚರ್ಚೆಗಳು

**ಪೂರಕ ಕಾನೂನು ತಜ್ಞರು ಬಾಧಿತ ಸಮುದಾಯಗಳ ಒಂದಿಗೆ ಕೆಲಸ ಮಾಡುವರೇ ಹೊರತು ಅವರಿಗಾಗಿ ಕೆಲಸ ಮಾಡುವುದಿಲ್ಲ. ಇಲ್ಲಿರುವ ಮುಖ್ಯ ಗುರಿ, ಸಮುದಾಯದಲ್ಲಿ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದರಲ್ಲಿ ಸಹಾಯ ಒದಗಿಸುವ ಕಾರ್ಯ ಮಾತ್ರವಲ್ಲ, ಅವರಲ್ಲಿ ಕಾನೂನುಗಳ ಅರಿವು ಮೂಡಿಸುವುದರಲ್ಲಿ ಮತ್ತು ಸಮಸ್ಯೆಗಳ ನಿಭಾವಣಾ ಕೌಶಲಗಳನ್ನು ನಿರ್ಮಿಸುವುದರಲ್ಲಿ ಸಹಾಯವನ್ನೊದಗಿಸುವ ಗುರಿಯೂ ಇರುತ್ತದೆ. ಸಾಮೂಹಿಕವಾಗಿ ಕೆಲಸ ಮಾಡಿದರೆ ಮಾತ್ರ ಈ ಕಲಿಕೆಯನ್ನು ಸಾಧಿಸಲಾಗುವುದು. ಸಮಸ್ಯೆಯ ಕುರಿತು ಕೈಗೊಳ್ಳುವ ಪ್ರತಿಯೊಂದು ಕ್ರಮವನ್ನು ಪರ್ಯಾಲೋಚಿಸುವ ಪ್ರಕ್ರಿಯೆಗಳ ಮೂಲಕ ಚರ್ಚಿಸುವುದರಿಂದ ಸಮಸ್ಯೆ / ಪ್ರಕರಣವನ್ನು ಹೇಗೆ ಮುಂದುವರಿಸ ಬಹುದು ಎಂಬ ನಿರ್ಣಯಗಳನ್ನು ಹೊರತರುವಂತಹ ಉದ್ದೇಶವನ್ನು ಈ (ಪರ್ಯಾಲೋಚನ) ಪ್ರಕ್ರಿಯೆಯು ಸುಗಮಗೊಳಿಸುತ್ತದೆ.**

ಚರ್ಚೆಗಳು ಪರಿಣಾಮಕಾರಿಯಾಗಿರಲು ಮತ್ತು ಪ್ರಸಕ್ತವಾಗಿರಲು, ಸಮಸ್ಯೆಯ ಬಗ್ಗೆ ಅವಶ್ಯಕವಾದ ಎಲ್ಲಾ ಹಿನ್ನಲೆ ಮಾಹಿತಿ, ಆತ / ಆಕೆಯು ಕೂಡಿಸಿ ಸೇರಿಸಬಲ್ಲ ಎಲ್ಲಾ ಹೊಸ ಮಾಹಿತಿ, ಮತ್ತು ವಿವಿಧ ಸಂಭಾವ್ಯ ಪರಿಹಾರಗಳನ್ನು ಪೂರಕ ಕಾನೂನು ತಜ್ಞರು ಸಮುದಾಯ ಸಹಭಾಗಿಗಳಿಗೆ ಮತ್ತು ಕಕ್ಷಿಗಾರರಿಗೆ ಒದಗಿಸುವರು. ಕಕ್ಷಿಗಾರ ಗುಂಪು ಅಥವಾ ಸಮುದಾಯ ಸಹಭಾಗಿಗಳು ಪ್ರಸ್ತುತ ಪಡಿಸಿದ ಮಾಹಿತಿಯ ಕುರಿತು ಪರ್ಯಾಲೋಚಿಸಿ, ಆ ನಂತರ ಕೈಗೊಳ್ಳಬೇಕಾದ ವಿವಿಧ ಕ್ರಮಗಳ "ಪರ ಮತ್ತು ಅಪರ' ಗಳನ್ನು ಚರ್ಚಿಸುವರು. ಈ ಪರ್ಯಾಲೋಚನಾ ಸಭೆಗಳು ನಿಷ್ಪಕ್ಷಪಾತವಾದ ಎಡೆಗಳಲ್ಲಿ, ಎಲ್ಲರ ಅಲ್ಲದಿದ್ದರೂ, ಬಹುತೇಕ ಬಾಧಿತ ಮಂದಿಗಳ ಗರಿಷ್ಠ ಭಾಗವಹಸುವಿಕೆಗೆ ಅನುವು ಮಾಡಿಕೊಡುವಂತಹ ರೀತಿಯಲ್ಲಿ ನಡೆಯುತ್ತವೆ .ಏಕಾಲಾಪ, ಆಜ್ಞಾಪನಾ ಅಥವಾ ಭಾವೋತ್ತೇಜಕ ಭಾಷಣಗಳ ಬದಲು, ವಾಗ್ವಾದಗಳನ್ನು, ಉತ್ತಮ ಚಿಂತನೆಗೆ ಒಳಪಡಿಸಿ ಪ್ರಸ್ತುತ ಪಡಿಸುವ ವಾದವಿವಾದಗಳನ್ನು ಉತ್ತೇಜಿಸಲಾಗುತ್ತದೆ. ಸಮುದಾಯದ ಪರಿಜ್ಞಾನವನ್ನು ಹೆಚ್ಚಿಸಲು, ಹಾಗೂ, ಸಮಸ್ಯೆಗಳನ್ನು, ಸಂಭಾವ್ಯ ಪರಿಹಾರಗಳನ್ನು (ಮತ್ತು) ಲಭ್ಯವಿರುವ ಆಯ್ಕೆಗಳ ವೆಚ್ಚ ಮತ್ತು ಲಾಭಗಳ ಕುರಿತು ಚರ್ಚಿಸುವ ಸಾಮರ್ಥ್ಯವನ್ನು ಬೆಳೆಸುವುದರಲ್ಲಿ ಈ ರೀತಿಯ ಚರ್ಚೆಗಳು ಅತ್ಯಂತ ಪ್ರಮುಖವಾದದ್ದು. ಈ ರೀತಿಯ ಚರ್ಚೆಗಳ ಮೂಲಕ, ಪೂರಕ ಕಾನೂನು ತಜ್ಞರು, ಪರ್ಯಾಲೋಚನಾಪೂರಿತ ಅಥವಾ ಭಾಗವಹಿಸಿಕೆಯನ್ನು ಅನುಮೋದಿಸುವ ಪ್ರಜಾತಂತ್ರ ರೀತಿಗಳನ್ನು ನಿದರ್ಶಿಸುತ್ತಾರೆ.



ಗುಜರಾತ್ - ಪೂರಕ ಕಾನೂನು ತಜ್ಞರು, ಮಾಲಿನ್ಯ ನಿಯಂತ್ರಣ ಮಂಡಲಿಯ ಅಧಿಕಾರಿಗಳೊಂದಿಗೆ ಕೊಳವೆಮಾರ್ಗದಲ್ಲಾಗುತ್ತಿರುವ ಸೋರುವಿಕೆಯನ್ನು ಪರಿಶೀಲಿಸುವುದು

## ಪ್ರಾಧಿಕಾರಗಳನ್ನು ಮತ್ತು ಸಂಸ್ಥೆಗಳನ್ನು ಸಂಧಿಸುವುದು

ಪೂರಕ ಕಾನೂನು ತಜ್ಞರು ತಮ್ಮ ಕಕ್ಷಿಗಾರರು ಅಥವಾ ಸಮುದಾಯ ಸಹಭಾಗಿಗಳು, ಪರಿಸರ ವಿಭಾಗ, ಕಂದಾಯ ಇಲಾಖೆ, ಜಿಲ್ಲಾ ಕಲೆಕ್ಟರ್ ಕಛೇರಿ ಅಥವಾ ಮೀನುಗಾರಿಕಾ ವಿಭಾಗ - ಈ ಮುಂತಾದ ಸಂಸ್ಥೆಗಳನ್ನು ಸಂಪರ್ಕಿಸಲು ಒತ್ತಾಸೆ ನೀಡುತ್ತಾರೆ. ಇಲ್ಲಿ 'ಒತ್ತಾಸೆ', ಎಂದರೆ, ಕಛೇರಿಯ ಸ್ಥಳ, ಕಛೇರಿಯ ಕೆಲಸದ ಸಮಯ, ಅಥವಾ ಅಲ್ಲಿಯ ಅಧಿಕಾರಿಗಳನ್ನು ಸಂಪರ್ಕಿಸುವ ವಿವರಗಳ ಬಗ್ಗೆ ಇರಬಹುದು. ಕಾಗದ ಪತ್ರದ ಕರಡುಪ್ರತಿಯನ್ನು ಸಿಧ್ಧಪಡಿಸುವುದು, ದೂರುಗಳನ್ನು ಬರೆಯುವುದು, ಆರ್ ಟಿ ಐ ಅರ್ಜಿಗಳ ಸಲ್ಲಿಕೆ, ಕಛೇರಿಗಳಿಗೆ ಭೇಟಿ ನೀಡುವುದು ಮತ್ತು ದೂರವಾಣಿ ಕರೆಗಳನ್ನು ಮಾಡುವುದು - ಈ ಎಲ್ಲಾ ಕಾರ್ಯಗಳು ಕೂಡಾ ಇದರಲ್ಲಿ ಒಳಗೊಂಡಿರಬಹುದು. ಕಾಲಾವಧಿ ಮತ್ತು ಕೌಶಲ ಹಾಗೂ ಪರಿಜ್ಞಾನವನ್ನು ಮೂಡಿಸಿ ಮುಂದುವರಿಯುತ್ತಿದ್ದಂತೆ, ಒತ್ತಾಸೆ ನೀಡುವ ಅವಶ್ಯಕತೆಯು ಕ್ರಮೇಣವಾಗಿ ಕಡಿಮೆಯಾಗುತ್ತಾ ಹೋಗಿ, ಕೇವಲ ಉಲ್ಲೇಖಗಳು ಮತ್ತು ಸಂಪರ್ಕ ವಿವರಗಳು ಇರುವ ಉದ್ದೇಶವನ್ನು ಪೂರೈಸ ಬಹುದು. ಸಾಧಾರಣವಾಗಿ ಹೇಳುವುದಾದರೆ, ಸಾಧ್ಯವಾದಷ್ಟು ಸಮೀಪದಲ್ಲಿರುವ ಸಂಸ್ಥೆಗಳ ಮೊರೆಹೋಗಿ ಪರಿಹಾರವನ್ನು ಒದಗಿಸಿಕೊಳ್ಳಲು (ಆ ಮೊದಲೇ ಪ್ರಯತ್ನ ಮಾಡಿಲ್ಲವೆಂದಿದ್ದಲ್ಲಿ) ಪ್ರಯತ್ನಿಸಬೇಕು. ಉದಾಹರಣೆಗೆ, ಗ್ರಾಮ ಮಟ್ಟದ ಆಡಳಿತ ವರ್ಗಗಳನ್ನು - ಪಂಚಾಯತ್, ಮುನ್ಸಿಪಾಲಿಟಿ - ಇವುಗಳನ್ನು ಮೊದಲನೇಯದಗಿ ಸಂಪರ್ಕಿಸುವುದು. ನಂತರ ವಿಭಾಗೀಯ, ಜಿಲ್ಲಾ, ಮತ್ತು ರಾಜ್ಯ ಮಟ್ಟದ, ಮತ್ತು ಕಡೆಯದಾಗಿ ರಾಷ್ಟ್ರೀಯ ಮಟ್ಟದ ಆಡಳಿತ ವರ್ಗ ಗಳನ್ನು ಸಂಪರ್ಕಿಸುವುದು. ಆದಾಗ್ಯೂ, ಸಮಸ್ಯೆಯ ಪರಿಣಾಮ, ವ್ಯಾಪ್ತಿ ಅಥವಾ (ಅನಿವಾರ್ಯ) ಕಾರ್ಯತಂತ್ರಗಳ(ಆಯಕಟ್ಟಿನ) ಕಾರಣ, ಇವೆಲ್ಲವನ್ನು ಅವಲಂಬಿಸಿ, ಕೆಲ ಸಂದರ್ಭಗಳಲ್ಲಿ ಈ ಆಡಳಿತ ಸರಣಿಯ ಮೇಲ್ಮಟ್ಟದಲ್ಲಿರುವ ಆಡಳಿತವರ್ಗದವರನ್ನು ಸಂಪರ್ಕಿಸುವುದು ಉಪಯುಕ್ತ.

ಸಮಸ್ಯೆ ಅಥವಾ ಪರಿಹಾರಕ್ಕೆ ನಿಸ್ಸಂಧಿಗ್ಧ ಆಯ್ಕೆ ಅಲ್ಲದಿದ್ದರೂ ಅಥವಾ ನೇರವಾಗಿ ಹೊಣೆಯಾಗಿಲ್ಲದಿದ್ದರೂ, ಅಂತಹ ಸಂಸ್ಥೆಗಳ, ಕಾನೂನುಗಳ ಮೂಲಕವೂ ಪರಿಹಾರಣೋಪಾಯಗಳು ಸಾಧ್ಯ. ಉದಾಹರಣೆಗೆ, ನದೀ ಮುಖದ (ಸಮುದ್ರ ಮತ್ತು ನದಿ ಒಂದಾಗುವ) ಚಿಪ್ಪೆಕಲ್ಲು ಸಂಗ್ರಹಿಸುವವರಿಗಾಗಿ ವಿಮೆ ಖಚಿತಪಡಿಸುವ ವಿಷಯದಲ್ಲಿ, ರಾಜ್ಯ ಮೀನುಗಾರಿಕೆ ವಿಭಾಗವಲ್ಲದೆ, ಮಾನವ ಸಂಪನ್ಮೂಲ, ಅಲ್ಪ ಸಂಖ್ಯಾತರ ಹಾಗೂ ಮಕ್ಕಳ ಮತ್ತು ಮಹಿಳೆಯರ ಅಭಿವೃಧ್ಧಿ – ಈ ಎಲ್ಲಾ ವಿಭಾಗಗಳನ್ನು ಸಂಪರ್ಕಿಸಲಾಗಿತ್ತು. ಅದೇ ರೀತಿ, ಕೊಳವೆ ಮಾರ್ಗದ ಪರಿಣಾಮಗಳ ಕುರಿತು ಪ್ರತಿಭಟಿಸುವಾಗ, ಕೊಳವೆಮಾರ್ಗಕ್ಕಾಗಿ ನಿರ್ದಿಷ್ಟವಾಗಿದ್ದ ಭೂ ಸ್ವಾಧೀನ ಕಾನೂನನ್ನು ಜಾರಿಗೆ ತರಲಾಯಿತು.



## ಸಾಂಸ್ಥಿಕ ಸಹಾಯಕರನ್ನು ಗುರುತಿಸುವುದು

ಸಮಸ್ಯೆಯ ಪರಿಹಾರಣೋಪಾಯದ ಮೊದಲ ಹಂತದಲ್ಲೇ ಸಮಸ್ಯೆಯ ಪರಿಹಾರಕ್ಕಾಗಿ ಸಹಾಯ ಒದಗಿಸಬಹುದಾದ ಸಂಸ್ಥೆಗಳನ್ನು ಗುರುತಿಸುವುದು ಉಪಯುಕ್ತ. ನೇರವಾಗಿ ಸಮಸ್ಯೆಯನ್ನು ಉಂಟುಮಾಡುವುದರಲ್ಲಿ / ಕಡೆಗಣಿಸುವುದರಲ್ಲಿ ಜವಾಬ್ದಾರಿಯುತವಾಗಿರುವ ಸಂಸ್ಥೆಗಳಿಗಿಂತ ಈ ಸಂಸ್ಥೆಗಳು ಬೇರೆಯೇ ಆಗಿರುತ್ತವೆ. ಹೇಗಾದರಾಗಲಿ, ಇವು ನಿರ್ದಿಷ್ಟ ಸಮುದಾಯ ಅಥವಾ ಜನಗಳ ಒಂದು ಗುಂಪಿನ ಕಲ್ಯಾಣದ ಬಗ್ಗೆ ಜವಾಬ್ದಾರರಾಗಿರುತ್ತವೆ. ಉದಾಹರಣೆಗೆ, ಒಂದು ಸಮಸ್ಯೆಯಿಂದಾಗುವ ಪರಿಣಾಮವು, ಯಾವುದೇ ಬೇರೆ ಒಂದು ಸಂಸ್ಥೆಯ ಆಡಿಳಿತದ ವ್ಯಾಪಕತೆಯಲ್ಲೂ ಬರುವಂತಹ ಹಲವು ಸಂದರ್ಭಗಳಿರುವುದರಿಂದ ಆ ಸಂಸ್ಥೆಯನ್ನೂ ಬರಮಾಡಿಕೊಳ್ಳಬಹುದು. ಇದಕ್ಕೆ ನಿದರ್ಶನವಾಗಿ, ಕಾನೂನುಬಾಹಿರವಾಗಿ, ಮುನ್ಸಿಪಾಲಿಟಿ ಸಂಗ್ರಹಿಸಿದ ತ್ಯಾಜ್ಯದ ಗುಡ್ಡೆಯೊಂದು, ಸುತ್ತುಮುತ್ತಲಿನ ಜನಕ್ಕೆ ಅನಾನುಕೂಲತೆಯನ್ನೊಡ್ಡುವುದಲ್ಲದೆ, ಅರಣ್ಯ ಇಲಾಖೆಗೆ ಮತ್ತು ಕರಾವಳಿ ವಲಯ ನಿರ್ವಾಹಣಾ ವಿಭಾಗ -ಇವರೆಡರ ವ್ಯಾಪಕತೆಯಲ್ಲಿ ಇರುವ ಸ್ಥಳಗಳಲ್ಲಿ ಆ ತ್ಯಾಜ್ಯಗುಡ್ಡೆ ಇರುವುದರಿಂದ ಆ ಎರಡು ವಿಭಾಗಳಿಗೂ ಸಮಸ್ಯೆಯಾಗಬಹುದು. ಈ ತೆರನ ಸಂಸ್ಥೆಗಳು ಪರಸ್ಪರ ಸಹಾಯಕ ಸಂಸ್ಥೆಗಳೋಪಾದಿಯಾಗಿ ಕೆಲಸ ಮಾಡುತ್ತಾ ಸಮಸ್ಯೆಯು ಶೀಘ್ರವಾಗಿ ಹಾಗೂ ಸರಳವಾಗಿ ಪರಿಣಾಮೋಪಾಯವನ್ನು ಕಂಡುಕೊಳ್ಳುವಂತೆ ಸಹಾಯವನ್ನೊದಗಿಸಬಹುದು.

ಭಾರತ ದೇಶದಲ್ಲಿ ಈ ವರೆಗೆ ಆಗಿರುವಂತಹ ಕೆಲಸಗಳಲ್ಲಿ ಈ ಕೆಳಗಿನ ಸಂಸ್ಥೆಗಳನ್ನು ಬಳಸಿಕೊಳ್ಳಲಾಗಿರುತ್ತದೆ. ಅಲ್ಲದೆ, ಪೂರಕ ಕಾನೂನು ತಜ್ಞರು ಇದಕ್ಕೂ ಇನ್ನೂ ಹೆಚ್ಚು ಸಂಸ್ಥೆಗಳನ್ನೂ ಬಳಸಿಕೊಳ್ಳಬಹುದು.

- ಪಂಚಾಯತ್
- ಸ್ಥಳೀಯ ಆದಾಯ ಅಧಿಕಾರಿ
- ಜಿಲ್ಲಾ ಕಲೆಕ್ಟರ್
- ಜಿಲ್ಲಾ ಮಟ್ಟದ ಕರಾವಳಿ ಸಮಿತಿ,
- ಅರಣ್ಯ ವಿಭಾಗ,
- ಮೀನುಗಾರಿಕೆ ವಿಭಾಗ,
- ಪ್ರಾದೇಶಿಕ ಅಥವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,
- ಪ್ರಾದೇಶಿಕ ಅಥವಾ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ,
- ಪರಿಸರ ಮಂತ್ರಿ ಮಂಡಲ, ಹವಾಮಾನ ಬದಲಾವಣೆ ಮಂತ್ರಿ ಮಂಡಲ, ಅರಣ್ಯ ಮಂತ್ರಿ ಮಂಡಲ,




ಚತ್ತಿಸ್ ಘರ್ - ಪೂರಕ ಕಾನೂನು ತಜ್ಞರು ವಾಯು ಮಾಲಿನ್ಯದ ಬಗ್ಗೆ ದೂರಿನ ಒಂದು ಕರಡು ಪತ್ರವನ್ನು ಸಿದ್ಧಗೊಳಿಸಲು ಸಮುದಾಯ ಸಹಭಾಗಿಗಳೊಂದಿಗೆ ಕೆಲಸ ಮಾಡುತ್ತಿರುವುದು

## ಮನವಿ ಪತ್ರಗಳನ್ನು / ದೂರು ನೀಡುವ ಪತ್ರಗಳ ಕರಡನ್ನು ಸಿದ್ಧಗೊಳಿಸುವುದು

ಮತ್ತೊಂದು ಮುಖ್ಯ ಕಾರ್ಯವೆಂದರೆ ಮನವಿ ಮತ್ತು ದೂರು ಪತ್ರಗಳ ಕರಡು ಪತ್ರಗಳನ್ನು ಸಮುದಾಯ ಸಹಭಾಗಿಗಳೊಂದಿಗೆ ಅಥವಾ ಕಕ್ಷಿಗಾರರೊಂದಿಗೆ ಸಿದ್ಧಪಡಿಸುವುದು. ಈ ಕಾರ್ಯವನ್ನು ಸಂಸ್ಥೆಗಳನ್ನು ಸಂಪರ್ಕಿಸುವುದರ ಪೂರ್ವಗಾಮಿ ಕಾರ್ಯವಾಗಿ ಪರಿಗಣಿಸಬಹುದು. ಮೊದಲ ಹಂತಗಳಲ್ಲಿ ಇದಕ್ಕೆ ಪೂರಕ ಕಾನೂನು ತಜ್ಞರ ಕೆಲಸದ ಹೆಚ್ಚು ಬೇಡಿಕೆ ಇರಬಹುದು. ಆ ನಂತರ, ಸಮುದಾಯ ಭಾಗೀದಾರರು / ಕಕ್ಷಿಗಾರರು ಕರಡು ಪತ್ರಗಳನ್ನು ಬರೆದು ಸಿದ್ಧಪಡಿಸುವ ಕೌಶಲ್ಯವನ್ನು ರೂಢಿಸಿಕೊಂಡಂತೆ, ಪೂರಕ ತಜ್ಞರು, ಅವರು ಬರೆಯುವ ಪತ್ರಗಳಿಗೆ ಆಧಾರವಾಗಿ ಬೇಕಿರುವ ವಿಷಯವಾರು ಮಾಹಿತಿ ಅಥವಾ ಕಾನೂನು ಮಾಹಿತಿಗಳ ಬಗ್ಗೆ ಸಲಹೆಗಳನ್ನು ಮಾತ್ರ ನೀಡುವರು. ಉತ್ತರ ಕನ್ನಡದಲ್ಲಿ, ಒಂದು ಹಳ್ಳಿಯ ಜನತೆಯು ಪೂರಕ ಕಾನೂನು ತಜ್ಞರ ಸಹಾಯ ಪಡೆದು, ಸಮೀಪದ ಗುಡ್ಡವೊಂದರಮೇಲೆ ಸುರಿಯಲಾಗುತ್ತಿದ್ದ ಘನತ್ಯಾಜ್ಯದ ಬಗ್ಗೆ ಮುನ್ಸಿಪಾಲಿಟಿಗೆ ಅರ್ಜಿಯನ್ನು / ಮನವಿಯನ್ನು ಸಲ್ಲಿಸಿದ್ದರು. ಈ ತ್ಯಾಜ್ಯದ ಗುಡ್ಡೆಯು ಹತ್ತಿರದ ಪ್ರದೇಶಗಳನ್ನು ಮತ್ತು ಜಲ ಮೂಲವನ್ನು ಮಾಲಿನ್ಯಗೊಳಿಸಿತ್ತು, ಹಾಗೂ, ರೋಗಗಳನ್ನು ಏಕಾಏಕಿ ಹರಡುವ ಅಪಾಯವನ್ನೂ ಒಡ್ಡಿತ್ತು.

ಸಮುದಾಯಗಳನ್ನು ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ಅಥವಾ ಅವುಗಳ (ಸಮಸ್ಯೆಗಳ) ನಿವಾರಣೆಗೆ ಬರೆದು ಸಿದ್ಧಗೊಳಿಸಿದ ಕಾಗದ ಪತ್ರವು ವಿಶಿಷ್ಟವಾಗಿ ಈ ಮುಂದಿನ ಅಂಶಗಳನ್ನು ಒಳಗೊಂಡಿರ ಬೇಕು - ಸಮಸ್ಯೆಯ ನಿರೂಪಣೆ, ಸಮಸ್ಯೆಯ ವಸ್ತು ಸಹಜ ಗುಣಲಕ್ಷಣ, ಇತಿಹಾಸ ಮತ್ತು ಅದರ (ಸಮಸ್ಯೆಯ) ಪ್ರಭಾವಕ್ಕೊಳಗಾದ ಜನತೆ. ಈ ಮೇಲಿನ ಅವಲೋಕಿಸಿದ ಅಂಶಗಳನ್ನು ಧೃಢಪಡಿಸಲು ಒಗ್ಗೂಡಿಸಿರುವ ಅಥವಾ ಸಂಗ್ರಹಿಸಿರುವ ಪುರಾವೆಗಳೂ ಸಹ ಇಲ್ಲಿ ಸೇರಿರುತ್ತವೆ. ಕಡೆಯದಾಗಿ, ಸಮಸ್ಯೆಯನ್ನು ನಿವಾರಿಸುವಲ್ಲಿ ಸಂಬಂಧಿತ ಸಂಸ್ಥೆಗಳಿಂದ ಕೋರಿದ ಕ್ರಮಗಳ ವಿವರಗಳೂ ಇಲ್ಲಿ ಸೇರ್ಪಡೆಯಾಗಿರುತ್ತದೆ. ಹಲವು ಸಂದರ್ಭಗಳಲ್ಲಿ, ಪೂರಕ ಕಾನೂನು ತಜ್ಞರು ಮತ್ತು ಕಕ್ಷಿಗಾರರು ಅಥವಾ ಸಮುದಾಯ ಸಹಭಾಗಿಗಳು, ಮೊದಲನೆ ಹಂತವಾಗಿ ಸಮಸ್ಯೆಯನ್ನು ಧೃಢೀಕರಿಸಲು ಮಾತ್ರ ಅಥವಾ ಸಂಸ್ಥೆಯು ಸಮಸ್ಯೆಯನ್ನು ಗುರುತಿಸಲು ಮಾತ್ರ ಪ್ರಕರಣವನ್ನು ಎತ್ತಿ ಹಿಡಿದು ಮುಂದುವರಿಸುವರು. ಪ್ರಕರಣದ ಆ ನಂತರದ ಹಂತಗಳಲ್ಲಿ, ಶಿಫಾರಸ್ಸುಗಳನ್ನು, ಹಕ್ಕೊತ್ತಾಯಗಳನ್ನು (ಬೇಡಿಕೆಗಳನ್ನು) ಅಥವಾ ಪರಿಹಾರಗಳನ್ನು ಸೇರಿಸಬಹುದು. ಅನುಬಂಧ 2 ರಲ್ಲಿ, ದೂರು ಪತ್ರದ ನಮೂನೆಯನ್ನು ನೋಡಿ.





ಪೂರಕ ತಜ್ಞರು ಮತ್ತು ಸಮುದಾಯ ಸಹಭಾಗಿಗಳು ತಮ್ಮ ದೂರಿಗೆ, ಸ್ಥಳೀಯ ಪ್ರಾಧಿಕಾರದವರು ಕಳಿಸಿರುವ ಅಧಿಕೃತ ಜವಾಬು ಪತ್ರದ ಪಠನ.

## ಸ್ಥಳೀಯ ಮಾಧ್ಯಮದಲ್ಲಿ ವರದಿ ಮಾಡುವುದು.

ಪೂರಕ ಕಾನೂನು ತಜ್ಞರು ಉಲ್ಲಂಘನೆಗೊಳಗಾದ ಪ್ರಕರಣಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಪರಿಣಾಮಗಳ ಕುರಿತು ಮಾಧ್ಯಮಕ್ಕೆ ವರದಿ ಮಾಡಬಹುದು. ಆದರೆ, ಈ ಕ್ರಮವನ್ನು ತೆಗೆದುಕೊಳ್ಳುವ ನಿರ್ಣಯವು ಅಲ್ಲಿನ ಸಂದರ್ಭಕ್ಕೆ ಅನುಗುಣವಾಗಿ ಇರತಕ್ಕದ್ದು. ಕೆಲ ಸಮಯಗಳಲ್ಲಿ, ಅಕಾಲಿಕ ಅಥವಾ ಅತ್ಯಾತುರದ ಮಾಧ್ಯಮದ ವರದಿಯು, ಸಂಬಂಧಿತ ವಿಭಾಗವನ್ನು ಕಿರಿಕಿರಿಗೊಳಿಸ ಬಹುದು ಅಥವಾ ರೇಗಿಸಲೂ ಬಹುದು, ಆ ಕಾರಣ ವಿಭಾಗದವರು ಎದುರಾಳಿಯಾಗುವ ಸಂಭವ ಅಲ್ಲಿ ಉತ್ಪತ್ತಿಯಾಗುತ್ತದೆ. ಬೇರೆ ಸಂದರ್ಭಗಳಲ್ಲಿ, ಬಾಧಿತ ಜನರ ಪರವಾಗಿ ಸಂಬಂಧಿತ ಸಂಸ್ಥೆಗಳ ಮೇಲೆ ಒತ್ತಡ ಹೇರಲು ಮಾಧ್ಯಮವು ಉಪಯುಕ್ತವಾಗಿದ್ದು. ಹೆಚ್ಚು ಶೀಘ್ರವಾದ ಮತ್ತು ಇನ್ನೂ ಉತ್ತಮ ಪರಿಹಾರದ ಕಡೆಗೆ ಕರೆದೊಯ್ಯುತ್ತದೆ. ಸಮಸ್ಯೆಯ ಬಗ್ಗೆ ಒಂದೇ ಬಾರಿಯ ಮಾಧ್ಯಮ ವರದಿಗಿಂತ, ಸಮಸ್ಯೆಯ ಕುರಿತು ಮಾಧ್ಯಮದ ಲಕ್ಷ್ಯವನ್ನು ನಿರಂತರವಾಗಿ ಕಾಪಾಡಿಕೊಂಡು ಇರಲು ಮಾಧ್ಯಮವು ಸಿದ್ಧವಾಗಿರುವಂತಹ ಸನ್ನಿವೇಶಗಳಲ್ಲಿ ಮಾಧ್ಯಮವನ್ನು ಸಂಪರ್ಕಿಸುವುದು ಉಪಯುಕ್ತ. ಪೂರಕ ಕಾನೂನು ತಜ್ಞರು ತಮ್ಮ ಕೇಸ್ ಗಳ ಬಗ್ಗೆ ಮಾಧ್ಯಮಕ್ಕಾಗಿ ಬರೆಯುವುದರಲ್ಲಿ ನಿಸ್ಸೀಮರಾಗಿರುತ್ತಾರೆ.



ನಿಯಮ ಮೀರಿ ತ್ಯಾಜ್ಯ ವಿಲೇ

ಕರ್ನಾಟಕ - ನೆಲಭರ್ತಿ ಪ್ರದೇಶದ ಪ್ರಕರಣವೊಂದರ ಬಗ್ಗೆ ದಿನಪತ್ರಿಕೆಯ ವರದಿ.

## ಮಧ್ಯಸ್ಥಿಕೆ

ಭಿನ್ನಾಭಿಪ್ರಾಯ / ಸಂಘರ್ಷ ದಲ್ಲಿ ಇರುವ ಎರಡು ಅಥವಾ ಇನ್ನೂ ಹೆಚ್ಚಿನ ಪಕ್ಷಗಳು ಪರಿಹಾರೋಪಾಯವನ್ನು ತಲುಪಲು ಪೂರಕ ಕಾನೂನು ತಜ್ಞರು ಸಹಾಯ ಮಾಡಬಲ್ಲರು. ಮಧ್ಯಸ್ಥಿಕೆಯು ಸಂಧಾನ ಅಥವಾ ಪ್ರಾತಿನಿಧ್ಯ - ಈ ಎರಡೂ ಕಾರ್ಯತಂತ್ರಗಳಿಗಿಂತ ಬೇರೆಯೇ ಆದ ಕಾರ್ಯತಂತ್ರ. ಮಧ್ಯಸ್ಥಿಕೆ ಮಾಡುವಾಗ, ಮಧ್ಯಸ್ಥಿಕೆ ಮಾಡುವವರು ಯಾವುದೇ ಪಕ್ಷದ ಪರವಾಗಿ ಮಾತನಾಡದೆ, ಎರಡೂ ಪಕ್ಷಗಳಿಗ ನ್ಯಾಯೋಚಿತವಾದ ಮತ್ತು ಸಮತೋಲಿತ ಪರಿಹಾರ ಕೊಡಲು ಪ್ರಯತ್ನಿಸುತ್ತಾರೆ. ಸಂಧಾನ ಅಥವಾ ಪ್ರಾತಿನಿಧ್ಯ - ಈ ಎರಡು ಕಾರ್ಯತಂತ್ರಗಳಲ್ಲಿ, ಒಬ್ಬ ವ್ಯಕ್ತಿಯು ತಾವು ಯಾವ ಪಕ್ಷದ ಪರ ಎಂದು ಮೊದಲೆ ಆಯ್ಕೆ ಮಾಡಿಕೊಂಡಿರುವುದರಿಂದ, ಅದರ ಪ್ರತಿಪಕ್ಷಕ್ಕೆ ತಾವು ಆಯ್ದುಕೊಂಡಿರುವ ಪಕ್ಷದ ಪರವಾಗಿ ಪರಿಹಾರವನ್ನು ನೀಡುತ್ತಾರೆ. ಪರಿಣಾಮವನ್ನುಂಟುಮಾಡುತ್ತಿರುವ ಪಕ್ಷವು ಪ್ರಸ್ತುತ ವಿಷಯದ ಪರಿಹಾರಕ್ಕೆ ಬದ್ಧವಾಗಿರುವಂತೆ ತೋರಿಬಂದರೆ, ಪರಿಹಾರವನ್ನೊದಗಿಸಲು ಮಧ್ಯಸ್ಥಿಕೆ ಕಾರ್ಯತಂತ್ರವು ಅತ್ಯಂತ ಅಗ್ಗವಾದ ಮತ್ತು ತ್ವರಿತವಾದ  ಮಾರ್ಗವಾಗಿರುತ್ತದೆ. ತಪ್ಪಿತಸ್ಥ ಪಕ್ಷಕ್ಕೆ ಈ ಕಾರ್ಯತಂತ್ರವು 'ಅನುಮಾನದ ಲಾಭವನ್ನು' ನೀಡಿ, ಸನ್ನಿವೇಶವನ್ನು ಮೊದಲಿನ ಸ್ಥಿತಿಗೆ ಪುನರ್ ಸ್ಥಾಪಿಸಲು ಅಥವಾ ಸಮಸ್ಯೆಯನ್ನು ಸರಿಪಡಿಸಲು ಮಧ್ಯಸ್ಥಿಕೆಯು ಅವಕಾಶವನ್ನು ಒದಗಿಸುತ್ತದೆ. ಉತ್ತರ ಕನ್ನಡದಲ್ಲಿ ಮೊಟ್ಟೆದಾಣವೊಂದು ನದಿಯ ಕವಲಿಗೆ / ಚಿಕ್ಕ ರೇವಿಗೆ ಅದಚಣೆಯೊಡ್ಡಿತ್ತು.  ಇದು ಸಿ ಆರ್ ಜ಼ೆಡ್ ಕಾನೂನಿನ ಉಲ್ಲಂಘನೆ ಯಾಗಿತ್ತು ಮತ್ತು ಕಟ್ಟಡವು ಹತ್ತಿರದ ಹೊಲಗಳಿಗೆ ನೀರಿನ ಹರಿವನ್ನು ನಿರ್ಬಂಧಿಸಿತ್ತು.  ಪೂರಕ ಕಾನೂನು ತಜ್ಞರು, ಮೊಟ್ಟೆದಾಣದ ಮಾಲಿಕರ ಮತ್ತು ಹೊಲಗಳಿಗೆ ನೀರಿನ ಹರಿವಿರದೆ ಬಾಧಿತರಾದ ಕೃಷಿಕರ ನಡುವೆ ಒಂದು ಸಮಾಲೋಚನಾ ಸಭೆಯನ್ನು ಏರ್ಪಡಿಸಿದರು. ಮೊಟ್ಟೆದಾಣದ ಬಗ್ಗೆ ಕೃಷಿಕರು ಪ್ರತಿಭಟನೆಯ ದನಿ ಎತ್ತುವರೆಂದು ಮೊಟ್ಟೆದಾಣದ ಮಾಲಿಕರು ನಿರೀಕ್ಷಿಸಿರಲಿಲ್ಲ. ಕೃಷಿಕರು ಸಿ ಆರ್ ಜ಼ೆಡ್ ಕಛೇರಿಗೆ ದೂರುಕೊಡಲು ಆಲೋಚಿಸುತ್ತಿದ್ದಾರೆಂದು ತಿಳಿದೊಡನೆ ಆತನು ಕಟ್ಟಡವನ್ನು ಉರುಳಿಸಿ, ರೇವನ್ನು ಸ್ವಚ್ಛಗೊಳಿಸಲು ಒಪ್ಪಿಕೊಂಡರು.

ಅಸಾಧಾರಣವಾಗಿ ಕಷ್ಟಕರವಾದ ಅಥವಾ ಗಂಭೀರವಾದ ಕೇಸ್ ಗಳಲ್ಲಿ, ಪೂರಕ ಕಾನೂನು ತಜ್ಞರು, ಕೇಸ್ ಅನ್ನು ವಕೀಲರಿಗೆ ಒಪ್ಪಿಸಿದಾಗ, ಅವರು ದಾವಾ ಹೂಡಿ ಪರಿಹಾರವನ್ನು ದೊರಕಿಸಿ ಕೊಡಬಹುದು.  ಪೂರಕ ಕಾನೂನು ತಜ್ಞರು ತಮ್ಮ ಸೃಜನಾತ್ಮಕತೆಗೆ ಅನುಗುಣವಾಗಿ, ಹಾಗೂ ಸನ್ನಿವೇಶಕ್ಕನುಗುಣವಾಗಿ ಮನ್ನಣೆ ಇರುವ ಇನ್ನೂ ಹಲವಾರು ಕಾರ್ಯ ತಂತ್ರ ಗಳನ್ನು  ಉಪಯೋಗಿಸುತ್ತಾರೆ.



ಕರ್ನಾಟಕ - ಚಿಪ್ಪೆಕಲ್ಲು ಸಂಗ್ರಹಿಸುವವರ ಗುಂಪಿನ ಸಮಾಲೋಚನಾ ಸಭೆಯನ್ನು ಪೂರಕ ಕಾನೂನು ತಜ್ಞರು ಸೇರಿಸುತ್ತಾರೆ.





ಒಡಿಶಾ - ಪೂರಕ ಕಾನೂನು ತಜ್ಞರು ಪ್ರಕರಣಗಳ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು ತಮ್ಮ ಕ್ಷೇತ್ರ ಭೇಟಿಗಳ ಕುರಿತು ಮಾಡಿದ ಟಿಪ್ಪಣಿಗಳೊಂದಿಗೆ ಕೆಲಸ ಮಾಡುತ್ತಿರುವುದು.

## ಮುನ್ನೆಚ್ಚರಿಕೆಗಳು!

ಪ್ರತಿ ಒಂದು ಪ್ರಕರಣದ ಬಗ್ಗೆ - ಸಮಸ್ಯೆಯ ಅಥವಾ ಪರಿಣಾಮದ ಸಹಜ ಸ್ವರೂಪ / ವಾಸ್ತವಿಕ ಸ್ಥಿತಿ, ಅವುಗಳನ್ನೆದುರಿಸಲು ಆ ವರೆಗೆ ಪ್ರಯತ್ನಿಸಲ್ಪಟ್ಟಿರುವ ಎಲ್ಲಾ ತಂತ್ರಗಳು, ಮತ್ತು ಅವುಗಳ ವೈಫಲ್ಯಕ್ಕೆ ಕಾರಣಗಳು - ಈ ಅಂಶಗಳು ಪ್ರಕರಣದ ಬಗ್ಗೆ ಮುಂದಿನ ಹೆಜ್ಜೆಗಳನ್ನು ಯೋಜಿಸುವ ಮುನ್ನವೇ ಇರಬೇಕಾದ ಪೂರ್ವಾಪೇಕ್ಷಿತ ಅಂಶಗಳು.

ಕಕ್ಷಿಗಾರರ / ಸಮುದಾಯ ಸಹಭಾಗಿಗಳೊಂದಿಗೆ ಚರ್ಚಿಸಿ, ಕಾರ್ಯ ಯೋಜನೆ (ಮತ್ತು ಅದರ ಅನುಕ್ರಮದಲ್ಲಿ ಆಗಿರುವ ಬದಲಾವಾಣೆಗಳು) ನಿರ್ಣಯಿಸಲ್ಪಡುವಂತೆ ಪೂರಕ ಕಾನೂನು ತಜ್ಞರು ಖಚಿತ ಪಡಿಸಬೇಕು.

ಫಲಿತಾಂಶವನ್ನು ತೋರಿಸುವ ನಿಟ್ಟಿನಲ್ಲಿ, ಒಂದೇ ಒಂದು ರೀತಿಯ ಕಾರ್ಯತಂತ್ರದ ಮೇಲೆ ಅವಲಂಬಿಸಿ ಪ್ರಯತ್ನಿಸುವುದಕ್ಕಿಂತ ಸಂಯೋಜಿತ ಕಾರ್ಯತಂತ್ರಗಳನ್ನು ಅಥವಾ ನಾನಾರೀತಿಯ ಕಾರ್ಯತಂತ್ರಗಳನ್ನು ಏಕಕಾಲದಲ್ಲಿ ಪ್ರಯತ್ನ ಮಾಡುವುದು ಉಚಿತ ಎಂದು ಇಲ್ಲಿ ಸಲಹೆ ನೀಡಲಾಗಿದೆ. ಕೆಲ ಸಮಯಗಳಲ್ಲಿ, ಅಲ್ಲಿಯ ಅಧಿಕಾರಶಾಹಿ ಮತ್ತು ರಾಜಕೀಯ ಸನ್ನಿವೇಶಗಳು ಬೇರೆ ರೀತಿಯ ಕಾರ್ಯತಂತ್ರಗಳನ್ನೇ ಬೇಡಬಹುದು.

ಸಾದ್ಯವಾದಷ್ಟು ಮಟ್ಟಿಗೆ, ಕಕ್ಷಿಗಾರರ ಅಥವಾ ಸಮುದಾಯ ಸಹಭಾಗಿಗಳ ಸಂಪೂರ್ಣ ಒಳಗೊಳ್ಳುವಿಕೆಯಿಂದಲೇ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳತಕ್ಕದ್ದು. ಉದಾಹರಣೆಗೆ, ಕರಡು ಪತ್ರಗಳು / ಅರ್ಜಿಗಳಿಗೆ ಅಂತಿಮ ರೂಪವನ್ನು ಕೊಡುವ ಮುನ್ನ ಅವರೊಂದಿಗೆ ಅವುಗಳನ್ನು ಚರ್ಚಿಸತಕ್ಕದ್ದು ಮತ್ತು ಅವುಗಳು ಅವರಿಂದಲೇ ರವಾನೆಯಾಗತಕ್ಕದ್ದು. ದೂರವಾಣಿ ಕರೆಗಳನ್ನು ಅವರ ಸಮ್ಮುಖದಲ್ಲೇ ಮಾಡತಕ್ಕದ್ದು. ಆ ನಂತರ, ಕ್ರಮೇಣವಾಗಿ, ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಭೇಟಿ / ಸಂದರ್ಶನಗಳನ್ನು ಹಾಗೂ ದೂರವಾಣಿ ಕರೆಗಳನ್ನು ಸಮುದಾಯ ಸದಸ್ಯರೆ ನಿರ್ವಹಿಸತಕ್ಕದ್ದು.

ಕಾರ್ಯ ಯೋಜನೆಯು ನಮ್ಯವಾಗಿದ್ದು, ಚುರುಕುಗತಿಯುಳ್ಳದ್ದಾಗಿರತಕ್ಕದ್ದು. ಪೂರಕ ಕಾನೂನು ತಜ್ಞರನ್ನು, ಕಕ್ಷಿಗಾರರನ್ನು, ಸಮುದಾಯ ಸಹಭಾಗಿಗಳನ್ನು, ಸಹಕಾರ್ಯಕರ್ತರನ್ನು ಅಪಾಯಕ್ಕೊಡ್ಡುವಂತಹ ಕಾರ್ಯವಿಧಾನಗಳನ್ನು ತಳ್ಳಿಹಾಕ ತಕ್ಕದ್ದು.

ಸಮಸ್ಯೆಯನ್ನು ಪರಿಹರಿಸುವುದರ ಪ್ರತಿಯೊಂದು ಹಂತದಲ್ಲಿ ಸಮುದಾಯ ಸಹಭಾಗಿಗಳ ಅಥವಾ ಕಕ್ಷಿಗಾರರ ಒಳಗೊಳ್ಳುವಿಕೆಯು ನಿರ್ಬಂಧಕವಾದ ವಿಷಯ..



ಒಡಿಶಾ ರಾಜ್ಯದ ಕ್ಯೋಂಝುರ್ ನಲ್ಲಿ, ಸಮುದಾಯ ಸಹಭಾಗಿಗಳ ಮತ್ತು ಪೂರಕ ಕಾನೂನು ತಜ್ಞರ ಪರಿಶ್ರಮದ ಫಲವಾಗಿ, ವಾಯು ಮಾಲಿನ್ಯವನ್ನುಂಟುಮಾಡುವ ಖನಿಜಗಳ ಸಾಗಣೆಯಲ್ಲಿ ಉತ್ತಮ ಪರಿವರ್ತನೆ ಉಂಟಾಗಿದೆ.














ಪೂರಕ ಕಾನೂನು ತಜ್ಞರು ಮತ್ತು ಸಮುದಾಯ ಸಹಭಾಗಿಗಳು, ಕರ್ನಾಟಕ ರಾಜ್ಯದ ಉತ್ತರಕನ್ನಡ ದಲ್ಲಿ, ಲಕ್ಷ್ಯ ವಿಟ್ಟು ಬರೆದ ದೂರುಗಳನ್ನು ಮುನ್ಸಿಪಲ್ ಅಧಿಕಾರಿಗಳಿಗೆ ಸಲ್ಲಿಸಿದ್ದರ  ಮೂಲಕ ನೆಲಭರ್ತಿ ಸ್ಥಳಗಳ ಶುದ್ಧೀಕರಣವನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ.



# 3.4 ಪ್ರಕರಣವನ್ನು ವರದಿ ಮಾಡುವುದು

ಪ್ರತಿಯೊಂದು ಪ್ರಕರಣದ ವಿಷಯವಾಗಿ ಯಾವುದೇ ಸಭೆ ಅಥವಾ ಚರ್ಚಾ ಸ್ಥಳ ದಲ್ಲಿ, ನಿಖರವಾದ ವರದಿಯನ್ನು ಮಾಡುವ ಉದ್ದೇಶಕ್ಕಾಗಿ, ಈ ಕೆಳಗಿನ ಶ್ರೇಣಿಯ ಪ್ರಕಾರ ಪ್ರಕರಣದ ವಿವರಗಳನ್ನು ತಯಾರಿಸುವುದು ಉಪಯುಕ್ತ. ಇವು, (ಇಂಗ್ಲಿಷ್ ನಲ್ಲಿ) **Frequently Asked Questions (FAQ)** ಎಂಬ ವಾಕ್ಯಾಂಗವನ್ನು ಹೊಂದಿದ್ದು, ಕನ್ನಡದಲ್ಲಿ 'ಮೇಲಿಂದಮೇಲೆ ಕೇಳಲ್ಪಡುವ ಪ್ರಶ್ನೆಗಳು' ಎಂಬ ತಲೆಸ್ವ ಶಿ೯ ಅಡಿಯಲ್ಲಿ ಪೂರಕ ಕಾನೂನು ತಜ್ಞರನ್ನು ಉದ್ದೇಶಿಸಿ ಕೇಳಬಹುದಾಗಿರುವ ಪ್ರಶ್ನೆಗಳಾಗಿರುತ್ತವೆ. ಈ ಪ್ರಶ್ನೆಗಳನ್ನು ಕೇಳುವವರು – ಪ್ರಕರಣದ ಬಗ್ಗೆ ಅಥವಾ ಅದರ ಕಾರ್ಯ ವಿಧಾನದಲ್ಲಿ ಆಸಕ್ತಿ ಹೊಂದಿರುವ ಸರ್ಕಾರದ ಅಧಿಕಾರಿಗಳಿರಬಹುದು, ಪೂರಕ ಕಾನೂನು ತಜ್ಞರು ತೊಡಗಿರುವ ಕೆಲಸಗಳ ಸಂಭಾವ್ಯ ಬೆಂಬಲಿಗರಾಗಿರಬಹುದು ಮತ್ತು ಮಾಧ್ಯಮದವರಾಗಿರಬಹುದು.

## ಮೂಲಭೂತ ಅಂಶಗಳು

1. ಪ್ರಕರಣವು ವ್ಯವಹರಿಸುತ್ತಿರುವ ಸಮಸ್ಯೆ ಯಾವುದು? ಸಮಸ್ಯೆಯಿಂದ ಬಾಧಿತರಾದವರು ಯಾರು ಮತ್ತು ಯಾವ ಯಾವ ರೀತಿಯಲ್ಲಿ ಬಾಧಿತರಾಗಿದ್ದಾರೆ?

2. ಈ ಪ್ರಕರಣವನ್ನು ಗುರುತಿಸಿದವರು ಯಾರು? ಗುರುತಿಸಿದವರಲ್ಲಿ ಎಷ್ಟು ಮಂದಿ ಪುರುಷರು ಹಾಗೂ ಎಷ್ಟು ಮಂದಿ ಮಹಿಳೆಯರು?

3. ಉಲ್ಲಂಘನಾಗಾರ (ಭಂಜಕ) ಯಾರು (ಸರಕಾರ / ಗುತ್ತಿಗೆದಾರರು / ಯೋಜನೆಯ ಪ್ರಾಧಿಕಾರ / ಏಕೈಕ ವ್ಯಕ್ತಿ / ಇನ್ನೂ ಸ್ಪಷ್ಟವಾಗಿ ತಿಳಿಯದ) ? ಯಾವ, ಕಾನೂನು / ಖಂಡ / ನ್ಯಾಯಂಗ ಆದೇಶ - ಉಲ್ಲಂಘಿಸಲ್ಪಟ್ಟಿದೆ?

4. ಈ ಪ್ರಕರಣವು ಏಕೆ ಮುಖ್ಯವಾದದ್ದು? ಅಥವಾ, ಈ ಪ್ರಕರಣಕ್ಕೆ ಪರಿಹಾರ ಕಂಡುಕೊಂಡಿದ್ದೇ ಆದರೆ, ಅದರಿಂದ ಎಷ್ಟು ಮಂದಿಗೆ ಲಾಭ? ಇವರಲ್ಲಿ ಎಷ್ಟು ಮಂದಿ ಮಹಿಳೆಯರು ಮತ್ತು ಎಷ್ಟು ಮಂದಿ ಪುರುಷರು ( ನಿಕಟವಾಗಿ ಅಂದಾಜಿಸಿದ ಸಂಖ್ಯೆಗಳು ಸಾಕು) ? ಯಾವ್ಯಾವ ಪ್ರಯೋಜನ / ಲಾಭವನ್ನು ಅವರು ಅನುಭೋಗಿಸುವರು (ಉದಾ. ಶುದ್ಧ ವಾಯು, ನಿರ್ಣಯ ಪ್ರಕ್ರಿಯೆಯಲ್ಲಿ ಪ್ರಾತಿನಿಧ್ಯ, ಸಮುದ್ರ ತೀರದಂತಹ ಸಾರ್ವಜನಿಕ ಸ್ಥಳಗಳಿಗೆ ಸುಲಭಗಮ್ಯತೆ, ಜೀವನೋಪಾಯಕ್ಕೆ ಸೌಕರ್ಯಗಳು, ಮುಂತಾದವು)? ದಯವಿಟ್ಟು, ಸಾಧ್ಯವಾದಷ್ಟು ಮಟ್ಟಿಗೆ ಪುರಾವೆಗಳೊಂದಿಗೆ ಸ್ಪಷ್ಟವಾಗಿ ಸೂಚಿಸಿ.



## ಇತಿಹಾಸ

5. ಇತರರು / ಕಕ್ಷಿಗಾರರು ಸಮಸ್ಯೆಯನ್ನು ಪರಿಹರಿಸಲು ಆ ಹಿಂದೆ ಯಾವ್ಯಾವ ಕಾರ್ಯಗಳನ್ನು ಕೈಗೊಂಡಿದ್ದರು?

6. ಸಮಸ್ಯೆಯನ್ನು ಅವರಿಗೆ ಏಕೆ ಪರಿಹರಿಸಲಾಗಲಿಲ್ಲ?

## ಪರಿಹಾರ

7. ಈ ಪ್ರಕರಣಕ್ಕೆ ಬಯಸಿದ ಪರಿಹಾರ ಯಾವುದು / ಏನು?

8. ಪರಿಹಾರಕ್ಕಾಗಿ, ಯಾವ್ಯಾವ ಅಧಿಕಾರಿಗಳನ್ನು / ವಿಭಾಗಗಳನ್ನು ನೀವು ಸ್ಪಂದಿಸಿರುವಿರಿ? ದಯವಿಟ್ಟು, ಸಂಪೂರ್ಣ ಪಟ್ಟಿಯೊಂದಿಗೆ, ಅವರ ಪ್ರತಿಕ್ರಿಯೆಗಳನ್ನು ಹಾಗೂ ಪ್ರತಿಕ್ರಯಿಸಲು ಅವರು ತೆಗೆದುಕೊಂಡ ಅವಧಿ - ಇವೆಲ್ಲವನ್ನೂ ನೀಡಿ.

9. ನೀವು ಸ್ಪಂದಿಸಿದ ಅಧಿಕಾರಿಗಳಲ್ಲಿ / ವಿಭಾಗಗಳಲ್ಲಿ, ಯಾರು / ಯಾವುದು ನೀವು ಬಯಸಿದ ಪರಿಹಾರಕ್ಕೆ ನೇರವಾಗಿ ಜವಾಬ್ದಾರರಾಗಿದ್ದರು ಎಂದು ನೀವು ಭಾವಿಸುವಿರಿ?

## ವಿಧಾನಗಳು

10. ಪ್ರಕರಣಕ್ಕೆ ಯಾವ ಬಗೆಯ/ಬಗೆಗಳ ಪುರಾವೆಗಳನ್ನು ನೀವು ಸಿದ್ಧಪಡಿಸಿರುವಿರಿ? ದಯವಿಟ್ಟು, ಸ್ಪಷ್ಟವಾಗಿ ಪಟ್ಟಿ ಮಾಡಿ (ಉದಾ. ರಾಡಿಯನ್ನು ಸುರಿಯುವ ಪ್ರದೇಶದ ಸತತ ಮೂರು ದಿನಗಳವರೆಗೆ ತೆಗೆದ ಛಾಯಾಚಿತ್ರ, ಸುರಿಕೆಯ ಬಗ್ಗೆ ಸ್ಥಳೀಯರು ಮಾಡಿರುವ ದೂರುಗಳ ಕುರಿತು ದಿನಪತ್ರಿಕೆಗಳಲ್ಲಿರುವ ಲೇಖನಗಳು. ರಾಷ್ಟ್ರೀಯ ಉದ್ಯಾನವನದೊಳಗೆ ಸುರಿಕೆ ಮಾಡಲಾಗುತ್ತಿದೆ ಎಂದು ತೋರಿಸುವ ಉದ್ಯಾನವನದ ಗಡಿರೇಖೆ ಮತ್ತು ಸುರಿಕೆಯ (ಗುಡ್ಡೆಗಳ) ಪ್ರದೇಶಗಳನ್ನು ತೋರಿಸುವ ಗೂಗಲ್ ನಕ್ಷೆಯ ನಿರ್ದೇಶಾಂಕಗಳು).

11. ಅಧಿಕಾರಿಗಳನ್ನು / ವಿಭಾಗಗಳನ್ನು ನೀವು ಹೇಗೆ ಸಂಪರ್ಕಿಸಿದಿರಿ (ಉದಾ. ಕಾಗದ ಪತ್ರ / ಮಾಹಿತಿ ಹಕ್ಕು ಅರ್ಜಿ-(ಆರ್ ಟಿ ಐ ಅರ್ಜಿ), / ದೂರವಾಣಿ ಕರೆಗಳು / ವೈಯಕ್ತಿಕ ಭೇಟಿ) ? ಪ್ರಸ್ತುತ ಪ್ರಕರಣದ ವಿಷಯವಾಗಿ ಈ ವಿವಿಧ ರೀತಿಗಳಲ್ಲಿ ನೀವು ಎಷ್ಟು ಬಾರಿ ಸಂಪರ್ಕಿಸಿದ್ದೀರಿ? ಸಂಪರ್ಕಿಸುವ ಈ ಪ್ರಕ್ರಿಯೆಯಲ್ಲಿ ಎಷ್ಟು ಮಂದಿ ಕಕ್ಷಿಗಾರರು ನಿಮ್ಮೊಂದಿಗೆ ಕೈ ಸೇರಿಸಿದರು ?


12. ಇನ್ಯಾವ ವಿಧಾನಗಳನ್ನು ಬಳಸಿರುವಿರಿ? ದಯವಿಟ್ಟು ಸ್ಪಷ್ಟವಾಗಿ ನಮೂದಿಸಿ (ಉದಾ. ಮಾಧ್ಯಮದ ವರದಿ, ಸಮುದಾಯ ಸಮಾಲೋಚನಾ ಸಭೆ / ಸಮುದಾಯದಿಂದ ಅರ್ಜಿ ಸಲ್ಲಿಕೆ / ಇನ್ನಿತರ)

13. ಪರಿಹರಿಸಲು ನಿಮಗೆ ಏಕೆ ಸಾಧ್ಯವಾಯಿತೆಂದು ನೀವು ಭಾವಿಸುವಿರಿ (ಉದಾ. ಉತ್ತಮ ಪುರಾವೆ. ಸ್ಪಷ್ಟ ಕಾನೂನು ಕೊಂಡಿ, ಪ್ರತಿಕ್ರಿಯಾಶೀಲ ಅಧಿಕಾರಿಗಳು, ಸಮುದಾಯ ಬಲ, ಮುಂತಾದವು)?

## ಲಾಭ / ಪ್ರಯೋಜನಗಳು

14. ಈ ಪ್ರಕರಣದಿಂದ ನಿಮಗಾದ ಕಲಿಕೆ ಏನು?

15. ಇದೇ ಸಮಸ್ಯೆ ಮತ್ತೊಮ್ಮೆ ಇದಿರಾದರೆ, ಕಕ್ಷಿಗಾರರು ಅಥವಾ ಸಮುದಾಯ ಸಹಭಾಗಿಗಳು ಸಮಸ್ಯೆಯನ್ನು ತಾವೇ ಸ್ವತಃ ಪರಿಹರಿಸಿಕೊಳ್ಳಬಲ್ಲರೆ? ಏಕೆ (ಬಲ್ಲರು) ಅಥವಾ ಏಕೆ ಇಲ್ಲ (ಬಲ್ಲಲಾರರು)?



# ಭಾಗ 4

## ಕಾನೂನು ಸಬಲೀಕರಣದ ಮೂಲಕ ಪೂರಕ ಕಾನೂನು ಕಾರ್ಯಕ್ರಮವನ್ನು ಸ್ಥಾಪಿಸುವುದು

**ಸಾಮಾಜಿಕ – ಆರ್ಥಿಕ ಸಮಸ್ಯೆಗಳಿಂದ ಮತ್ತು ಪರಿಸರೀಯ ಗಂಡಾಂತರಗಳಿಂದ ಬಾಧಿತರಾದ, ಹಾಗೂ, ಅಧಿಕೃತ ನಿರ್ಣಯಗಳನ್ನು ಮಾಡುವ ಪ್ರಕ್ರಿಯೆಗಳ ಕಾರಣದಿಂದ ಅಪ್ರಧಾನರಾಗಿ (ಅಲ್ಪರಾಗಿ) ಹೋಗಿರುವ ಸಮುದಾಯಗಳಿಗೆ, ನ್ಯಾಯವನ್ನೊದಗಿಸುವ ಧ್ಯೇಯಕ್ಕೆ ಮುಡಿಪಾಗಿರುವ ಯಾವುದೇ ಸಂಸ್ಥೆಯು ಪೂರಕ ಕಾನೂನು ತಜ್ಞರನ್ನು ಅಥವಾ, ಸಮುದಾಯ ಕಾನೂನು ನ್ಯಾಯವಾದಿಗಳನ್ನು ನೇಮಿಸಿ (ಅವರು ನಡೆಸಿಕೊಡುವಂತೆ) ಒಂದು (ನಿರ್ದಿಷ್ಟ) ಕಾರ್ಯಕ್ರಮವನ್ನು ಸ್ಥಾಪಿಸಬಹುದು.**

ಪೂರಕ ಕಾನೂನು ಕಾರ್ಯಕ್ರಮದ ಅನುಷ್ಠಾನಕ್ಕೆ ಕನಿಷ್ಟ ಮಟ್ಟಿಗೆ ಹಾಗೂ ಅತ್ಯವಶ್ಯವಾಗಿರುವುದು - ಸಮುದಾಯ ಆಧಾರಿತ ಪೂರಕ ಕಾನೂನು ತಜ್ಞರ ತಂಡದ ಅವಧಾನವುಳ್ಳ ಆಯ್ಕೆ, ತರಬೇತಿ, ಯಾವಾಗಲೂ ಚಾಲ್ತಿಯಲ್ಲಿರುವ ಬೆಂಬಲ ಮತ್ತು ಮೌಲ್ಯೀಕರಣ. ಪೂರಕ ಕಾನೂನು ತಜ್ಞರು ಕೆಲಸ ಮಾಡುವ, (ಯಾವಾಗಲೂ) ಬದಲಾಗುತ್ತಿರುವ ರಾಜಕೀಯ ಮತ್ತು ಕಾನೂನು ಸನ್ನಿವೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಕ್ರಮದ ಈ ಮಜಲುಗಳನ್ನು ವಿಕಾಸಗೊಳಿಸುವುದಲ್ಲದೆ ಅವನ್ನು ಪರಿಷ್ಕರಿಸುತ್ತಿರತಕ್ಕದ್ದು. ಹಾಗಾಗಿ, ಕಾರ್ಯಕ್ರಮವನ್ನು 'ಆದರ್ಶ ಮಾದರಿ'ಯಂತೆ ಜೋಡಿಸಿ ಸಿಧ್ಧಪಡಿಸುವುದರ ಬದಲು ಒಂದು ಪರಿಣಾಮಕಾರೀ ಪೂರಕ ಕಾನೂನು ಕಾರ್ಯಕ್ರಮದ ರಚನೆಗೆ (ಮೇಲೆ ಹೇಳಿದ) ಅಂಶಗಳು ಪೂರಕ ಎಂದು ಗುರುತಿಸುವುದು ಉಪಯುಕ್ತ.




ಕಾನೂನುಬದ್ಧ ಸಬಲೀಕರಣದ ಮೂಲಕ ನಾಯಕರನ್ನು ಸೃಜಿಸುವುದು



# 4.1 ಪೂರಕ ಕನೂನು ತಜ್ಞರ ಆಯ್ಕೆ

**ಪೂರಕ ಕಾನೂನು ಕಾರ್ಯಕ್ರಮದ ಯಶಸ್ಸು ಅಲ್ಲಿರುವ ಪೂರಕ ಕಾನೂನು ತಜ್ಞರ ತಂಡದ ಮೇಲೆ ಅವಲಂಬಿಸಿರುತ್ತದೆ. ಅವಧಾನದಿಂದ ಆಯ್ಕೆಗೊಂಡಿರುವ ಮತ್ತು ತರಬೇತಿ ಹೊಂದಿರುವ ಪೂರಕ ಕಾನೂನು ತಜ್ಞರು ಬಾಧಿತ ಜನರಲ್ಲಿ ವಿಶ್ವಾಸವನ್ನು ಬೆಳೆಸಿಕೊಳ್ಳುವರು ಹಾಗೂ ಅವರೊಡಗೂಡಿ ತಾವು ಮಾಡುವ ಕೂಡುಗೆಲಸವನ್ನು ಮುಂದುವರಿಸಿಕೊಂಡುಹೋಗುವ ನಿಟ್ಟಿನಲ್ಲಿ ಬಾಧಿತರೊಂದಿಗೆ ಆರೋಗ್ಯಕರ ಸಂಬಂಧವನ್ನು ಬೆಳೆಸಿಕೊಳ್ಳುವರು.**

**ಪೂರಕ ಕಾನೂನು ತಜ್ಞರು ಸಮುದಾಯಗಳನ್ನು ಸಶಕ್ತರನ್ನಾಗಿಸುವ (ಸಬಲಗೊಳಿಸುವ) ಸಲುವಾಗಿ ತಮ್ಮ ಬೋಧನಾ ಕೌಶಲಗಳನ್ನು ಬಳಸುತ್ತಾರೆ ಹಾಗೂ ಸಮುದಾಯಗಳು ಎದುರಿಸುವ ಸಮಸ್ಯೆಗಳ ಬಗ್ಗೆ ಮತ್ತು ಆ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು ಎಂಬುವುದರ ಬಗ್ಗೆ ಸುತ್ತಲಿನ ವಿಶಾಲ ಪ್ರಪಂಚವನ್ನು ಸಂಪರ್ಕಿಸಿ ತಿಳಿಸಲು ಅದೇ ಕೌಶಲವನ್ನು ಬಳಸುತ್ತಾರೆ. ನಾಯಕತ್ವದ ಗುಣಗಳುಳ್ಳ ಇವರು ಎಲ್ಲರನ್ನೂ ಗೌರವಿಸುವುದಲ್ಲದೆ ಎಲ್ಲರಿಗೂ ಬದ್ಧರಾಗಿರುತ್ತಾರೆ ಮತ್ತು ಹೆಚ್ಚು ಹೆಚ್ಚು ಕಲಿಯಲು ಕಟ್ಟಾಸೆಯುಳ್ಳವರಾಗಿರುತ್ತಾರೆ. ತಾವು ಸದಸ್ಯರಾಗಿರುವ ಸಮುದಾಯಕ್ಕಾಗಿ ಅವರು ಕೆಲಸ ಮಾಡುವುದಲ್ಲದೆ, ಸಾರ್ವಜನಿಕ (ಒಳಿತು – ಕೆಡಕುಗಳ) ಮನಸ್ಸಿನ ವ್ಯಕ್ತಿಗಳಾದ ಇವರು ಅನ್ಯಾಯದ ವಿರುದ್ಧ ಹೋರಾಡುವವರಾಗಿರುತ್ತಾರೆ.**

ಯಾವುದೇ ಕಾನೂನು ಸಬಲೀಕರಣದ ಪ್ರಯತ್ನದಲ್ಲಿ ಸ್ವಯಂಸೇವಕರು ಅತ್ಯಂತ ಪ್ರಮುಖ ಭಾಗಿಗಳಾಗಿರುತ್ತಾರೆ. ಸ್ವಯಂಸೇವಕರಾದ ಪೂರಕ ಕಾನೂನು ತಜ್ಞರಿಗೆ ಯಾವುದಾದರೊಂದು ರೀತಿಯಲ್ಲಿ ಸಂಭಾವನೆಯನ್ನು ನೀಡುವುದು ಅಷ್ಟೇ ಪ್ರಮುಖವಾದದ್ದು. ವ್ಯಕ್ತಿಗಳಿಗೆ ಅವರ ದಿನನಿತ್ಯದ ಖರ್ಚನ್ನು ಮರುಪಾವತಿ ಮಾಡದೆ ಹಾಗೂ ಅವರ ಸೇವಾ ಸಮಯಕ್ಕೆ ಸಮಂಜಸವಾಗಿ ಸಂಭಾವನೆ ನೀಡದೆ, ಅವರನ್ನು ಪರಿಸರ ನ್ಯಾಯಕ್ಕೆ ಸಂಬಂಧಿಸಿದ ಅತಿ ನಿಷ್ಠುರದ ಕಾರ್ಯಗಳಲ್ಲಿ ತೊಡಗುವಂತೆ ಹೇಳುವುದು ಕಷ್ಟಸಾಧ್ಯ, ಹಾಗೂ ಅದು ವಿವೇಚನಾರಹಿತವಾದದ್ದು.



**ಈ ಕೆಳಗಿನ ಹಂತಗಳು ಪೂರಕ ಕಾನೂನು ತಜ್ಞರ ಆಯ್ಕೆಯ ಪ್ರಕ್ರಿಯೆಯ ಭಾಗವಾಗಿರ ಬಹುದು**

## ಹುದ್ದೆಗಾಗಿ ಅಧಿಕೃತ ಘೋಷಣೆ / ಪ್ರಕಟಣೆ

(ಹುದ್ದೆಗೆ/ಉದ್ಯೋಗಕ್ಕೆ) ಮಾಡಬೇಕಿರುವ ಘೋಷಣೆಯನ್ನು, ಅವಶ್ಯವಿರುವ ಅರ್ಹತೆಗಳು, ಪರಾಮರ್ಶನ ನಿಯಮಗಳು, ಹುದ್ದೆಯ ಅವಧಿ, ಇನ್ನಿತರ ವಿವರಗಳು - ಇವೆಲ್ಲವನ್ನೂ ಮಂಡಿಸಿ ಸಿಧ್ಧಪಡಿಸುವುದು. ಈ ಘೋಷಣೆಯನ್ನು ಕಾಲೇಜ್ ಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಹಾಗೂ ಸಮಾಜಸೇವಾ ಕಾರ್ಯ, ಕಾನೂನು ಮತ್ತು ಸಮಾಜವಿಜ್ಞಾನ ವಿಭಾಗಗಳಲ್ಲೂ ವ್ಯಾಪಕವಾಗಿ ಪ್ರಚಾರ ಮಾಡಬಹುದು. ಈ ಪ್ರಕಟಣೆಗಳನ್ನು ಹರಡುವ ಮತ್ತಿನ್ನಿತರ ಮಾರ್ಗಗಳೆಂದರೆ, (ಹುದ್ದೆಯ ಬಗ್ಗೆ) ಕರಪತ್ರಗಳನ್ನು ಕಾಲೇಜ್ ಗಳಲ್ಲಿ ವಿತರಿಸುವುದು, ವಿಶ್ವವಿದ್ಯಾನಲಯಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿ ತಿಳಿಸುವುದು ಮತ್ತು ಈಗಾಗಲೆ ಹುದ್ದೆಯಲ್ಲಿ ತೊಡಗಿರುವ ಪೂರಕ ಕಾನೂನು ತಜ್ಞರು ಈ ವಿಷಯವಾಗಿ ಸುದ್ದಿಯನ್ನು ಪ್ರಸಾರ ಮಾಡುವುದು. ಆಸಕ್ತಿಯಳ್ಳ ಅಭ್ಯರ್ಥಿಗಳು ತಮ್ಮ ಅರ್ಹತಾ ವಿವರಗಳನ್ನು, ಆವರಣಾ ಪತ್ರವನ್ನು ಹಾಗೂ (ತಮ್ಮನ್ನು) ಪ್ರಮಾಣಿಸುವ ವ್ಯಕ್ತಿಗಳ / ಶಿಫಾರಸು ಮಾಡುವ ವ್ಯಕ್ತಿಗಳ ವಿವರಗಳನ್ನು ಸಲ್ಲಿಸುವಂತೆ ಹೇಳಬಹುದು.

### ಕಿರುಪಟ್ಟಿಯನ್ನು ಸಿಧ್ಧ ಪಡಿಸುವುದು

ಅಭ್ಯರ್ಥಿಗಳ ಕಿರುಪಟ್ಟಿಯನ್ನು ಸಿಧ್ಧಪಡಿಸಲು,.ಬಂದಿರುವ ಅರ್ಜಿಗಳನ್ನು ಈ ಕೆಳಗಿನ ಅಂಶಗಳ ಆಧಾರದ ಮೇಲೆ - ಅಭ್ಯರ್ಥಿಗಳ ಅನುಭವ, ಶೈಕ್ಷಣಿಕ ಅರ್ಹತೆ, (ಆವರಣ ಪತ್ರವನ್ನು ಪರಿಶೀಲಿಸುವ ಮೂಲಕ) ಬರವಣಿಗೆಯ ಸಾಮರ್ಥ್ಯ, (ಕ್ಷೇತ್ರ ಪ್ರದೇಶಕ್ಕೆ ಸಂಬಂಧಿಸಿದಂತೆ) ಅಭ್ಯರ್ಥಿಯ ನೆಲೆ, ಪ್ರಮಾಣ ವಿವರ/ ಶಿಫಾರಸ್ಸು ಹಾಗೂ ಕಾರ್ಯಾಸಕ್ತಿ - ಪರಿಶೀಲನೆ ಮಾಡಿ ಸಿಧ್ಧಪಡಿಸುವುದು.

## ಸೂಕ್ಷ್ಮ ಪರೀಕ್ಷೆ (ಟೆಸ್ಟ್) ಮತ್ತು ಸಂದರ್ಶನ

ಕಿರುಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಸೂಕ್ಷ್ಮ ಪರೀಕ್ಷೆಗೆ (ಟೆಸ್ಟ್ ಗೆ) ಕರೆಯಬಹುದು. ಮೊದಲ ಸುತ್ತಿನಲ್ಲಿ, ಲಿಖಿತ ಪರೀಕ್ಷೆಯನ್ನು ನೀಡಿ, ಅದರಲ್ಲಿ ಅಭ್ಯರ್ಥಿಗಳು, ಮಾಹಿತಿ ಹಕ್ಕಿಗೆ ಸಂಬಂಧಿಸಿದ ಅರ್ಜಿಯ ಒಂದು ಕರಡು ಪ್ರತಿಯನ್ನು ಬರೆಯುವಂತೆ ಹೇಳಬಹುದು ಹಾಗೂ ತಾವು ವಾಸವಾಗಿರುವ ಪ್ರದೇಶದಲ್ಲಿ ಪರಿಸರೀಯ ನ್ಯಾಯಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಒಂದು ಪ್ರಬಂಧವನ್ನು ಬರೆಯಲು ಹೇಳಬಹುದು. ತಮಗಿರುವ ಕಳವಳದ ಬಗ್ಗೆ ಬರೆಯುವಾಗ, ಅವರು ಸಮಸ್ಯೆಯ ಮಂಡನೆಯನ್ನು ನಿರೂಪಿಸಬೇಕೆಂದು, ಪರಿಹಾರ ಕಂಡುಕೊಳ್ಳಲು ಬಳಸಬಹುದಾದ ಕಾನೂನನ್ನು ಗುರುತಿಸಿ, ಆ ಮೂಲಕ ಸಾದ್ಯಾಸಾಧ್ಯತೆಯುಳ್ಳ ಪರಿಹಾರಗಳನ್ನು ಬರೆಯ ಬೇಕೆಂದು ಸೂಚಿಸುವುದು. ಲಿಖಿತ ಪರೀಕ್ಷೆಯಲ್ಲಿ, ಅವರು ವಾಸವಾಗಿರುವ ಸ್ಥಳದಲ್ಲಿ ಇರುವ ನಿವಾಸಿಗಳನ್ನು ಬಾಧಿಸುತ್ತಿರುವ ಸಮಸ್ಯೆಯ ಬಗ್ಗೆ ಸರ್ಕಾರೀ ವಿಭಾಗಕ್ಕೆ ಒಂದು ದೂರಿನ ಪತ್ರವನ್ನು ಬರೆಯಲು ಸಹ ಹೇಳಬಹುದು. ಮಾಹಿತಿ ಹಕ್ಕು ಅರ್ಜಿ, ಕಾಗದ ಪತ್ರ, ಮತ್ತು ಪ್ರಬಂಧ - ಇವುಗಳಲ್ಲಿ ನಿರೂಪಿಸಿರುವ ತರ್ಕ, ವಾದ-ವಿವಾದ, ಭಾಷೆಯ ಶೈಲಿ, ಅಭಿವ್ಯಕ್ತಿಯ ಸ್ಪಷ್ಟತೆ - ಇವುಗಳನ್ನು ಪರಾಮರ್ಶಿಸಬಹುದು.

ಎರಡನೇ ಸುತ್ತಿನಲ್ಲಿ ಮೌಖಿಕ ಪರೀಕ್ಷೆ ಇರಬಹುದು. ಇದು, ಗುಂಪು ಚರ್ಚೆ ಮತ್ತು ಸಂದರ್ಶನ ಆಗಿರಬಹುದು. ಅಭ್ಯರ್ಥಿಗಳಲ್ಲಿರುವ ತನ್ನಂಬಿಕೆಯ ಧೃಢತೆ, ಸದ್ಯದ ಸಂಗತಿ/ವ್ಯವಹಾರಗಳ ಬಗ್ಗೆ ಇರುವ ಜ್ಞಾನ, ಹಾಗೂ ಅವರು ಮುಂದೆ ಕೆಲಸ ಮಾಡಬಹುದಾದ ಸ್ಥಳದ ಭೌಗೋಳಿಕ ಜ್ಞಾನ - ಇವೆಲ್ಲವನ್ನು ಪರೀಕ್ಷಿಸಿ ಅಂಕಗಳನ್ನು ಕೊಡಲು ಇದೊಂದು ಸದವಕಾಶ. ಈ ರೀತಿ ಕೊಟ್ಟ ಅಂಕಗಳು ಅಂತಿಮ ಆಯ್ಕೆಗೆ ಸಹಾಯ ಮಾಡಬಹುದು. ಈ ಆಯ್ಕೆ ಪ್ರಕ್ರಿಯೆಯು ಹುದ್ದೆಯನ್ನು ಘೋಷಿಸಿದ ದಿನದಿಂದ ಹಿಡಿದು 45 ದಿನಗಳ ವರೆಗೆ ನಡೆಯಬಹುದು.



ಗುಜರಾತ್ ರಾಜ್ಯದ ಸೌರಾಷ್ಟ್ರದಲ್ಲಿ ಸಮುದಾಯ ಸಹಭಾಗಿಗಳ ಸಂಘದ ಪ್ರಾರಂಭ.

## ತರಬೇತಿ

ಆಯ್ಕೆಯ ನಂತರ, ಅಭ್ಯರ್ಥಿಗಳಿಗೆ, ಪೂರಕ ಕಾನೂನು ವಿಧಾನಗಳಲ್ಲಿ, ಸಮಸ್ಯೆಯನ್ನು ಪರಿಹರಿಸವ ಕಾರ್ಯವಿಧಾನಗಳ ಮತ್ತು ಪ್ರಮುಖ ಪರಿಸರೀಯ ಕಾನೂನು - ಈ ಎಲ್ಲಾ ವಿಷಯಗಳ ಬಗ್ಗೆ ತರಬೇತಿ ನೀಡತಕ್ಕದ್ದು. ತರಬೇತಿ ಅವಧಿಯ ಮೊದಲ ಹಂತದಲ್ಲಿ, ಉಪನ್ಯಾಸ, ಪ್ರಸ್ತುತಿಗಳು ಮತ್ತು ಅಭ್ಯಾಸಪಾಠಗಳು, ಇವೆಲ್ಲವನ್ನೂ ಒಳಗೊಂಡ ತರಗತಿ ಅಧಿವೇಶನಗಳ ಸರಣಿಯನ್ನು ಆಯೋಜಿಸಲಾಗಿರುತ್ತದೆ. ತರಬೇತಿ ಅವಧಿಯಲ್ಲಿ, 'ಕೆಲಸದಲ್ಲಿ ನಿರತರಾಗಿ' ಕಲಿಕೆ ಎಂಬ ಅಂಶವೂ ಸೇರಿರುತ್ತದೆ. ಹೊಸ ಪೂರಕ ಕಾನೂನು ಕಾರ್ಯಕರ್ತರು ಹಿರಿಯ ಪೂರಕ ಕಾನೂನು ತಜ್ಞರ ಜೊತೆಗೂಡಿ, ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡುವರು, ಅವರ ಕಕ್ಷಿಗಾರರನ್ನು ಮತ್ತು ಸಮುದಾಯ ಸಹಭಾಗಿಗಳನ್ನು ಸಂಧಿಸುವರು, ಹಾಗೆಯೆ ಪೂರಕ ಕಾನೂನು ತಜ್ಞರಿಗೆ ಚಾಲ್ತಿಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯದಲ್ಲಿ ನೆರವು ನೀಡುವರು. 'ಕೆಲಸದಲ್ಲಿ ನಿರತರಾಗಿ' ಪಡೆಯುವ ತರಬೇತಿಗಳು ೯೦ ದಿನಗಳದ್ದಾಗಿದ್ದು, ಆ ನಂತರ, ಹೊಸ ಕಾನೂನು ತಜ್ಞರು ತಂತಮ್ಮ ಪ್ರಕರಣಗಳನ್ನು ತೆರೆದು ಕಾರ್ಯದಲ್ಲಿ ತೊಡಗಬಹುದು.

ಜೊತೆಗೆ, ಈ ಹೊಸ ಪೂರಕ ಕಾನೂನು ತಜ್ಞರನ್ನು ಕನಿಷ್ಟ ಪಕ್ಷ ವರ್ಷಕ್ಕೊಮ್ಮೆ 'ಪುನಃಶ್ಚೇತನ ಕಾರ್ಯಕ್ರಮ'ಕ್ಕೆ ಆಹ್ವಾನಿಸಿ, ಕಾನೂನುಗಳ ಬಗ್ಗೆ ಅವರ ಜ್ಞಾನವನ್ನು, ಪ್ರಕರಣ ಕಾರ್ಯಗಳನ್ನು ಮತ್ತು ವಿಧಾನಗಳನ್ನು ಚರ್ಚಿಸಲು, ಸಮುದಾಯವನ್ನು ಸಂಚಯಿಸಿ ಸಜ್ಜುಗೊಳಿಸುವ ಸಾಮರ್ಥ್ಯ, ಪುರಾವೆಗಳ ಸಂಗ್ರಹಣೆಗೆ ಬೇಕಾದ ಉಪಕರಣಗಳ ಬಳಕೆ, ಹಾಗೂ ನಿರ್ದಿಷ್ಟ ಪರಿಸರೀಯ ವಿಷಯಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ವೃದ್ಧಿಸಿಕೊಳ್ಳಲು - ಈ ಎಲ್ಲಾ ಕೌಶಲಗಳನ್ನು ನವೀಕರಿಸಿಕೊಳ್ಳಲು ಅವಕಾಶಗಳೊನ್ನದಗಿಸುವುದು. ಹೊಸ ಪೂರಕ ಕಾನೂನು ಕಾರ್ಯಕರ್ತರು ನಿರಂತರವಾಗಿ ಕಲಿಯುವಂತೆ, ತಮ್ಮ ಜ್ಞಾನವನ್ನು ಮತ್ತು ಪ್ರಕರಣಗಳನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಉತ್ತಮಗೊಳಿಸಿಕೊಳ್ಳುವಂತೆ ಈ ಪುನಃಶ್ಚೇತನ ತರಬೇತಿಯು ಖಚಿತಪಡಿಸುತ್ತದೆ.

*ಪೂರಕ ಕಾನೂನು ತಜ್ಞರ ತರಬೇತಿ ಕಾರ್ಯಸೂಚಿಯ ಮಾದರಿಗಾಗಿ 'ಅನುಬಂಧ 3' ನೋಡಿ*



**ಪೂರಕ ಕಾನೂನು ತಜ್ಞರ ಬಳಿ ಇರುವ ಕೇಸ್ ಪಟ್ಟಿಗಳು , ಕೇಸ್ ಗಳ ವಿವಿಧ ರೀತಿಗಳು ಹಾಗೂ ಅವರು ಕೆಲಸ ಮಾಡುತ್ತಿರುವ ವಿವಿಧ ಬಗೆಯ ಸಂಸ್ಥೆಗಳು – ಇವೆಲ್ಲವನ್ನು ಆಧರಿಸಿ ತರಬೇತಿ ಘಟಕಗಳನ್ನು ಸಿದ್ಧಪಡಿಸಬಹುದು. ತರಬೇತಿ ವಿಧಾನಗಳು, ವಾಚನ ಗೋಷ್ಠಿ, ಕೇಸ್ ಬಗ್ಗೆ ಅಭ್ಯಾಸಪಾಠ, ಗುಂಪು ಮತ್ತು ವೈಯಕ್ತಿಕ ಪ್ರಸ್ತುತಿಗಳು, ಕಾನೂನು ರಸ ಪ್ರಶ್ನಾವಳಿ, ಹಾಗೂ ವಾಗ್ವಾದ – ಇವೆಲ್ಲವನ್ನೂ ಒಳಗೊಂಡಿದ್ದು, ಹೊಸ ಪೂರಕ ಕಾನೂನು ಕಾರ್ಯಕರ್ತರಿಗೆ ಅವರ ಕಲಿಕೆಯ ಪ್ರದರ್ಶನಕ್ಕೆ ಯಥೇಶ್ಟ ಅವಕಾಶಗಳನ್ನು ಒದಗಿಸ ತಕ್ಕದ್ದು.**

ಕಾನೂನು ಕೈಪಿಡಿಗಳ, ವಿಧಾನಕ್ರಮಗಳ ಟಿಪ್ಪಣಿಗಳ ಹಾಗೂ ಕರಪತ್ರಗಳ ಸಿದ್ಧತೆ ಮತ್ತು ಬಳಕೆಯನ್ನು ಈ ತರಬೇತಿಗಳಲ್ಲಿ ಪೂರಕ ಕಾನೂನು ಕಾರ್ಯಕರ್ತರಿಂದ ಮಾಡಿಸಿದಲ್ಲಿ, ಅವುಗಳನ್ನು ಅವರು ತಮ್ಮ ಕೇಸ್ ಕೆಲಸದಲ್ಲಿ ಉಲ್ಲೇಖದ ದಾಖಲೆಗಳಾಗಿ ಬಳಸಲು ಉಪಯುಕ್ತವಾಗುತ್ತದೆ. ಈ ತೆರನ ದಾಖಲೆಗಳನ್ನು ಸರಳವಾಗಿ ಮತ್ತು ಸುಲಭವಾಗಿ ಓದುವಂತಹ ಶೈಲಿಯಲ್ಲಿ ಮುದ್ರಿಸಿ ಅಥವಾ ಪ್ರಕಟಿಸಿದಲ್ಲಿ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ದಾಖಲೆಗಳನ್ನು ನಿಯತಕಾಲಿಕವಾಗಿ ನವೀಕರಿಸುವುದು ಮುಖ್ಯ. ಹೀಗೆ ಮಾಡುವುದರಿಂದ, ಕಾನೂನುಗಳ ಬದಲಾವಣೆ, ಮತ್ತು ಹೊಸ ಬಗೆಯ ಕೇಸ್ ಗಳನ್ನಾಧರಿಸಿ ಪೂರಕ ಕಾನೂನು ವಿಧಾನಗಳನ್ನು ಪರಿಷ್ಕರಿಸಲು, ಅಥವಾ ಇನ್ಯಾವುದೇ ಪರಿಗಣಿಸತಕ್ಕ ವಿಷಯಗಳು - ಇವೆಲ್ಲವನ್ನೂ ಸರಿಹೊಂದಿಸಲು ಈ ನವೀಕರಣ ಪ್ರಕ್ರಿಯೆಯು ಉಪಯುಕ್ತವಾಗಿರುತ್ತದೆ. ಆದರ್ಶಪೂರ್ವಕವಾಗಿ ಪೂರಕ ಕಾನೂನು ಕಾರ್ಯಕರ್ತರು ಸಂಯೋಜಕ / ಸಂಯೋಜಕರುಗಳಿಂದ ಮೇಲ್ವಿಚಾರಣೆಗೆ ಒಳಪಡಬೇಕು, ಅಂತೆಯೇ, ಅವರಿಂದ ಬೆಂಬಲವನ್ನೂ ಪಡೆಯುವಂತಿರಬೇಕು. ಇದನ್ನು ವಾರವಾರ ಪರಿಶೀಲನೆ ಮತ್ತು ತಿಂಗಳಿಗೊಮ್ಮೆ ನಡೆಯುವ ನವೀಕರಣ ಸಭೆ - ಇವೆರಡರ ಮೂಲಕ ಮಾಡತಕ್ಕದ್ದು. ಪ್ರತಿ ಸಂಯೋಜಕರು 6 ರಿಂದ 8 ಪೂರಕ ಕಾನೂನು ಕಾರ್ಯಕರ್ತರ ಮೇಲ್ವಿಚಾರಣೆ ಮಾಡುವುದು.



ಒರಿಸ್ಸಾ ರಾಜ್ಯದಲ್ಲಿ ಪೂರಕ ಕಾನೂನು ಕಾರ್ಯಕರ್ತರ ಪ್ರಕರಣಗಳನ್ನಾಧರಿಸಿ, ತಂಡದ ಮಟ್ಟದಲ್ಲಿ ತರಬೇತಿ



# 4.2 ಮೇಲ್ವಿಚಾರಣೆ ಮತ್ತು ಬೆಂಬಲ

ಕಾರ್ಯಕ್ರಮದ ಸಂಯೋಜಕರು ಕಾನೂನುಗಳ ಬಗ್ಗೆ, ಸಂಶೋಧನಾ ವಿಧಾನಗಳ ವಿಷಯದಲ್ಲಿ ಮತ್ತು ಸಮುದಾಯವನ್ನು ಕಟ್ಟುವುದರಲ್ಲಿ ಪಾರಂಗತರಾಗಿರುತ್ತಾರೆ. ಪೂರಕ ಕಾನೂನು ಕಾರ್ಯಕರ್ತರು ಕೆಲಸ ಮಾಡುತ್ತಿರುವ ಸ್ಥಳವು ಸಂಯೋಜಕರಿರುವ ಸ್ಥಳದಿಂದ ದೂರವಿದ್ದಲ್ಲಿ, ಅವರು ವಾರವಾರ ಪರಿಶೀಲನೆಯನ್ನು ದೂರವಾಣಿಯ ಮೂಲಕ ನಡೆಸಬಹುದು. ಇನ್ನಿತರ ಸನ್ನಿವೇಶಗಳಲ್ಲಿ, ಕಾರ್ಯ ಕರ್ತರು ಮತ್ತು ಸಂಯೋಜಕರು ವಾರದಿಂದ ವಾರಕ್ಕೆ ಭೇಟಿಯಾಗಬಹುದು. ಸಾಧ್ಯವಾದರೆ, ಸಂಯೋಜಕರು ಕ್ಷೇತ್ರ ಭೇಟಿಗಳನ್ನು ಮತ್ತು ಸಮುದಾಯ ಸಭೆಗಳನ್ನು ಪೂರಕ ಕಾನೂನು ಕಾರ್ಯಕರ್ತರೊಡಗೂಡಿ ಮಾಡಬಹುದು. ಸಾರಾಂಶ ರೂಪದಲ್ಲಿ ಹೇಳುವುದಾದರೆ, ಸಂಯೋಜಕರ 3 ಪ್ರಧಾನ ಪಾತ್ರಗಳು - ಪೂರಕ ಕಾನೂನು ಕಾರ್ಯಕರ್ತರಿಗೆ ಕಾನೂನು ಮಾಹಿತಿ ನೀಡುವ ಮೂಲಕ ಬೆಂಬಲಿಸುವುದು, ಪರಿಹಾರವನ್ನು ಸಾಧಿಸಲು ಕಾರ್ಯವಿಧಾನಗಳನ್ನು ಹಂಚಿಕೊಳ್ಳುವುದು, ಪ್ರಕರಣದ ದತ್ತಾಂಶದ ಸಂಗ್ರಹಣೆ - ಇವಾಗಿರುತ್ತವೆ. ಈ ಮೂರು ಪ್ರಕ್ರಿಯೆಗಳನ್ನು ವಾರವಾರದ ಮತ್ತು ಮಾಸಿಕ ವರದಿಮಾಡುವ ಪ್ರಕ್ರಿಯೆಗಳ ಮೂಲಕ ಮಾಡಬಹುದು.

## ವಾರವಾರದ ವರದಿ

ಪೂರಕ ಕಾನೂನು ಕಾರ್ಯಕರ್ತರು ವಾರಕ್ಕೊಮ್ಮೆ ತಮ್ಮ ಮೇಲ್ವಿಚಾರಕರಿಗೆ / ಸಂಯೋಜಕರಿಗೆ ತಂತಮ್ಮ ಪ್ರಕರಣದ ಪ್ರಗತಿಯ ಬಗ್ಗೆ ವರದಿ ಮಾಡಬಹುದು. ತಾವು ಕೈಗೊಂಡ ಕಾರ್ಯವಿಧಾನಗಳ ಮತ್ತು ಕ್ರಮಗಳ ಹಾಗೂ ಅವರಿಗೆ ಸರ್ಕಾರೀ ಸಂಸ್ಥೆಗಳಿಂದ ದೊರೆತ ಪ್ರತಿಕ್ರಿಯೆಗಳನ್ನು ಕುರಿತು, ಮುಂದಿನ ಹಂತಗಳ ಯೋಜನೆಯೊಂದಿಗೆ ಚರ್ಚಿಸಬಹುದು. ವಾರವಾರದ ವರದಿಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿರ ಬಹುದು.

- ಚಾಲ್ತಿಯಲ್ಲಿರುವ ಪ್ರಕರಣಗಳ ಸಾರಾಂಶ, ಆ ಹಿಂದಿನ ವಾರದಲ್ಲಿ ಮಾಡಲಾದ ಕಾರ್ಯಗಳನ್ನು ಎತ್ತಿ ತೋರಿಸಿ, ಮುಂಬರುವ ವಾರದಲ್ಲಿ ಯೋಜಿಸಲಾಗಿರುವ ಕೆಲಸ
- ಹೊಸ ಅಥವಾ ಸಂಭಾವ್ಯ ಪ್ರಕರಣಗಳ ವಿವರ
- ಪರಿಹರಿಸಿದ / ಇತ್ಯರ್ಥಗೊಂಡ / ನಿಷ್ಕ್ರಿಯ ಪ್ರಕರಣಗಳ ಬಗ್ಗೆ ನವೀಕರಣ
- ಕೈಗೊಂಡ ಇನ್ನಿತರ ಚಟುವಟಿಕೆಗಳು



**ಪ್ರಗತಿಯನ್ನು ಪರಿಶೀಲಿಸುವ ಸ್ಪಷ್ಟ ಉದ್ದೇಶವನ್ನು ನೆರವೇರಿಸುವುದರೊಂದಿಗೆ, ಇದು, ಕಠಿಣ ಪ್ರಕರಣಗಳ ಕುರಿತು ಮುಂದಿನ ಹಂತಗಳ ಬಗ್ಗೆ ಮತ್ತು ಸೃಜನಾತ್ಮಕ ಪರಿಹಾರಗಳನ್ನು (ಒದಗಿಸಿ) ಪರೀಕ್ಷಿಸಲು ಪೂರಕ ಕಾನೂನು ಕಾರ್ಯಕರ್ತರು ಮತ್ತು ಸಂಯೋಜಕರು ಒಟ್ಟು ಸೇರಿ 'ಮಿದುಳು (ಮನ) ಮಂಥನ' (ಬ್ರೈನ್ ಸ್ಟಾರ್ಮಿಂಗ್) ಮಾಡಲು ಇದೊಂದು ಸದವಕಾಶವೂ ಸಹ ಆಗಿರುತ್ತದೆ.**


## ಮಾಸಿಕ ಸಮಾಲೋಚನಾ ಸಭೆ

ಪ್ರತಿ ತಿಂಗಳು, ಎಲ್ಲಾ ಪೂರಕ ಕಾನೂನು ಕಾರ್ಯಕರ್ತರನ್ನು ಸೇರಿಸಿ ಸಮಾಲೋಚನಾ ಸಭೆಗಳನ್ನು ಒಂದೇ ಸ್ಥಳದಲ್ಲಿ ಮಾಡುವುದು ಸಂಯೋಜಕರಿಗೆ ಉಪಯುಕ್ತವಾಗಿರುತ್ತದೆ. ಇದು, ಪೂರಕ ಕಾನೂನು ಕಾರ್ಯಕರ್ತರಿಗೆ, ಪ್ರತಿ ಒಬ್ಬರ ಪ್ರಕರಣಗಳ ಬಗ್ಗೆ ಕಲಿಯುವ ಹಾಗೂ ಪರಸ್ಪರ ವಿನಿಮಯ ಮಾಡಿಕೊಳ್ಳುವ ವೇದಿಕೆಯಾಗುವುದಲ್ಲದೆ ಸಾಧ್ಯವುಳ್ಳ ಪರಿಹಾರಗಳ ಕುರಿತು ಸಾಮೂಹಿಕ 'ಮಿದುಳು (ಮನ) ಮಂಥನ' ಮಾಡಲು ಮತ್ತು ಎಲ್ಲರ ಪ್ರಕರಣಗಳ ಪ್ರಗತಿಯ ಬಗ್ಗೆ ಪರಿಶೀಲನೆ ಮಾಡಲೂ ಸಹ ಒಂದು ವೇದಿಕೆಯಾಗುತ್ತದೆ. ಈ ಮಾಸಿಕ ಸಭೆಗಳು ಮೂಲಭೂತವಾಗಿ, 'ಸಹಯೋಗೀ ಕಲಿಕೆಗೆ, ಸಭೆಗಳನ್ನು ನಡೆಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು, ಮತ್ತು ತಮ್ಮ ಪ್ರಕರಣಗಳ ಬಗ್ಗೆ ಮಾತನಾಡಿಕೊಳ್ಳಲು ಸಹಾಯ ಮಾಡುತ್ತವೆ. ಪ್ರಕರಣದ ಫಾರಮ್ಮುಗಳನ್ನು ಮತ್ತು ಪ್ರಕರಣ ಕಡತಗಳನ್ನು ಈ ಚರ್ಚೆಗಳಲ್ಲಿ ಬಳಸ ಬಹುದಾಗಿರುತ್ತದೆ.

ಈ ವಾರವಾರದ ಮತ್ತು ಮಾಸಿಕ ಚರ್ಚೆಗಳನ್ನು ಹೊರತು ಪಡಿಸಿ, ಪೂರಕ ಕಾನೂನು ಕಾರ್ಯಕರ್ತರು ಸಂಯೋಜಕರನ್ನು ಆಗಾಗ್ಗೆ, ಹಾಗೂ ಮತ್ತಿನ್ನಷ್ಟು ಬಾರಿ ಸಂಪರ್ಕಿಸಿ, ಪ್ರಕರಣಗಳನ್ನು ಪರಿಹರಿಸಲು ಸಲಹೆಗಳನ್ನು ಪಡೆಯಬಹುದು. ಆ ಮೊದಲೇ ಯೋಜಿಸಿದ್ದ ಕ್ರಮವು ಕೆಲಸ ಮಾಡದಿದ್ದಲ್ಲಿ, ಬಳಸಿದ ಕಾರ್ಯತಂತ್ರಗಳನ್ನು ಮರು ಯೋಜಿಸುವ ಅವಶ್ಯಕತೆ ಬಂದಾಗ, ಸಂಯೋಜಕರನ್ನು ಸಂಪರ್ಕಿಸ ಬೇಕೆಂದು ಇಲ್ಲಿ ನಿಖರವಾಗಿ ಸೂಚಿಸಲಾಗಿದೆ.



ಯೋಜನೆಗಳ ಅನುಕರಣೆಯನ್ನು ಪಢ್ಯೀಕರಿಸಲು ಒಂದು ಉಪಕರಣದಂತಿರುವ 'ಕಾಂಪ್ಲಯೆನ್ಸ್ ಕ್ರೌಡ್ ಸೋರ್ಸಿಂಗ್ ವೆಬ್ ಸೈಟ್' (ಅನುಕರಣಾ ಗುಂಪು ಸಂಪನ್ಮೂಲ ಜಾಲ ತಾಣ) ನ್ನು ಬಳಸುವ ಕ್ರಮದ ಕುರಿತು ಪ್ರಾದೇಶಿಕ ತರಬೇತಿ



ಪೂರಕ ಕಾನೂನು ಮೇಲ್ವಿಚಾರಕರೊಬ್ಬರು, ಪ್ರಕರಣಗಳ 'ಆನ್ ಲೈನ್ ಡೇಟಾಬೇಸ್' ನಲ್ಲಿ ಪ್ರಕರಣದ ಮಾಹಿತಿಯನ್ನು ದಾಖಲಿಸಲು ಪೂರಕ ಕಾನೂನು ಕಾರ್ಯಕರ್ತರಿಗೆ ಬೆಂಬಲ ನೀಡುತ್ತಿರುವುದು

## ಸಂಶೋಧನಾ ಬೆಂಬಲ


**ಪ್ರಕರಣಗಳ ಮತ್ತು ಅವು ಹೇಗೆ ಪ್ರಗತಿಗೊಳ್ಳುತ್ತಿದೆ ಎಂದು ವಿಶ್ಲೇಷಣೆ ಮಾಡುವ ಸಂಶೋಧನಾ ತಂಡವೊಂದರ ಬೆಂಬಲವು ಸಂಯೋಜಕರಿಗೆ ಮತ್ತು ಪೂರಕ ಕಾನೂನು ಕಾರ್ಯಕರ್ತರಿಗೆ ಅತ್ಯಂತ ಮೌಲ್ಯಯುತ ಬೆಂಬಲವಾಗಿರುತ್ತದೆ. ಈ ಸಂಶೋಧನಾ ತಂಡವು ವಾರವಾರದ ವರದಿಯನ್ನು ಪೂರಕ ಕಾನೂನು ಕಾರ್ಯಕರ್ತರಿಂದ ಪಡೆಯಬಹುದು, ಹಾಗೂ, ಅವರ ಮಾಸಿಕ ಸಭೆಗಳಲ್ಲಿ ಹಾಜರಿರಬಹುದು. ಪ್ರಕರಣಗಳಿಂದ ದತ್ತಾಂಶಗಳನ್ನು ಕಟ್ಟುನಿಟ್ಟಾಗಿ ಪಥ್ಯೀಕರಿಸಿ ಮತ್ತು ಪ್ರಕರಣ ಪಥ್ಯೀಕರಣ ಫಾರಮ್ ನಿಂದ ಮತ್ತು ಆಕ್ಶನ್ ಲಾಗ್ ನಿಂದ ಸಂಗ್ರಹಿಸಿದ ಮಾಹಿತಿ – ಇವೆಲ್ಲವನ್ನೂ ಪ್ರಕರಣ ದತ್ತಾಂಶ ಆಧಾರತಲ (ಡೇಟಾ ಬೇಸ್) ದಲ್ಲಿ ಒಗ್ಗೂಡಿಸಿ ಇಡಬಹುದು. ಈ ರೀತಿ ಒಗ್ಗೂಡಿಸಿ ಇಟ್ಟ ದತ್ತಾಂಶ ಆಧಾರತಲವು ಅಮೂಲ್ಯ ಮಾಹಿತಿಗಳನ್ನು ಒದಗಿಸುತ್ತದೆ.**

ಉದಾಹರಣೆಗೆ, 2014ರ, ಪ್ರಕರಣಗಳ ದತ್ತಾಂಶ ಆಧಾರತಲವನ್ನು ಬಳಸಿದಾಗ, ಒಂದು ಪೂರಕ ಕಾನೂನು ತಂಡವು ಶೇಕಡಾ 33 ರಷ್ಟು ಯಶಸ್ಸು ಪ್ರಮಾಣವನ್ನು ತೋರಿಸಿತ್ತು. ಇಲ್ಲಿ ಪ್ರಕಟಗೊಂಡ ಮತ್ತೊಂದು ಅಂಶವೆಂದರೆ, ಕರಾವಳಿ ಪ್ರದೇಶದ ನಿವಾಸಿಗಳು ಸಿ ಆರ್ ಜೆಡ್ ಅನುಮತಿಯ ಕಾಗದ ಪತ್ರಗಳನ್ನು ಸಲ್ಲಿಸಲು ಸಹಾಯ ಒದಗಿಸದ ಪ್ರಕರಣಗಳು ಅತ್ಯಂತ ಯಶಸ್ವೀ ಪ್ರಕರಣ ಮಾದರಿ ಎಂದು ಕಂಡುಬಂದದ್ದು. ಇದು ತೋರಿಸಿಕೊಟ್ಟ ಇನ್ನೂ ಒಂದು ಅಂಶವೆಂದರೆ, ಪ್ರಕರಣಗಳ ಯಶಸ್ವೀ ಪರಿಹಾರಕ್ಕಾಗಿ ಕನಿಷ್ಟ ಪಕ್ಷ 2 ಅಥವಾ 3 ಸಂಗತವಾದ ಸಂಸ್ಥೆಗಳನ್ನು ಸಂಪರ್ಕಿಸಲೇ ಬೇಕು ಎಂಬುದನ್ನು.




**ಪ್ರಕರಣಗಳಿಂದ ಒದಗಿ ಬರುವ ಮಾಹಿತಿಯನ್ನು ಪೂರಕ ಕಾನೂನು ಕಾರ್ಯ ವಿಧಾನ ಮತ್ತು ನಿರ್ವಹಣೆಯನ್ನು ಉತ್ತಮಗೊಳಿಸಿಕೊಳ್ಳಲು ಬಳಸ ಬಹುದು. ಜೊತೆಗೆ, ವ್ಯವಸ್ಥಿತ ಕಾನೂನು ಬದಲಾವಣೆಗೆ ಮತ್ತು ಸಾಂಸ್ಥಿಕ ರೂಢಿಗಳಲ್ಲಿ ಬದಲಾವಣೆ ತರಲು, ಪುರಾವೆಗಳ ಆಧಾರವನ್ನೊಳಗೊಂಡ ಪ್ರಸ್ತಾಪಗಳನ್ನು ಒಗ್ಗೂಡಿಸಲು ಈ ಮಾಹಿತಿಗಳನ್ನು ಬಳಸಬಹುದು.**

ಉದಾಹರಣೆಗೆ, ಭಾರತದಲ್ಲಿ, ಪರಿಸರೀಯ ಅನುಮತಿಯ ಷರತ್ತುಗಳ ಅನನುಸರಣೆಯಿಂದಾಗಿ ಮೀನುಗಾರರು ಮತ್ತು ಕೃಷಿಕರು ಬಾಧಿತಗೊಂಡ ಹಲವಾರು ಪ್ರಕರಣಗಳನ್ನು ಪೂರಕ ಕಾನೂನು ತಜ್ಞರು ಎದುರಿಸುತ್ತಿದ್ದರು. ಹೀಗೆ ದೊರೆತ ಮಾಹಿತಿಯ ಆಧಾರದ ಮೇಲೆ, 'ಪರಿಸರ ಪರಿಣಾಮ ಮೌಲ್ಯಮಾಪನ' (ಎನ್ವಿರೋನ್ಮೆಂಟ್ ಇಂಪ್ಯಾಕ್ಟ್ ಅಸ್ಸೆಸ್ಮೆಂಟ್- EIA) ಪ್ರಕ್ರಿಯೆ - ಎಂಬ ತರಬೇತಿ ಘಟಕವನ್ನು ವಿನ್ಯಾಸಗೊಳಿಸಿ ನಿರ್ವಹಿಸಲಾಯಿತು. ಆ ಬಳಿಕ, ಈ ಷರತ್ತುಗಳಲ್ಲಿ ಪಟ್ಟಿ ಮಾಡಿರುವ ಪರಿಸರ ಭದ್ರತಾ ಕ್ರಮಗಳನ್ನು ಸರಕಾರ ಅಥವಾ ಸಂಸ್ಥೆಗಳಿಂದ ಉಲ್ಲಂಘನೆಯಾದ ಪ್ರಕರಣಗಳಲ್ಲಿ ಉತ್ತಮವಾದ ಫಲಿತಾಂಶಗಳು ಒದಗಿ ಬರುತ್ತಿವೆ. ದತ್ತಾಂಶ ಆಧಾರತಲವನ್ನು ಬಳಸಿ, ಈ ರೀತಿ ನಿಯಮಿತ ಮಧ್ಯಂತರಗಳಲ್ಲಿ ವರದಿಗಳನ್ನು ತಯಾರಿಸುವುದರಿಂದ ಪ್ರತಿಯೊಂದು ಪ್ರಕರಣದ ಹಲವಾರು ನಿಯತಾಂಕಗಳ ಕುರಿತು ಮಾಹಿತಿಯನ್ನು ಒಟ್ಟು ಗೂಡಿಸಬಹುದು.









| Database last updated on: | | CPR -NAMATI Environment Justice Database Tracker | | | Written acknowledgement of the problem by the concerned institutions | Site inspection by the concerned institutions | Written directive of action issued by the concerned institutions (either to erring party/other institutions) | | |
|---|---|---|---|---|---|---|---|---|---|
| S.No. | State Case No. | Case Name | Paralegal Name/code | Status | Date of achieving Milestone 1 | Date of achieving Milestone 2 | Date of achieving Milestone 3 | Did the CP/affected community participate in the site visit? | |
| 1 | GJ 1 | Dalda Bandar | Hasmukh | Awaiting directions of action after the concerned department has acknowledged the problem | 08-05-2016 | | 16-06-2016 | | Partia |
| 2 | GJ 2 | DLCC Devbhumi Dwaraka | Hasmukh | Awaiting enforcement after the concerned department has issued directions of action | | | | | Partia |
| 3 | GJ 3 | DLCC Geer Somnath | Manish Thavar | | | | | | Full v |
| 4 | GJ 4 | DLCC Valsad | Manisha Goswami | | | | | | Full v |
| 5 | GJ 5 | CVCA- Kutch | Meenakshi Kapoor | Awaiting for the concerned department to acknowledge the problem | | | | | |
| 6 | GJ 6 | Coal Handaling Guide line | Bharat Patel | | | | | | Full v |

**ಭಾರತದಲ್ಲಿ ಪೂರಕ ಕಾನೂನು ಪ್ರಕರಣಗಳ ಡೇಟಾಬೇಸ್ ಟ್ರ್ಯಾಕರ್ (ದತ್ತಾಂಶತಲ ಪಥ್ಯೀಕರೀಸುವ ಚೌಕಟ್ಟು)**



ಗುಜರಾತ್ ರಾಜ್ಯದ ಸೌರಾಷ್ಟ್ರದಲ್ಲಿ ಸಮುದಾಯ ಸಹಭಾಗಿಗಳ ಸಂಘವನ್ನು ಪ್ರಾರಂಭಿಸಲು ಸಮಲೋಚನೆ ಸಭೆ.

## ಮೈತ್ರಿ ಮತ್ತು ಸಂಸ್ಥೆಗಳನ್ನು ಕಟ್ಟುವುದು

ಪೂರಕ ಕಾನೂನು ತಜ್ಞರಿಗೆ ಕಕ್ಷಿಗಾರರ ಗುಂಪುಗಳನ್ನು ಮತ್ತು ಸಮುದಾಯ ಸಹಭಾಗಿಗಳ ಗುಂಪನ್ನು ಸಂಸ್ಥೆಗಳಾಗಿ ಬೆಳೆಸುವುದು ಪ್ರಮುಖ ಕಾರ್ಯವಾಗಿರುತ್ತದೆ. ಈ ಸಂಸ್ಥೆಗಳು, ಪ್ರಕರಣಗಳ ಸವಾಲುಗಳ ಬಗ್ಗೆ ಚರ್ಚಿಸಲು, ಪ್ರಕರಣ ಪರಿಹಾರದ ಪ್ರವೃತ್ತಿಗಳನ್ನು ಅರ್ಥೈಸಿಕೊಳ್ಳಲು, ಕಾರ್ಯತಂತ್ರಗಳ ಬಗ್ಗೆ ಕಲಿತ ಪಾಠಗಳನ್ನು ವಿನಿಮಯ ಮಾಡಿಕೊಳ್ಳಲು, ಅಲ್ಲದೆ, ಸಾಮೂಹಿಕವಾಗಿ ಕ್ರಮಗಳನ್ನು ನಿರ್ವಹಿಸಲು ಪ್ರಕರಣಗಳ ಒಂದು ಪುಂಜವನ್ನೇ ಕೈಗೆತ್ತಿ ಕೊಳ್ಳಬಹುದು. ತಮ್ಮ ಪ್ರಕರಣಗಳ ವಿಷಯದಲ್ಲಿ ಪರಿವರ್ತನಕಾರಿಗಳಾಗುವಂತಹ ಜನಗಳೊಂದಿಗೆ ತೊಡಗಿಕೊಳ್ಳುವುದೂ ಸಹ (ಈ ಸಂಸ್ಥಗಳಿಗೆ) ಬಹು ಮುಖ್ಯ. ವಕೀಲರು, ವಿಜ್ಞಾನಿಗಳು, ಕ್ರಿಯಾವಾದಿಗಳು, ಪತ್ರಕರ್ತರು, ಸಮಾಜ ಸೇವಕರು, ರಾಜಕಾರಣಿಗಳು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ಅಥವಾ ಎನ್ ಜಿ ಓ ಪ್ರತಿನಿಧಿಗಳು,- ಇವರೆಲ್ಲಾ ಪರಿವರ್ತನಕಾರ ರಾಗಿರಬಹುದು. ಇವರೆಲ್ಲಾ ಮುಖ್ಯವಾಗಿ ಬೆಂಬಲ / ಪ್ರೋತ್ಸಾಹ ಕೊಡುವಂತಹ ವ್ಯಕ್ತಿಗಳು / ಸಂಸ್ಥೆಗಳಾಗಿದ್ದು, ಪ್ರಕರಣಗಳ ಪರಿಹಾರಗಳನ್ನು ಸಾಧಿಸಲು ಇವರಿಂದ ಬೆಂಬಲವನ್ನು ಕೋರಿ ಪಡೆಯಬಹುದು. ಇದು, ಪ್ರಕರಣಗಳು ಯಶಸ್ಸುಗಳಿಸುವ ಸಂಭಾವ್ಯತೆಯನ್ನು ವೃದ್ಧಿಗೊಳಿಸುವುದಲ್ಲದೆ, ಇಂತಹ ಗಣ್ಯರ ಸುಲಭ ಸಾಮಿಪ್ಯವನ್ನು ಹೊಂದಿರುವ ಪೂರಕ ಕಾನೂನು ತಜ್ಞರ ವಿಶ್ವಾಸಾಹರ್ತೆಯನ್ನೂ ಅಧಿಕಗೊಳಿಸುತ್ತದೆ. ಯೋಜನೆಯು, ಅನುಭವೀ ವಕೀಲರನ್ನು, ವಿಷಯ ತಜ್ಞರನ್ನು, ವಿಜ್ಞಾನಿಗಳನ್ನು ಮತ್ತು ಸಮಾನ ರೀತಿಯ ಕೆಲಸಗಳಲ್ಲಿ ತೊಡಗಿರುವ ಎನ್ ಜಿ ಒ - ಇವರನ್ನೆಲ್ಲಾ ಭೇಟಿ ಮಾಡುವ ಅವಕಾಶ ಮತ್ತು ಸಾರ್ವಜನಿಕ ಸಭಾಸ್ಥಾನಗಳನ್ನು ಒದಗಿಸುತ್ತದೆ. ಪೂರಕ ಕಾನೂನು ತಜ್ಞ / ಕಾರ್ಯಕರ್ತರು, ತಮ್ಮ ಸಂಯೋಜಕರ ಸಲಹೆಯ ಮೇರೆಗೆ, ಈ ವ್ಯಕ್ತಿಗಳನ್ನು ಈ ಕೆಳಗಿನ ಸಂದರ್ಭ / ಸನ್ನಿವೇಶಗಳಲ್ಲಿ ಸಂಧಿಸ ಬಹುದು:


- ಪೂರಕ ಕಾನೂನು ಕಾರ್ಯಕರ್ತರು ತಾವೇ ಸ್ವತಃ ಪ್ರಕರಣವನ್ನು ಪರಿಹರಿಸಲಾರರು
- ಪ್ರಕರಣದ ಪರಿಣಾಮ ವಿಶೇಷವಾದ ದಾರುಣ ಸ್ಥಿತಿಯದಾಗಿರುತ್ತದೆ
- ಪ್ರಕರಣವು ತುರ್ತು ಪರಿಸ್ಥಿಯದಾಗಿರುತ್ತದೆ
- ಪ್ರಕರಣವು ಕಾನೂನುಬದ್ಧವಾಗಿ ವ್ಯಾಪಕ ಪರಿಣಾಮವನ್ನುಂಟು ಮಾಡುವ ಸಂಭಾವ್ಯತೆಯನ್ನು ಹೊಂದಿರುತ್ತದೆ

ಯೋಜನೆಯನ್ನು ರೂಪಿಸುವ ಸಮಯದಲ್ಲಿ, ಪೂರಕ ಕಾನೂನು ತಜ್ಞ/ಕಾರ್ಯಕರ್ತರಿಗೆ ತರಬೇತಿ ನೀಡಲು ಅಥವಾ ನಿಯತಕಾಲಿಕವಾಗಿ ಸಂಧಿಸುವ ಸಲಹಾ ಸಮಿತಿಯಾಗಿ, ಈ ವ್ಯಕ್ತಿಗಳ ಸಹಾಯವನ್ನು ಪಡೆಯಬಹುದು. ಪೂರಕ ಕಾನೂನು ತಜ್ಞರಿಗೆ ಇವರು ಅಮೂಲ್ಯ ಬೆಂಬಲಿಗರಾಗಿರುವುದಲ್ಲದೆ, ಯೋಜನೆಯ ಕಾರ್ಯದೂತರೂ ಸಹ ಆಗಿರುತ್ತಾರೆ. ಹಾಗಾಗಿ, ಸರಕಾರದ (ಆಯಾಮಗಳ) ಒಳಗೆ, ದಾನಿಗಳಲ್ಲಿ, ಹಾಗೂ ಇತರ ಸಂಸ್ಥೆಗಳಲ್ಲಿ ಯೋಜನೆಯ ಬಗ್ಗೆ ವ್ಯಾಪಕವಾಗಿ ಪ್ರಭಾವಬೀರುವ ಮಾರ್ಗಗಳನ್ನು ಇವರು ಸೃಜಿಸುತ್ತಾರೆ.



## ಮೌಲ್ಯೀಕರಣ

ಪರಿಣಾಮಕಾರಿತ್ವವುಳ್ಳ ಮೌಲ್ಯೀಕರಣ ಅಥವಾ ನಿರ್ಧಾರಣೆಯು ಪೂರಕ ಕಾನೂನು ಯೋಜನೆಯ (ಕಾರ್ಯಕ್ರಮದ) ಮುಖ್ಯ ಅಂಶವಾಗಿರುತ್ತದೆ. ಯೋಜನೆಯಲ್ಲಿ ಒಳಗೊಂಡಿರುವ ಎಲ್ಲಾ ವ್ಯಕ್ತಿಗಳ ಕಾರ್ಯನಿರ್ವಹಣೆಯಲ್ಲಿ ಸತತ ಸುಧಾರಣೆಗಾಗಿ, ಹಾಗೂ, ಇನ್ನಿತರರಿಗೆ ಯೋಜನೆಯು ಏನನ್ನೆಲ್ಲಾ ಸಾಧಿಸಿದೆ ಮತ್ತು ಹೇಗೆ ಸಾಧಿಸಿದೆ ಎಂದು ಶ್ರುತಪಡಿಸಲು ಈ ಮೌಲ್ಯೀಕರಣವು ಉಪಯುಕ್ತವಾಗಿರುತ್ತದೆ. ಮೌಲ್ಯೀಕರಣದ ವಿಧಾನಗಳನ್ನು ಪ್ರತಿಯೊಂದು ಪ್ರಕರಣದ ಫಾರಮ್ ಒಳಗೆ ಅಳವಡಿಸಬಹುದು, ಅಥವಾ ಸಂಶೋಧನಾ ತಂಡವು ಪ್ರತ್ಯೇಕ ಯೋಜನೆಯಾಗಿ ಕೈಗೊಳ್ಳಬಹುದು, ಅಥವಾ ಈ ಎರಡನ್ನೂ ಒಟ್ಟಿಗೆ ಅಳವಡಿಸಿಕೊಳ್ಳಬಹುದು. ಮೌಲ್ಯೀಕರಣವು ಅವಶ್ಯವಾಗಿ ನಿಯತ ಕಾಲಿಕ ಮತ್ತು ನಿಯಮಿತ ವಾಗಿದ್ದು, ಅದು ಸಕಾಲಿಕ ಹಾಗೂ ಸಂಗತವಾದ ಹಿಮ್ಮಾಹಿತಿಯನ್ನು ಒದಗಿಸುವಂತಿರ ಬೇಕು.




ಭಾರತ - ಪೂರಕ ಕಾನೂನು ಪ್ರಕರಣಗಳ ಮಧ್ಯಾವಧಿ ಮೌಲ್ಯೀಕರಣದ ಫಲಿತಾಂಶಗಳ ಕೈತಯಾರಿಕೆಯ ತಃಖ್ತೆಪಟ (ಚಾರ್ಟು).



ಕರಾವಳಿ ನಿಯಂತ್ರಣ ವಲಯ ಕಾನೂನು ಹೇಗೆ ಮೀನುಗಾರ ಸಮುದಾಯಗಳಿಗೆ ಸಹಾಯಕ ವಾಗಬಹುದು ಎಂಬುದರಬಗ್ಗೆ ಪೂರಕ ಕಾನೂನು ತಜ್ಞರ ಮತ್ತು ಸ್ಥಳೀಯ ನಾಟಕ ತಂಡದವರಿಂದ (ಪ್ರದರ್ಶಿಸಲಾದ) ಬೀದಿನಾಟಕ.

## ಅಂತಿಮವಾಗಿ, ಪ್ರತಿ ಒಂದು ಪ್ರಕರಣವು (ಈ ಕೆಳಗಿನ) 3 ಮಟ್ಟಗಳಲ್ಲಿ ನಿರ್ಧಾರಣೆಯಾಗತಕ್ಕದು. (ಮೌಲ್ಯೀಕರಣಗೊಳ್ಳತಕ್ಕದ್ದು)

### 1 ಪರಿಹಾರಗಳು

ಅನುಕರಣಾಪೂರಿತ ಪರಿಹಾರವನ್ನು ಸಾಧಿಸಿ, ಆ ಮೂಲಕ, ಪ್ರಸ್ತುತ ಪರಿಣಾಮದ ಮೂಲವನ್ನು (ನೇರವಾಗಿ) ನಿಭಾಯಿಸಲು, ಪೂರಕ ಕಾನೂನು ತಜ್ಞರು ಪ್ರತಿ ಒಂದು ಪ್ರಕರಣದೊಂದಿಗೆ ಕೆಲಸ ಮಾಡಬೇಕು. ಉದಾಹರಣೆಗೆ, ಧೂಳಿನಿಂದಾಗುವ ಪರಿಣಾಮಗಳನ್ನು ಕಡಿಮೆಮಾಡುವಂತಹ ಅನುಕರಣಾ ರೂಢಿಗಳಿಗೆ ಅನುಗುಣವಾಗಿ ಕಲ್ಲಿದ್ದಲನ್ನು ಹೊತ್ತು ಸಾಗುವ ಲಾರಿಗಳು ಹೊದಿಕೆ/ಹೊದಿಕೆಗಳಿಂದ ಹೊದಿಸಲ್ಪಟ್ಟಿರಬೇಕು. ಹೇಗಾದರಾಗಲಿ, ಹಿಂದೆ ಆಗಿರುವ ಹಾನಿಗಳಿಂದಾದ ನಷ್ಟವನ್ನು ತುಂಬುವಂತೆ ಖಚಿತ ಪಡಿಸಲು, ಪೂರಕ ಕಾನೂನು ತಜ್ಞರು ಮತ್ತು ಬಾಧಿತ ಸಮುದಾಯಗಳು ಹೆಚ್ಚುವರಿ ಪರಿಹಾರಗಳ ಬೆಂಬತ್ತಿ ಮುಂದುವರಿದು (ಪರಿಹಾರವನ್ನು) ಪಡೆಯಬಹುದು. ಉದಾ. ಪರಿಹಾರ ಧನ, ಮುಂಬರುವ ಕಾಲದಲ್ಲೂ ಅನುಕರಣಾಕ್ರಮಗಳ ಪಾಲನೆಯಾಗುವುದನ್ನು ಖಚಿತ ಪಡಿಸಲು, ಲಾರಿಗಳನ್ನು ಹೊದಿಕೆ ಇಲ್ಲದೆ ಓಡಿಸುವ ಎಲ್ಲಾ ಕಂಪೆನಿಗಳನ್ನು ದಂಡ ತೆರುವ ಖಂಡಗಳಿಗೆ ಒಳಪಡಿಸುವಂತಹ ಪರಿಹಾರಗಳನ್ನು ಮುಂದುವರಿಸಬಹುದು, ಅಥವಾ, ಸಮುದಾಯವೇ ನಿರ್ವಹಿಸುವಂತಹ 'ಪರಿಶೀಲನಾ ಸ್ಥಳ' (ಚೆಕ್ ಪಾಯಿಂಟ್) ವನ್ನು ನಿರ್ಮಿಸಿ, ಅಲ್ಲಿ ಯಾತ್ರೆಯನ್ನು ಪ್ರಾರಾಭಿಸುವ ಮೊದಲೆ ಲಾರಿಗಳಿಗೆ ಹೊದಿಕೆ ಹೊದಿಸುವ ಕ್ರಮವೂ ಒಂದು ಪರಿಹಾರಣೋಪಾಯವಾಗಿರುತ್ತದೆ..

ಪ್ರಕರಣವು ಯಾವುದೇ ಅನುಕರಣೆ ಮತ್ತು ಹೆಚ್ಚಾದ ಪರಿಹಾರಗಳನ್ನು ಮುಂದುವರಿಸಿಕೊಂಡು ಹೋಗುವುದಾದರೆ, ಅನನುಕರಣೆ ಮಾಡುವುದನ್ನು ನಿಲ್ಲಿಸಿದ್ದಾರೆಯೆ ಹಾಗೂ ಹಿಂದಿನ ಅಥವಾ/ ಮತ್ತು ಮುಂಬರುವ ಹಾನಿಯ ಹೊರೆಯನ್ನು ನಿಭಾಯಿಸಲಾಗಿದೆಯೆ - ಎಂಬ ಅಂಶಗಳನ್ನು ನಿರ್ಧಾರಣೆಗೊಳಪಡಿಸತಕ್ಕದ್ದು. ಪರಿಸರೀಯ ನ್ಯಾಯಕ್ಕೆ ಸಂಬಂಧಪಟ್ಟ ಪ್ರಕರಣಗಳು ಪುನಃ ಪುನಃ ಮರಳಿಬರುವ ಪ್ರವೃತ್ತಿಯದಾಗಿರುವುದರಿಂದ, ಅವುಗಳ ಪರಿಹಾರೋಪಾಯಗಳೂ ಅಶಾಶ್ವತ. ಉದಾಹರಣೆಗೆ, ಕಕ್ಷಿಗಾರರ ಮತ್ತು ಪೂರಕ ಕಾನೂನು ತಜ್ಞರ ಪ್ರಯತ್ನ, ಪರಿಶ್ರಮದಿಂದ, ಕಾನೂನು ಬಾಹಿರ ಮರಳು ಗಣಿಗಾರಿಕೆ ಅಥವಾ ಜಲ ಸೆಳೆಯುವಿಕೆಯು ನಿಲ್ಲಬಹುದು. ಆದಾಗ್ಯೂ, ಯಾವಗಲಾದರೂ ಪುನರಾರಂಭವಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ, ಕಂಡುಕೊಂಡ ಪರಿಹಾರವು (ಇಷ್ಟು ಸಮಯದವರೆಗೆ) ಸುಭದ್ರ ಎಂದು ಒತ್ತಿ ಹೇಳಬಹುದಾದ ಒಂದು ನಿರ್ದಿಷ್ಟ ಕಾಲಾವಧಿಯನ್ನು ಪರಿಗಣಿಸುವುದು ವಿವೇಚನಾಯುಕ್ತವಾದದ್ದು. ಪ್ರಕರಣವನ್ನು ಕೊನೆಗೊಳಿಸುವ ಸಮಯದಲ್ಲಿ, ಪೂರಕ ಕಾನೂನು ತಜ್ಞರು ಮತ್ತು ಕಕ್ಷಿಗಾರರು ಸಮಸ್ಯೆ ಇದ್ದ ಪ್ರದೇಶಕ್ಕೆ ನಿರ್ದಿಷ್ಟಗೊಳಸಿದ್ದ ಕಲಾವಧಿಯ ಕೊನೆಯಲ್ಲಿ ಹೋಗಿ, ಮತ್ತೊಮ್ಮೆ ನೋಡಿ ಬರವುದು ಅಗತ್ಯ. ಕಾನೂನು ಬಾಹಿರ ಚಟವಟಿಕೆಯು ಆ ಕಾಲಾವಧಿಯ ಮುನ್ನವೇ ಪುನಃ ಆರಂಭವಾಗಿದ್ದಲ್ಲಿ. ಆಪ್ರಕರಣವನ್ನು ಪುನಃ ತೆರೆಯ ಬೇಕಿರುತ್ತದೆ. ಆದರೆ, ಕಾಲವಧಿಯ ನಂತರ, ಚಟುವಟಿಕೆಯು ಪುನಃ ಆರಂಭವಾಗಿದ್ದರೆ, ಹೊಸ ಪ್ರಕರಣ (ಎಂದು) ತೆರೆಯಬೇಕಿರುತ್ತದೆ.

ಬಹುತೇಕ ಸಂದರ್ಭಗಳಲ್ಲಿ, ಅಪೂರ್ಣ ಪರಿಹಾರಗಳನ್ನು ಸಾಧಿಸುವುದೂ ಸಹ ಬಹಳಷ್ಟು ಶ್ರಮ, ಪ್ರಯತ್ನ, ಕಾನೂನು ಜ್ಞಾನ, ಮತ್ತು ಸಾಂಸ್ಥಿಕ (ಎಡರು ತೊಡರುಗಳ ನಡುವೆ) ಸಂಚಾರ - ಇವೆನ್ನೆಲ್ಲ ಒಳಗೊಂಡಿರುತ್ತದೆ. ಆದ್ದರಿಂದ, ಅಪೂರ್ಣ ಪರಿಹಾರಗಳನ್ನು ಗುಣಾತ್ಮಕ ಅಭಿವೃದ್ಧಿ ಎಂದು ಪರಿಗಣಿಸಲಾಗುತ್ತದೆ

### 2 ಕ್ರಮಗಳು

ಈ ಹಂತದಲ್ಲಿ, ಪ್ರಕರಣದ ಪರಿಹಾರೋಪಯಕ್ಕೆ ಯಾವ ಅಂಶಗಳು ನೆರವಾದವು ಎಂಬುದನ್ನು ನಿರ್ಧಾರಣೆಗೆ ಒಳಪಡಿಸಲಾಗುತ್ತದೆ. ಹಲವಾರು ಅಂಶಗಳು ಸಮಸ್ಯೆಯನ್ನು ಪರಿಹರಿಸುವ ಪ್ರಕ್ರಿಯೆಯ ಮೇಲೆ ಪ್ರಭಾವನ್ನುಂಟು ಮಾಡಿದರೂ, ಇದರಲ್ಲಿ ಪೂರಕ ಕಾನೂನು ತಜ್ಞರ ಪಾತ್ರವನ್ನು ವಿಚಾರಿಸಿ ಖಚಿತ ಪಡಿಸಿಕೊಳ್ಳುವುದು ಮುಖ್ಯ. ಪ್ರಕರಣವನ್ನು ಕೊನೆಗೊಳಿಸುವ ಸಮಯದಲ್ಲಿ, ಪ್ರಕರಣದ ಯಶಸ್ವೀ ಪರಿಹಾರೋಪಯದಲ್ಲಿ, ತಮ್ಮ ಕೊಡುಗೆಯ ಬಗ್ಗೆ ಪುರಾವೆ ಇರುವುದನ್ನು ಪೂರಕ ಕಾನೂನು ತಜ್ಞರು ಖಚಿತ ಪಡಿಸಿಕೊಳ್ಳ ಬೇಕು. ಈ ಪುರಾವೆಗಳನ್ನು, ಕಕ್ಷಿಗಾರರ ಸಾಕ್ಷಿಗಳ, ಪರಿಹಾರ ಕಾರ್ಯದಲ್ಲಿ ಭಾಗಿಯಾಗಿದ್ದ ಸರ್ಕಾರೀ ಅಧಿಕಾರಿಗಳ, ಪತ್ರಿಕೆಗಳ ವರದಿ, ಅಥವಾ ಸರ್ಕಾರಿ ಸುತ್ತೋಲೆ/ ಆದೇಶ / ಆರ್ ಟಿ ಐ ಅರ್ಜಿಗೆ ದೊರೆತ ಪ್ರತ್ಯುತ್ತರಗಳ, ಈ ಮಂತಾದವುಗಳ ಮೂಲಕ ದೊರಕಿಸಿಕೊಳ್ಳಬಹುದು.



### 3 ಕಾನೂನು (ಮೂಲಕ) ಸಶಕ್ತೀಕರಣ / ಸಬಲೀಕರಣ

ಸಮುದಾಯಗಳ ಮತ್ತು ಬಾಧಿತ ಜನರ, ಕಾನೂನನ್ನು ಅರ್ಥೈಸಿಕೊಳ್ಳುವ ಮತ್ತು ಬಳಸುವ ಸಾಮರ್ಥ್ಯವನ್ನು ಬೆಳೆಸಿ ಕಟ್ಟುವುದು ಕಾನೂನು ಸಶಕ್ತೀಕರಣ ಕಾರ್ಯಕ್ರಮದ ಪ್ರಧಾನ ಗುರಿಯಾಗಿರುತ್ತದೆ. ಹಾಗಾಗಿ, ಪೂರಕ ಕಾನೂನು ತಜ್ಞರು ಜೊತೆಯಾಗಿ ಕೆಲಸ ಮಾಡುವ ಜನಗಳ ಕಾನೂನು ಜ್ಞಾನ ಮತ್ತು ಸಾಮರ್ಥ್ಯವನ್ನು, ಯಾವುದಾದರೊಂದು ಕಾರ್ಯರೀತಿಯನ್ನು ಬಳಸಿ ಮೌಲ್ಯೀಕರಿಸಿ, ಆ ಮೂಲಕ ಪೂರಕ ಕಾನೂನು ತಜ್ಞರ ಮತ್ತು ಈ ಕಾರ್ಯಕ್ರಮದ ಮೌಲ್ಯೀಕರಣ ಮಾಡಬಹುದು. ಈ ಮೌಲ್ಯೀಕರಣವನ್ನು ಏಕಮಾತ್ರ ಪ್ರಕರಣದ ಮಟ್ಟದಲ್ಲಿ ಮಾಡಬಹುದು, ಅಥವಾ, (ಹಲವು ಪ್ರಕರಣಗಳಿಂದ ಆಯ್ದ) ಒಂದು ಮಾದರೀ ಪ್ರಕರಣದ ಬಗ್ಗೆ (ಮೌಲ್ಯೀಕರಣವನ್ನು) ಮಾಡಬಹುದು. ಕಕ್ಷಿಗಾರರು ಅಥವಾ ಸಮುದಾಯ ಸಹಭಾಗಿಗಳು ಪ್ರಕರಣಕ್ಕೆ ಸಂಬಂಧಿಸಿದ ಕಾನೂನುಗಳ ಮತ್ತು ಸಂಸ್ಥೆಗಳ ಬಗ್ಗೆ ಸೂಕ್ತ ಅರಿವನ್ನು ಹೊಂದಿದ್ದು, ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವ ಬೇರೆ ಜನಗಳಿಗೆ ಇವರು ಸಹಾಯ ನೀಡಲು ಸಮರ್ಥರೇ ಎಂದು ಗುರುತಿಸಿ (ಕಾರ್ಯಕ್ರಮದ) ಮೌಲ್ಯೀಕರಣ ಮಾಡಬಹುದು. ಈ ಮೌಲ್ಯೀಕರಣ ಪ್ರಕ್ರಿಯೆಯನ್ನು ನಡೆಸಲು, ಒಂದು ಉಪಯುಕ್ತ ಮಾರ್ಗವೆಂದರೆ, ಪೂರಕ ಕಾನೂನು ತಜ್ಞರು ತಾವು ಸಂಘಟಿಸಿದ ಕಾರ್ಯಕ್ರಮಗಳಲ್ಲಿ ಸಮುದಾಯದ ಸದಸ್ಯರನ್ನು ಒಳಗೊಳಿಸಿ ಕೊಳ್ಳುವುದು

ಪ್ರಕರಣಗಳ ಪರಿಹಾರದ ನಂತರವೂ ಕಕ್ಷಿಗಾರರೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳುವ ಮನೋಧರ್ಮವನ್ನು ಅತ್ಯಂತ ವಿಶೇಷವಾಗಿ ಶಿಫಾರಸು ಮಾಡಲಾಗುತ್ತದೆ. ಈ ರೀತಿ ಸಂಪರ್ಕವನ್ನಿಟ್ಟುಕೊಳ್ಳುವುದರಿಂದ, ಕಕ್ಷಿಗಾರರು ಮುಂಬರುವ ಈ ತೆರನ ಪ್ರಕರಣಗಳನ್ನು ಪರಿಹರಿಸಿದ ನಿದರ್ಶನಗಳನ್ನು (ಯವುದಾದರೂ ಇದ್ದರೆ), ದಾಖಲಿಸಲು ಉಪಯುಕ್ತವಾಗಿರುತ್ತದೆ. ಅದೂ ಅಲ್ಲದೆ, (ಸಂಪರ್ಕವನ್ನಿಟ್ಟುಕೊಂಡ ಕಾರಣವಾಗಿ) ಕಕ್ಷಿಗಾರರು ತಾವೇ ಸ್ವತಃ ಪೂರಕ ಕಾನೂನು ತಜ್ಞರಾಗುವ ಇಲ್ಲವೆ ಆ ಕೆಲಸವನ್ನು ಕೈಗೊಳ್ಳುವ ಸಂಭವವೂ ಇರುತ್ತದೆ. ಈ ತೆರನ ನಿದರ್ಶನಗಳ ನಿರೂಪಣೆಗಳು ಮೌಲ್ಯೀಕರಣ ಪ್ರಕ್ರಿಯೆಯನ್ನು ಸಂವರ್ಧಿಸುತ್ತವೆ.

ಮೌಲ್ಯೀಕರಣವು ಕಾರ್ಯಕ್ರಮದ ನಿಯಮಿತವಾದ ಮತ್ತು ಉಪಯುಕ್ತವಾದ ಭಾಗವಾಗಿರಬೇಕೆಂದರೆ, (ವ್ಯಾವಹಾರಿಕ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಉದಾ. ಇದಕ್ಕಾಗಿ ಲಭ್ಯವಿರುವ ಸಿಬ್ಬಂದಿ ಮತ್ತು ಸಂಪನ್ಮೂಲಗಳ ಆಧಾರದ ಮೇಲೆ) ಸಮುದಾಯ ಸಹಭಾಗಿಗಳೊಂದಿಗೆ / ಕಕ್ಷಿಗಾರರೊಂದಿಗೆ ಸಮಾಲೋಚನಾ ಸಭೆಗಳನ್ನು ನಡೆಸುವ ಮೂಲಕ ಮಾಡುವುದು ಅತ್ಯುತ್ತಮ. ಸಶಕ್ತೀಕರಣದ ಪ್ರಭಾವವನ್ನು ಅಧ್ಯಯನ ಮಾಡಲು, ಸೇವೆಗೆ ಒಳಪಟ್ಟ ಕಕ್ಷಿಗಾರ ಅಥವಾ ಸಮುದಾಯಗಳ ನಡುವೆ ಸಂದರ್ಶನ ಗಳನ್ನು ನಡೆಸಿ, ಪ್ರಶ್ನಾವಳಿ ಕರಪತ್ರಗಳನ್ನು ವಿತರಿಸಿ ತಿಳಿದುಕೊಳ್ಳಬಹುದು ಮತ್ತು ತೃತೀಯ-ಪಕ್ಷ (ಥರ್ಡ್ ಪಾರ್ಟಿ) ಗುಂಪುಗಳ ಮೂಲಕ ಮೌಲ್ಯೀಕರಣವನ್ನು ಮಾಡಬಹುದು.



ಪರಿಹಾರಗಳು

ಕ್ರಮಗಳು

ಕಾನೂನು ಸಶಕ್ತೀಕರಣ


ಅನುಬಂಧ

# ಅನುಬಂಧ 1

## ನೀತಿ ಶಿಫಾರಸ್ಸಿನ ಮಾದರೀ ಕಾಗದ ಪತ್ರ

प्रणीति अनुसंधान केन्द्र
CENTRE FOR POLICY RESEARCH
Dharma Marg, Chanakyapuri, New Delhi-110021 (India)
Tel : 26115273 - 76 Fax : 91-11-26872746
E-mail: cprindia@vsnl.com Website: www.cprindia.org

7th November 2016

Shri Hardik Shah
Member Secretary, Gujarat Pollution Control Board
Block No: 14/8th Floor, New Sachivalaya
Sector 10 A, Gandhinagar
Phone: 079 2325660, email: hardik_73@yahoo.com

**Subject**: Regarding issuing State Level Mineral Handling Guidelines

Dear Mr Shah,

We are associated with the Centre for Policy Research (CPR)-Namati Environment Justice Program and have been working to address environmental impacts in several parts of coastal Gujarat.Through our work in Gujarat, we have been working with people whose lives and livelihoods have been impacted due to the mishandling of minerals during their mining, transportation and storage. Our experience and documentation is based on handling over ten cases in the Saurashtra coast in the districts of Jamnagar, Devbhoomi dwarka and Junagadh, where there have been instances of complaints being filed to the Gujarat Pollution Control Board (regional and central offices) to address these issues.

This experience has led us to identify that there are no guidelines that address the social and environmental and social impacts arising out of mining, transportation, storage and handling of minerals (other than coal). We have therefore put together suggestions to frame guidelines to mitigate some of these social and environmental impacts for your consideration.

As per Section 17 of the Air (Prevention and Control of Pollution) Act, 1981 the Gujarat Pollution Control Board (GPCB) is responsible for prevention, control and abatement of air pollution and has powers to perform such activities that it thinks are necessary for carrying into effect the purposes of the Act. Similar provisions are also there in Section 17 of the Water (Prevention and Control of Pollution) Act, 1974. Also under Section 31A of the Air Act and Section 33A of the Water Act, GPCB has the power to issue directions to any person, officer or authority, subject to the provisions of the Acts. There is also precedence of the GPCB in issuing Guidelines for Coal Handling Units, which has been extremely useful in mitigating impacts across the states.

We therefore urge the GPCB, using the powers vested to it under the Air and Water Acts to issue Guidelines for storage, transportation and handling of Minerals for the State of Gujarat so as to address the social and environmental impacts on the health, livelihoods & natural resources that are caused while transporting, storing and handling minerals. These guidelines cover minerals such as Bauxite, Bentonite, Limestone, Quartz, but is not limited to these but is extendable to the list of minerals in the annexure, which is reviewed on an annual basis by GPCB.

**SUGGESTED MINERAL HANDLING GUIDELINES**

**The following safeguards and conditions should be made legally binding on anyone who is engaged in mining, storage, transportation and handling of minerals:-**

1. **Citizen's Participation in Monitoring & Enforcement**
We urge GPCB to use the powers given to it under Section 24 of the Air Act and Section 23 of the Water Act which allows GPCB to empower any person to perform any function entrusted by the Board and allow for citizen's participation in monitoring and enforcement. The GPCB has itself through a circular on 4/2/2016[1] has made way for certification for third party inspection for orange industries, we request the GPCB to expand its definition for better compliance of environmental standards. Besides the use of technology, another effective way for better compliance is by including the active participation of affected communities as third party monitors, who could enhance enforcement through the collection of legally admissible evidence. By empowering the community that are facing the impacts of non-compliance of these guidelines, the GPCB can be assisted in monitoring the enforcement of these guidelines. We would be happy to share our experience of handling close to 10 cases in Gujarat on how community worked with the GPCB in monitoring the implementation of Guidelines on Coal Handling issued by GPCB in 2010. In ten cases, these guidelines have been successfully followed to reduce the impacts arising out of coal handling in ports, coke oven plants, power plants and during transportation.

**2. Transportation of minerals**

(i) All the transport vehicles when loaded with minerals for any kind of transport should be sprinkled with water and sealed tightly with sheets or any other air sealed material so as to ensure that there will be no spillage of minerals.

(ii) Poor conditions of roads are found to have direct linkage with the air pollution levels.[2]The access roads from the mining areas should be concretised. If these roads are not concretised, then measures should be taken to ensure sprinkling of water on these roads by the project proponents. For project proponents having mining leases for more than 30 years, these roads should be compulsorily concretised. As the mining companies are there for a longer period, it will be financially more viable for the company as well as environmentally sound to concretize roads and minimize the environmental impacts.

(iii) The project proponent should mandatorily plant trees of the access roads so as reduce the impacts in case mineral dust falls from the transport vehicles. The trees that are to be planted should be based on the soil type. For example in the coastal areas Sharu (CasuarinaEquisetifolia) can be planted, Piludi (Salvadora) which has a higher survival rate could also be planted[3].The selection of the species for plantation can be done under the

[1]http://www.gpcb.gov.in/Portal/News/121_1_343763.pdf
[2] Nair, A. (2016. September 16).Pollution Control Board report: Air pollution on the rise in Gujarat, both in cities and industrial clusters. *The Indian Express*. Retrieved fromhttp://indianexpress.com/article/india/india-news-india/pollution-control-board-report-air-pollution-on-the-rise-in-gujarat-both-in-cities-and-industrial-clusters-3012467/
[3]RajendrasinhMansinhKashtrya v Gujarat Pollution Control Board &Ors, NGT 2013

supervision of a multi village level committee along with the relevant government departments like forest, horticulture.

(iv) Usually the transportation of minerals is done during night time, which makes it difficult to check if the rules are being adhered to. It should be made mandatory that the transportation of minerals occurs during day time, where the plying of the transport vehicles should be staggered, so as to avoid traffic jams. The number of transport vehicles that should ply within a time period can be decided upon after conducting studies by a committee that would be composed of the members from GPCB, the State Transport Department, atleast three local community representatives, members from the local bodies like the nagar palika, gram panchayat.

(v) The vehicles carrying the minerals should not be overloaded, as per the parameters laid down by the Ministry of Road Transport and Highways[4]. Overloading of trucks increases pollution levels[5], it has also been banned by the Supreme Court in 2005[6].

(vi) Electronic Weigh Bridges, should weigh at every centre from where the mineral is loaded and transported, so as to check the overloading of the trucks. Digital data on weight should be directly linked with PCB, which should be made available to the general public.

**3. Storage of minerals**

In this section the storage of minerals includes storage at the place of mining, when used as a raw material, at stockyards, ports, during transit.

(i) The storage of any kind of mineralat the place of mining, where used as a raw material, at ports during transit, for transportation of theses mineralsshould be done in covered structures.Further the storage of the mineral should take place at a height below the level of the wall of the storage area.

(ii) There should be a wall of 9m height to check the escape of dust, as even prescribed in the Coal Handling Guidelines issued by the GPCB on further areas while storage, transport or any related movement.

(iii) Green belts should be developed around the place where the mineral is stored in a radius of atleast 15 m to check the dust pollution due to stronger breeze. The availability of the land for this green belt should be checked before the consent is given.

(iv) Surface water (rains, streams, creeks etc) should be intercepted and diverted from entering the mining site to reduce potential for water contamination. [7]

(v) Rain water should be captured through use of liners and pipes and stored in a tank to prevent the potentially contaminated water from entering groundwater or flowing off site.It needs to be ensured that the water is either used for sprinkling or reused for the company's purposes after treating this water.

---

[4]National Highway Authority letter (2015, March 27) Retrieved from http://nhai.org.in/spw/CorrespondenceIssues/nhai%20l.no.2663..pdf

[5]Overloaded trucks cause more pollution, accidents. (2014, April 29). *The Hindu*. Retrieved fromhttp://www.thehindu.com/todays-paper/tp-national/tp-newdelhi/overloaded-trucks-cause-more-pollution-accidents/article5958270.ece

[6]Government to penalise truck overloading. (2014, July 28). *India Water Portal*.http://indiatransportportal.com/government-to-penalise-truck-overloading-27688

[7]http://www.miningfacts.org/Environment/How-is-water-managed-and-treated-in-mining/ , Lottermoser, B., *Mine Wastes: Characterization, Treatment and Environmental Impacts*, 2012, Springer: New York



(vi) Detailed studies should be conducted by a committee comprising of members from GPCB, atleast 3 local community representatives, local authoritiesto determine the optimum distancefrom farmlands and human settlements. Until such studies are conducted, distances as prescribed under the Coal Handling Guidelines should be used. The minerals should be stored at a distance of atleast 250m from farmlands and human settlements. Any other mining and related activities should be taken place at not less than 500m radius from any water body, historic places, religiously important places, railway lines, schools, universities, colleges, expressway both national and state ways, rivers, etc.

(vii) Water sprinklers/dry fogging system should be installed in the mineral storage areas by the project proponents.

**4. Others**

(i) There should compulsorily be dust controlling units installed in the processing units.

(ii) All the mining rejects should be dumped in one decided place by following the prescribed guidelines that are issued by the State Environment Impact Assessment Authority (SEIAA) or the GPCB.

(iii) It should be ensured that the mine operators all plant grasses, plants and trees in these dumps as per the condition that is given in the Environment Clearance condition prescribed by the SEIAA.

We are willing to share our experience in handling close to 10 cases in Gujarat related to mineral handling with the GPCB. We are also willing to work together with the GPCB in the framing of these guidelines.

Sincerely,


Bharat Patel
Program Manager

Vijay Rathod
Enviro-Legal Coordinator

Hasmukh Dhumadiya
Envrio-Legal Coordinator

Ker Jayendrasinh
Enviro-Legal Coordinator

Kanchi Kohli
Legal Research Director

# ದೂರು ಪತ್ರದ ಮಾದರಿ

Jadeja Natubha Rams
At. Lifra
Ta. Mundra
Dist. Kutch
Date:- 15/09/2014

Shri .V. Thirupugaz
Development Commissioner ( Rural Dev. )
Dr. Jivraj Maheta Bhavan,
Gujarata S[illegible]e
Block No. 1[illegible]3, Gandhinagar

Dear Mr. Thirupugaz ,

We the under signed people belong to Lifra village of Kutch district. Our village has a population of about 700, most of which are traditionally engaged in occupation of agriculture and animal husbandry. We are able to sustain ourselves and support our families through these occupations. Sir, we would like share with you that we have been using a piece of common land (called'gauchar' locally) at Survey N. 141/ 5 for more than 50 years for grazing our cattle. This common land is critical for us because our animals graze here, we don't have to purchase fodder for them from the market. This reduces our cost and makes animal husbandry a livelihood alternative for us. In our village we have been maintaining peace and harmony, acknowledging and respecting rights of all communities of the village.

Sir, here, we would like to draw your attention to a recent development which has put our traditional occupation under threat. This common land has been allocated to private companies namely (1) Rajendrasinhji Svaraji (2) Gurukrupa mines and co. Ltd. on 25th October 2012 for mining black trap. Apart from being used for animal grazing, there is a check dam constructed by the Gujarat government and a natural water body for the use of cattle. Nine more mining lease proposals for common lands from Lifra village are pending to be considered. Once mining starts, we will not able to graze our cattle there and looking to survive, we may have to move to a new location. It means more than 70% of the families of our village will have to migrate .

Here we would like to share with you that we have already written to the Mamlatdar and District Collector but have not received any satisfactory response. While this problem was still looming large on us and we were looking to resolve it, we came to know of the judgment of the Supreme Court of India- Civil Appeal No. 1132/2011 @ SLP(C) No. 3109/2011 **{arising out of Special Leave Petition (Civil) CC No. 19869 of 2010; Jaspal Singh & Others V/s State of Punjab & Others}. It states:**

*"In many states Government orders have been issued by the State Government permitting allotment of Gram Sabha land to private persons and commercial enterprises on payment of some money. In our opinion all such Government orders are illegal, and should be ignored."*

*"We give directions to all State Governments in the country that they should prepare schemes of eviction of illegal/unauthorized occupants of Gram Sabha/Gram Panchayat/Poramboke/Shamlat land and these must be restored to the Gram Sabha/Gram Panchayat for the common use of villagers of the village. For this purpose chief secretaries of all State Governments/Union Territories in India are directed to do the needful, taking the help of other senior officers of the Governments... Regularization should only be permitted in exceptional cases e.g. where lease has been granted under some Government notification to landless labourers or members of Scheduled Castes/Scheduled Tribes, or where there is already a school, dispensary or other public utility on the land."*

After this Judgment, the office of the Development Commissioner, Gujarat, passed a circular on 4th March 2011stating that powers of removing encroachments on common land are deligated to the Panchayats.

It should be noted that the above-mentioned leases were sanctioned in October 2012 when the Supreme Court Judgement had already been given in 2011. Hence, these leases have been granted without taking any acknowledgement of the Supreme Court Judgement. There has been non-compliance of the order of the Supreme Court and the circular from the Development Commissioner's office.

Sir, we request you to take action in the matter. We would also like to present before you our expectation that:

- already sanctioned mining leases of the Gauchar land in Lifra village be cancelled, and
- no more new leases or land allocations be granted for Gauchar land from Lifra village to private parties in future.

We sincerely hope you will pay attention to our concerns and take immediate action in the matter.

Thanking you

1. JADEJA NATUBHA RAMSANGJI .................. –
2. JADEJA JALUBHA HATHISANGJI .................. –
3. JADEJA CHATURSINH VAGHJI .................. –
4. JADEJA BHUPATSINH MADHUBHA .................. – B.M.
5. JADEJA MAHIPATSINH MADHUBHA .................. – M.M.
6. JADEJA SVAROOPSINH SOMBHA .................. –

<u>C.C.:-</u>

**1- District Collector Kutch - Bhuj .**

**2-Mamlatdar Mundra , Kutch**

**<u>Enclosed:</u>**

**1- Satellite Image with Lat. Long. ( Google earth )**

**2- Revenue Map with survey number**

**3- Copy of Memorandum submitted to the District Collector Kutch .**

# ಅನುಬಂಧ 3

## ಪೂರಕ ಕಾನೂನು ತಜ್ಞರ / ಕಾರ್ಯಕರ್ತರ ತರಬೇತಿಗಾಗಿ ಮಾದರೀ ಕಾರ್ಯಸೂಚಿ

**NAMATI-CPR EJ PARALEGAL RETREAT**
**ENVIRONMENTAL JUSTICE AND DELIBERATIVE DEMOCRACY**
**5th to 9th February, 2017**

**Day 1 (5th)**

**9:00-11:00: Introductions**

**11:00-1:00**
**WHAT HAVE OUR 2016 CASES TAUGHT US?**
*(Presentations by teams on achievements, failures, confusions and challenges)*

**1:00-2:00: LUNCH**

**2:00-4:00**
**ASSESSMENT OF OUR WORK:** *(On cases; clients: sites and addressing the compliance gap)*

**4:00-5:30**
**WHAT IS EJ? HOW IS IT DIFFERENT FROM ENVIRONMENTALISM?**

**5:30-6:30: Games**

**6:30-8:30: Movie**

**Day 2 (6th)**

**9:00-10:30**
**GROUP EXERCISE: UNDERSTANDING ENVIRONMENTAL JUDGEMENTS FROM THE SUPREME COURT AND THE NGT**

**10:30-1:00**
**WHAT ARE REMEDIES FOR EJ?**

**1:00-2:00: LUNCH**

**2:00-3:00**
**EJ CASE FORM CHANGES and CLIENT FOLLOW UP FORM**

**3:00-4:00**
**HOW TO GET FROM CASES TO POLICY?**

**4:00-5:00**
**GROUP EXERCISE:** The government wants recommendations on Section 10 of the EIA Notification. Teams to prepare submissions
*(The Minister of Environment should be happy with the content and the Chief Secretary must be convinced that it can be implemented)*

**5:00-7:00: GAMES**

**7:00-8:30: MOVIE**

## Day 3 (7th)

**9:00-11:00**
**AISE TAISE DEMOCRACY: STATE-CITIZEN RELATIONSHIP:** *Team Presentation*

**11:00-1:00**
**MODELS OF SOCIAL ACTION: POWER AND AGENCY:** *Team Presentation*

**1:00-2:00: LUNCH**

**2:00-3:30**
**EXERCISE:** Who are you inspired by? What is it about the person that inspires you?

**3:00-5:30**
**MODELS OF DELIBERATION: HOW TO TAKE DECISIONS COLLECTIVELY?**

**5:30-7:00: GAMES**

**7:00- 8:30: MOVIE**

## Day 4 (8th)

**9:00-11:00**
**GROUP EXERCISE: PARLIAMENTARY DEBATE ON LAW MAKING:**

**11:00-1:00**
**INDIA'S ENVIRONMENTAL LAWS: A SHORT HISTORY**
**HIERARCHY OF LAWS**

**1:00-2:00: LUNCH**

**2:00-4:30**
**UNDERSTANDING EJ WORK IN KENYA AND ZIMABABWE**

**4:30-6:00**
**MOZAMBIQUE'S HEALTH ADVOCATES**

**6:30 onwards: DANCE PARTY!**

## DAY 5 (9th)

**10:00-11:30**
**Surprise session**

**12:00 onwards departures**



ಉತ್ತರ ಕನ್ನಡ ಜಿಲ್ಲೆ, ತದಡಿ ಬಂದರಿನ ಮೀನುಗಾರಿಕೆ ಇಳಿಗಟ್ಟೆ - ಕರ್ನಾಟಕ ರಾಜ್ಯ ಸರಕಾರವು ಈ ಸ್ಥಳದಲ್ಲಿ ಒಂದು ದೊಡ್ಡ ವಾಣಿಜ್ಯ ಬಂದರು ಕ್ಷೇತ್ರವನ್ನು ನಿರ್ಮಿಸುವ ಯೋಜನೆಯನ್ನು ಪ್ರಸ್ತಾಪಿಸಿರುತ್ತದೆ.